ದುಡಿವ ಜನರ ಪ್ರಾಣ ಮಿತ್ರ

# ಐಕ್ಯರಂಗ

ಸಂಪುಟ 25 ಸಂಚಿಕೆ 44
ನವಂಬರ್ 2, 2003 ಬೆಲೆ ರೂ. 3.00



## ಹಸಿವಿನ ಸಾವುಗಳು
## ಸರಣಿ ಆರಂಭವೇ?




### ಸಿಐಟಿಯು ಸಮ್ಮೇಳನ

## ಧಾಳಿಗಳೆದುರು ನಿಲ್ಲದ ಸಮರ
## ಹೊಸ ವಿಭಾಗಗಳತ್ತ ವಿಸ್ತಾರ


## ಭಾರತ-ಪಾಕ್ ಸಂಬಂಧ
## ಬೇಕು ಪ್ರಾಮಾಣಿತೆಯ ಯತ್ನ



## ಮದರ್ ತೆರೆಸಾ :
## ಸಂತ ಪದವಿಯ 'ಪವಾಡ'?!

## ಕಡಲ ಅಂಚಿಗೆ ನೂಕಲ್ಪಟ್ಟ
## ಅರಣ್ಯ ಅತಿಕ್ರಮಣದಾರರು

# ವಿಮೋಚನಾ ಸಮರದಲ್ಲಿ....



## ಮೇಜರ್ ಜಯಪಾಲ್ ಸಿಂಗ್

ಆತ್ಮಕಥನ 49

ಕಳೆದ ಸಂಚಿಕೆಯಲ್ಲಿ ಕಾರ್ಮಿಕ ವರ್ಗದ ಶಿಕ್ಷಣ, ಆದೇಶವನ್ನು ಯಾಂತ್ರಿಕವಾಗಿ ಪಾಲಿಸಿದರೆ ಅಪಾಯ ಶತಸಿದ್ಧ ಎಂದು ವಿಶ್ಲೇಷಿಸಿದ ಕಿರಿಯ ಸಂಗಾತಿ, ಜೇನು ಬೇಟೆಗಾರನ ಮಾರ್ಗದರ್ಶನದಲ್ಲಿ ಮುನ್ನಡೆದ ಹೋರಾಟಗಾರರು, ಬಂಡೆಯೊಂದರ ಸಂದಿಯಲ್ಲಿ ಆಶ್ರಯ ಪಡೆದು, ಮುನ್ನುಗ್ಗಿದ ವೀರರು ಮತ್ತು ಬಿರುಗಾಳಿಯನ್ನು ವರವೆಂದು ಸ್ವಾಗತಿಸಿದ ರೈತರು, ಈ ಬಗ್ಗೆ ಓದಿರುವಿರಿ. ಮುಂದೆ.....



ಕನ್ನಡಕ್ಕೆ: ವಿಶ್ವ ಕುಂದಾಪುರ

# ವೈರಿ ವಿರುದ್ಧ ಹವಾಮಾನದ ಅಸ್ತ್ರ

ಮಳೆ- ಬಿರುಗಾಳಿಯಿಂದ ಅವರಿಗೆ ಸಂಕಷ್ಟ ಉಂಟಾಗಿದ್ದು, ಸುಳ್ಳಲ್ಲ. ಅವರ ತಲೆಯ ಮೇಲೆ ಮಳೆ ಸತತವಾಗಿ ಸುರಿಯಿತು. ಶಿಬಿರಗಳಾಗಲೀ ಗುಡಿಸಲುಗಳಾಗಲೀ ಇರಲಿಲ್ಲ. ಗುಹೆಗಳು ಯಾವಾಗಲೂ ಸಿಗುತ್ತಿರಲಿಲ್ಲ. ಮನೆಯಲ್ಲಿ ತಯಾರಿಸಿದ ಹೊದಿಕೆಗಳಷ್ಟೇ ಅವರ ಬಳಿ ಇದ್ದದ್ದು. ಮಳೆ -ಗಾಳಿ ಬಂದಾಗ ಅವರು ಅದನ್ನೇ ತಲೆಯ ಮೇಲೆ ಹಿಡಿಯುತ್ತಿದ್ದರು. ಒದ್ದೆಯಾದ ಅದನ್ನು ಮಡಚಿ ನೀರಿನಿಂದ ಒದ್ದೆಯಾದ ಮೊಣಕಾಲಿಗೆ ಸುತ್ತಿಕೊಂಡು ಕೆಸರಿನಲ್ಲಿ, ಬಂಡೆ ಮೇಲೆ ಹಾಗೂ ಕೆಲವೊಮ್ಮೆ ನೀರಿನ ತೊರೆಯಲ್ಲಿಯೇ ಸ್ವಲ್ಪ ಸಮಯ ನಿದ್ದೆ ಮಾಡುತ್ತಿದ್ದರು. ಅನೇಕ ಮಂದಿ ಮಲೇರಿಯಾದಿಂದ ನಡುಗಿದರು, ಹಲವರ ಕಾಲುಗಳಿಂದ ಕೀವು ಸೋರುತ್ತಿತ್ತು. ಪ್ರತಿಯೊಬ್ಬರೂ ಅನಾರೋಗ್ಯಪೀಡಿತರಾಗಿದ್ದರು. ಆದರೂ ಬಿರುಗಾಳಿ ಮತ್ತು ಮಳೆಯುನ್ನು ಅವರು ಕೃತಜ್ಞತೆಯಿಂದ ಸ್ವಾಗತಿಸುತ್ತಿದ್ದರು.

ಅವರು ಯಾವತ್ತೂ ಗುಡಿಸಲುಗಳು ಅಥವಾ ಬುಡಕಟ್ಟು ಬಸ್ತಿಗಳಲ್ಲಿ ನಿಲ್ಲಲಿಲ್ಲ. 'ಜನರಿಗೆ ಮನೆಗಳಲ್ಲಿ ಸ್ಥಳವೇ ಸಾಕಾಗುತ್ತಿರಲಿಲ್ಲ. ನಾವು ಅಲ್ಲಿಗೆ ಹೋಗಿ ತೊಂದರೆ ಕೊಡುವುದು ಸರಿಯಲ್ಲ. ಅದಕ್ಕಿಂತ ಹೆಚ್ಚಾಗಿ ನಾವು ಅಲ್ಲಿ ಹೋಗುವುದರಿಂದ ಅವರು ಶತ್ರುಗಳ ಕೆಂಗಣ್ಣಿಗೆ ಗುರಿಯಾಗುತ್ತಾರೆ' - ಎಂದು ಪ್ರಾದೇಶಿಕ ಸಮಿತಿ ಕಾರ್ಯದರ್ಶಿ ನನಗೆ ಹೇಳಿದರು.

ಗುಡಾರಗಳು, ಮಣ್ಣಿನ ಗುಡಿಸಲುಗಳು ಅಥವಾ ಜಲ-ನಿರೋಧಕಗಳು ಇವ್ಯಾವುವೂ ಇಲ್ಲದೆ; ತಮ್ಮ ಭೇಟಿಯಿಂದಾಗಿ ಜನರಿಗೆ ತೊಂದರೆ ಆಗಬಾರದೆಂಬ ಮಹದುದ್ದೇಶ ಹೊಂದಿದ ಈ ಧೀರ ಯುವಜನರು ಎಲ್ಲ ರೀತಿಯ ಬಿರುಗಾಳಿಯನ್ನು ದಿಟ್ಟತನದಿಂದ ಎದುರಿಸಿದರು. ಎಂಥ ಪ್ರತಿಕೂಲ ಹವಾಮಾನಕ್ಕೂ ಜಗ್ಗಲಿಲ್ಲ.

ನಾಲ್ಕು ಮಳೆಗಾಲ ಹಾಗೂ ಚಳಿಗಾಲಗಳು ಇವರ ತಲೆ ಮೇಲೆ ಹಾದುಹೋದವು. ಚಳಿ, ಮಳೆ, ಬಿರುಗಾಳಿಯಿಂದ ರಕ್ಷಿಸಿಕೊಳ್ಳಲು ಮನೆ, ಬೆಚ್ಚನೆಯ ಗೂಡು, ಒಣ ಹಾಸಿಗೆ ಮನುಷ್ಯನಿಗೆ ಅಗತ್ಯ ಎಂಬುದನ್ನೇ ಇವರು ಮರೆತಿದ್ದರು. ಇಷ್ಟೆಲ್ಲಾ ಇದ್ದರೂ ಬಿರುಗಾಳಿ ತಮಗೆ ಆಶೀರ್ವಾದವೆಂದೇ ಅವರು ತಿಳಿದಿದ್ದರು. ಅದನ್ನು ಎದುರಿಸಲು ಇವರಷ್ಟು ಚೆನ್ನಾಗಿ ಸಿದ್ಧರಾಗಿದ್ದವರು ಬೇರೆ ಯಾರೂ ಇರಲಾರರು.

ಹವಾಮಾನದ ಬಗೆಗಿನ ಅವರ ಧೋರಣೆ ಯಾವುದೇ ಬೆಲೆ ತೆತ್ತಾದರೂ, ಪ್ರಾಣದ ಹಂಗನ್ನೂ ಲೆಕ್ಕಿಸದೆ, ತಮ್ಮ ಬಂಧುಗಳ ಪ್ರಾಣವನ್ನು ಲೆಕ್ಕಿಸದೆ, ಶತ್ರುಗಳನ್ನು ಸದೆಬಡಿಯಬೇಕೆಂದು ಅವರ ದೃಢ ವಿಶ್ವಾಸದ ಗುರಿಯ ಫಲವಾಗಿತ್ತು. ಹೀಗಾಗಿ ಉರಿಯುವ ಬೆಂಕಿ, ಮುಳ್ಳುಗಳ ಮೇಲೆ ಹಾಕಿ ಹಿಂಸೆ, ರಕ್ತಕಾರಿ ಸಾಯುವಂತೆ ಮಾಡುವುದು- ಇವೆಲ್ಲವನ್ನು ಸಹಿಸುವ ದೃಢತೆಯುಳ್ಳ ಅವರಿಗೆ ಈ ಗಾಳಿ, ಮಳೆ, ಬಿರುಗಾಳಿ ಯಾವ ಲೆಕ್ಕವೂ ಆಗಿರಲಿಲ್ಲ.

ತಮ್ಮ ಜನರಿಗೆ ಸೇವೆ ಮಾಡಬೇಕೆಂಬ ಅವರ ದೃಢನಿಶ್ಚಯ ಹಾಗೂ ಅವರ ಉದ್ದೇಶದ ನ್ಯಾಯಸಮ್ಮತೆಯ ಪ್ರತೀಕವಾಗಿತ್ತರು. ಈ ಅಗತ್ಯಗಳು ಹಾಗೂ ವಿಶ್ವಾಸವೇ ಘೋರ ರೀತಿಯಲ್ಲಿ ವಾತಾವರಣವನ್ನು ಎದುರಿಸುವ ಮತ್ತು ಶತ್ರುಗಳ ಅಮಾನವೀಯ, ಬರ್ಬರ ಹಿಂಸೆಯನ್ನು ತಾಳಿಕೊಳ್ಳುವ ಸಾಮರ್ಥ್ಯವನ್ನು ಅವರಿಗೆ ತಂದುಕೊಟ್ಟಿತ್ತು.

ಎಲ್ಲ ಗಾಳಿಯಂತೆ ಈ ಬಿರುಗಾಳಿಯೂ ನಿಂತಿತು. ತೊಯ್ದು ತೊಪ್ಪೆಯಾಗಿದ್ದ ನಾವು ಪುನಃ ಮುಂದೆ ಸಾಗಿದೆವು. ಬಿರುಗಾಳಿಯಿಂದಾಗಿ ಆಗಲೇ ತಡವಾಗಿ ಹೋಗಿತ್ತು. ಸಮಯಕ್ಕೆ ಸರಿಯಾಗಿ ತಲುಪಿ ಕಾಯುತ್ತಿರುವ 'ಸಂಪರ್ಕ' ವನ್ನು ಭೇಟಿಯಾಗಲಿಕ್ಕಾಗಿ ನಾವು ದೊಡ್ಡ ದೊಡ್ಡ ಹೆಜ್ಜೆಯಿಟ್ಟು ನಡೆಯ ತೊಡಗಿದೆವು. ತುಂಬಾ ಕಷ್ಟದ, ಆದರೆ ಸಮೀಪದ ಹಾದಿಯಲ್ಲಿ ನಾವು ದಾರಿ ಸವೆಸತೊಡಗಿದೆವು.

ಸೂರ್ಯ ಮೊದಲ ಕಿರಣ ಆಗಷ್ಟೇ ಕಾಣಿಸುತ್ತಿತ್ತು. ಹೆಗಲ ಮೇಲೆ ಕಂಬಳಿ, ರೈಫಲ್‌ಗಳಿಂದ ಸಜ್ಜಿತರಾದ ಇಬ್ಬರು 'ಗೆರಿಲ್ಲಾ'ಗಳು ದೊಡ್ಡ ಬಂಡೆಯೊಂದರ ಹಿಂದಿನಿಂದ ಪ್ರತ್ಯಕ್ಷರಾದರು. ಸ್ವಾಗತದ ನಗು ಅವರ ಬಿಳಿಯ ಹಲ್ಲುಗಳನ್ನು ಪ್ರದರ್ಶಿಸಿದವು. ಮುಷ್ಟಿ ಮೇಲಕ್ಕೆತ್ತಿ ರೆಡ್ ಸೆಲ್ಯೂಟ್ ಹೊಡೆದರು.

ಸಂಪರ್ಕ ಸಿಕ್ಕಿದ್ದಕ್ಕಾಗಿ 'ಜೇನುಗಾರ'ನಿಗೆ ಅಪಾರ ಸಂತೋಷವಾಯಿತು. ಸಂಪರ್ಕವೇನಾದರೂ ಸಿಗದೆ ತಪ್ಪಿ ಹೋಗಿದ್ದರೆ ಮುಂದಿನ 'ಸಮಾವೇಶ'ದಲ್ಲಿ ಆತ ಭಯಂಕರ ಟೀಕೆ ಎದುರಿಸಬೇಕಾಗುತ್ತಿತ್ತು.

ಆ ಬಂಡೆಯ ಹಿಂದಿನ ಬೆಟ್ಟದ ಮೇಲೆ ಆ ದಿನ ಕಳೆಯಬೇಕಿತ್ತು. 2000 ಅಡಿ ನಡೆದು ಬೆಟ್ಟದ ತುದಿಯನ್ನು ತಲುಪಬೇಕು. 20 ಮೈಲಿಗಿಂತ ಹೆಚ್ಚು ದೂರ ನಡೆದು ರಾತ್ರಿಯಲ್ಲಿ ಒಂದು ನಿಮಿಷವೂ ನಿದ್ದೆಯಿಲ್ಲದೆ ಕಳೆದ ಆ ಮಳೆ ಗಾಳಿಯ ದುಃಸ್ವಪ್ನದ ರಾತ್ರಿ ಪ್ರಯಾಣದ ನಂತರ ಮತ್ತೆ ಇದೀಗ ಪೊದೆಗಳುಳ್ಳ ಕಡಿದಾದ ಬೆಟ್ಟವನ್ನು ಹತ್ತುವುದು ಸ್ವಾಗತಾರ್ಹ ಸಲಹೆಯಾಗಿರಲಿಲ್ಲ. ಆದರೆ ನಾವು ಬೆಟ್ಟವನ್ನು ಹತ್ತಿಯೇ ತೀರಿದೆವು. 'ಗೆರಿಲ್ಲಾ' ನಮಗೆ ಮಾರ್ಗದರ್ಶಕರಾಗಿದ್ದರು.

ಕಡಿದಾದ ಬೆಟ್ಟವನ್ನು ಹತ್ತುತ್ತಿದ್ದಂತೆ, ರೈತಾಪಿ ಬದುಕಿನ ಕಟುವಾಸ್ತವಗಳು ಒಂದೊಂದಾಗಿಯೇ ನನಗೆ ಅರಿವಾಗತೊಡಗಿತು. ಕಷ್ಟದ ಜೀವನಕ್ಕೆ ಬಳಸುವ ಎಳಸು ಕಾಲಿನ ಈ ಹುಡುಗರು ಈ ಕಟುವಾಸ್ತವದ ಪ್ರತೀಕಗಳು. ಮುಂದಿನ ಕೆಲವು ತಿಂಗಳು ಈ ವಾಸ್ತವತೆಯ ಇನ್ನಷ್ಟು ಚಿತ್ರಣ ನೀಡಿದವು. ಈ ಜೀವನಕ್ಕೆ ಈ ಹುಡುಗರು ಹೇಗೆ ಪ್ರತಿಕ್ರಿಯಿಸುತ್ತಾರೆ ಎನ್ನುವುದನ್ನು ನಾನು ನಿರ್ದಿಷ್ಟವಾಗಿ ಪರಿಶೀಲಿಸಿದೆ.

(ಮುಂದುವರಿಯುವುದು)

---

ನಮ್ಮ ನಿಮ್ಮ ಸಂವಾದ

## ಬೆಂಗಳೂರು-ಮಂಗಳೂರು ರೈಲು ಮಾರ್ಗ:

# ಆಶ್ವಾಸನೆಗಳಿಗೆ ಕೊನೆ ಇಲ್ಲ

ಪ್ರಖ್ಯಾತ ಸಾಹಿತಿ ನಿರಂಜನರವರ ಲೇಖನಗಳ ಸಂಗ್ರಹ ಮಾಲೆ 'ದಿನಚರಿ' ಓದುತ್ತಾ ಕುಳಿತಾಗ ಮನ ಸೆಳೆದದ್ದು 'ಬಡತನ, ಸಿರಿತನ' ಲೇಖನದ ಪ್ರಥಮ ಪ್ಯಾರಾ -

"ಕಾಲು ಶತಮಾನದ ಬಳಿಕ, ಹಿಂದೆ ನಡೆದ ದಾರಿಯನ್ನು ಮತ್ತೊಮ್ಮೆ ತುಳಿದು ಬಂದೆ.

ಬೆಂಗಳೂರಿನಿಂದ ಮಂಗಳೂರಿಗೆ; ಅಲ್ಲಿಂದ ಕಾಸರಗೋಡಿನ ದಾರಿಯಾಗಿ ನೀಲೇಶ್ವರಕ್ಕೆ; ಆ ಊರಿನಿಂದ ಕಣ್ಣಾನೂರಿನ ಹಾದಿ ಹಿಡಿದು ಕೊಡಗು ಸೀಮೆಗೆ; ಮೈಸೂರನ್ನು ಮುಟ್ಟಿ ಮರಳಿ ಬೆಂಗಳೂರಿಗೆ, ಮಲೆನಾಡು ಬಯಲು ಸೀಮೆಗಳ ವಿಸ್ತಾರವಾದೊಂದು ವೃತ್ತಕ್ಕೆ ಇದು ಪ್ರದಕ್ಷಿಣೆ.

ಬೇಸಗೆಯ ಕುಡಿನೋಟಕ್ಕೆ ಆಗಲೆ ತುತ್ತಾಗಿದ್ದ ಹವಾಮಾನ, ದುಡಿಯುವ ದೇಹಗಳಲ್ಲಿ ಇನ್ನೂ ಹೆಚ್ಚು ಬೆವರು; ದುಡಿಯದ ದೇಹದಲ್ಲೂ ಬೆವರು. ನೆಲದ ಮೈಯಿಂದಲೇ ಕಮಟುವಾಸನೆ ಹೊರಸೂಸಲು ಆರಂಭ.

ಹಸುರು ಹಾಸನ ಶ್ರಮಗೀತದ ಪಲ್ಲವಿ ನುಡಿಯುತ್ತದೆ. ಇದು ಹಾಸನ- ಮಂಗಳೂರು ರೈಲು ನಿರ್ಮಾಣದ ಸಂಕಟ. ಎಷ್ಟೊಂದು ಹಳೆಯ ರೆಕಾರ್ಡ್!. ವರ್ಷಗಳು ಉರುಳಿ ದಶಕಗಳಾದರೂ, ತಂತಿ ಕಡಿದು ತಂಬೂರಿ ಕಂಡಿಲ್ಲ ಎನ್ನುವುದೊಂದೇ ಸಮಾಧಾನ. ಇವತ್ತಲ್ಲ ನಾಳೆ ಈ ರೈಲು ದಾರಿ ಆಗಿಯೇ ಆಗುತ್ತದೆ. ಅಂದರೆ ? ಇನ್ನೆಷ್ಟು ವರ್ಷ ತಗಲಬಹುದು? ದಯವಿಟ್ಟು ಯಾರೂ ಈ ಪ್ರಶ್ನೆ ಕೇಳಬಾರದು. ಪ್ರಾಯಶಃ ಮಂಗಳೂರಿನ ಸರ್ವಋತು ಬಂದರು ಮುಗಿಯುವ ವೇಳೆಗೆ ಗಿರಿಕಾನನಗಳ ನಡುವಿನಿಂದ ಜುಕುಜುಕು ಬಂಡಿ ಸಾಗಬಹುದು.

ದಾರಿಯುದ್ದಕ್ಕೆ ಅಲ್ಲಲ್ಲಿ ಅಧಿಕಾರಿಗಳ ಗೂಡಾರಗಳು. ಭಾವಿ ರೈಲು ನಿಲ್ದಾಣಗಳ ಬೀಜಗಳು ಮೊಳಕೆಯೊಡೆದಿವೆ. ಗೊಬ್ಬರ ಹಾಕಿ ನೀರು ಹನಿಸುತ್ತಿರುವವರು ಮಲೆಯಾಳೀ ಕಾರ್ಮಿಕರು".

ನಿರಂಜನರು ಈ ಲೇಖನ ಬರೆದದ್ದು 2.3.1969 ರಂದು. ಅದಕ್ಕೂ ಮೊದಲೇ ಕಾಸರಗೋಡಿನ ಅವಿಭಜಿತ ಕಮ್ಯುನಿಸ್ಟ್ ಪಕ್ಷಕ್ಕೆ ಸೇರಿದ ಪಂಸತ್ ಸದಸ್ಯ ಸುಬ್ಬರಾವ್ (ಇತ್ತೀಚೆಗೆ ನಿಧನರಾದರು.) ರಾಜ್ಯಸಭೆಯಲ್ಲಿ ಈ ಕುರಿತು ಪ್ರಶ್ನಿಸಿದ ನಂತರ ನೀಲಿ ನಕ್ಷೆ ರಚನೆ ಆಗಿತ್ತು. ಆದರೆ ಇನ್ನೂ ಬೆಂಗಳೂರು-ಮಂಗಳೂರು ರೈಲಾಗಲೀ, ಹಾಸನ-ಮಂಗಳೂರು ರೈಲಾಗಲೀ ಚಾಲನೆ ಆಗಿಲ್ಲ. ಕುಳಕುಂದ ಶಿವರಾಯರು (ನಿರಂಜನ) ಕನಸು ಕಂಡ 34 ವರ್ಷಗಳ ನಂತರವೂ ರೈಲು ಮಾರ್ಗದ ಸ್ಥಾಪನೆ ಆಮೆ ಗತಿಯಲ್ಲಿ ಸಾಗುತ್ತಿದೆ.

25 ವರ್ಷಗಳ ಹಿಂದೆ ಅಂದರೆ 25.9.1978 ರಂದು ಅಂದಿನ ದಕ್ಷಿಣ ರೈಲ್ವೆಯ ಜನರಲ್

ಪುಟ 5 ಕ್ಕೆ

---

## ಇಂದಿಗಾಗಿ ನಾಳಿನ ಕಾರ್ಯಕ್ರಮಗಳು

- **ಅಕ್ಟೋಬರ್ 27 ರಿಂದ 31**
  ದೀಪಾವಳಿ ರಂಗೋತ್ಸವ
  ಡಾ. ಚಂದ್ರಶೇಖರ ಕಂಬಾರರ 5 ನಾಟಕಕಗಳ ಪ್ರಯೋಗ
  27 - ಮಹಾಮಾಯಿ
  28 - ಸಿರಿ ಸಂಪಿಗೆ
  29 - ಹುಲಿಯ ನೆರಳು, ಪ್ರತಿದಿನ ರವೀಂದ್ರ ಕಲಾಕ್ಷೇತ್ರದಲ್ಲಿ ಸಂಜೆ 7 ಗಂಟೆಗೆ
  30 - ಸಂಗ್ಯಾಬಾಳ್ಯಾ
  31 - ಸಾಂಬಾಶಿವ ಪ್ರಹಸನ, ಎಡಿಎ ರಂಗಮಂದಿರ, ಸಂಜೆ 7 ಗಂಟೆಗೆ
- **ಅಕ್ಟೋಬರ್ 28**
  ರೈತರ ದಿನ - ರಾಜ್ಯ ಸಮಾವೇಶ
  ಆಯ್ದ ರೈತ ಹೋರಾಟಗಾರರಿಗೆ ಸನ್ಮಾನ, ಶಹಾಪುರ, ಗುಲ್ಬರ್ಗಾ
- **ಅಕ್ಟೋಬರ್ 28 ರಿಂದ**
  ಗ್ರಾಮೀಣ ಕೃಪಾಂಕ ನೌಕರರ ಕ್ರಿಯಾ ಸಮಿತಿ, ಡಿವೈಎಫ್ಐ, ಎಸ್‌ಎಫ್ಐ ನೇತೃತ್ವದಲ್ಲಿ ವಜಾಗೊಂಡ ಗ್ರಾಮೀಣ ನೌಕರರ ಪುನರ್ ನೇಮಕ್ಕೆ ಒತ್ತಾಯಿಸಿ ಮುಖ್ಯಮಂತ್ರಿಗಳ ಮನೆ ಎದುರು ಆಮರಣಾಂತ ಉಪವಾಸ ಸತ್ಯಾಗ್ರಹ.
- **ನವೆಂಬರ್ 2**
  'ಮುಷ್ಕರ ಹಕ್ಕು' ಕುರಿತು ಸಮಾವೇಶ
  ಸ್ಥಳ: ಛೇಂಬರ್ ಆಫ್ ಕಾಮರ್ಸ್ ಸಭಾಂಗಣ, ಸೂಪರ್ ಮಾರ್ಕೆಟ್ ಬಳಿ, ಗುಲ್ಬರ್ಗಾ
  ಸಮಯ : ಬೆಳಿಗ್ಗೆ 11 ಗಂಟೆಗೆ
  ಅತಿಥಿಗಳು : ನಾಗಮೋಹನ ದಾಸ್, ಹೈಕೋರ್ಟ್ ವಕೀಲರು, ಬೆಂಗಳೂರು ಸಿ.ನಟೇಶನ್, ತಮಿಳುನಾಡು STFI ಕಾರ್ಯದರ್ಶಿ
- **ನವೆಂಬರ್ 4**
  ಭಾರತ ವಿದ್ಯುಚ್ಛಕ್ತಿ ನೌಕರರ ಒಕ್ಕೂಟ (EEFI ದಕ್ಷಿಣ ವಲಯ ಸಮಾವೇಶ,
  ಮುಖ್ಯಅತಿಥಿ: ಇ.ಬಾಲಾನಂದನ್, ಅಧ್ಯಕ್ಷರು, ಸಿಐಟಿಯು
  ಸ್ಥಳ: ಇಂಜಿನಿಯರ್ಸ್ ಅಸೋಸಿಯೇಷನ್ ಸಭಾಂಗಣ, ಕೆ.ಆರ್.ಸರ್ಕಲ್, ಬೆಂಗಳೂರು.
- **ನವೆಂಬರ್ 6 ರಿಂದ 9**
  ಡಿವೈಎಫ್ಐ ಅಖಿಲ ಭಾರತ ಸಮ್ಮೇಳನ, ಅಮೃತಸರ, ಪಂಜಾಬ್
- **ನವೆಂಬರ್ 10 ರಿಂದ 17**
  ರೇಷನ್ ಕಾರ್ಡ್ ನೀಡಿಕೆಗಾಗಿ ರೈತರ ಆತ್ಮಹತ್ಯೆ ಮತ್ತು ಹಸಿವಿನ ಸಾವುಗಳನ್ನು ತಡೆಯಲು ಒತ್ತಾಯಿಸಿ ಪ್ರಚಾಲಾಂದೋಲನ.
  ನವೆಂಬರ್ 10 ಉದ್ಘಾಟನೆ - ದಿನವಿಡೀ ಧರಣಿ
  ನವೆಂಬರ್ 17, ಸರ್ಕಾರಿ ಕಛೇರಿಗಳ ಪಿಕೆಟಿಂಗ್


## ಐಕ್ಯರಂಗ ಚಂದಾದಾರರಾಗಿ

| | |
|---|---|
| ವಾರ್ಷಿಕ | ರೂ. 150 |
| 6 ತಿಂಗಳು | ರೂ. 80 |
| ಆಜೀವ | ರೂ. 1000 |

# ವಿಶ್ವ ಸಾಮಾಜಿಕ ವೇದಿಕೆ : ರಾಜ್ಯ ಸಮ್ಮೇಳನಕ್ಕೆ ಸಿದ್ಧತೆ ಆರಂಭ

ಶ್ರೀಮಂತ ರಾಷ್ಟ್ರಗಳ ವೇದಿಕೆಯಾದ ವಿಶ್ವ ಆರ್ಥಿಕ ವೇದಿಕೆ (World Economi Forum) ಪ್ರತಿಯಾಗಿ 2001 ರಲ್ಲಿ ಬ್ರಿಜಿಲ್‌ನಲ್ಲಿ ರೂಪುಗೊಂಡ ಅಭಿವೃದ್ಧಿಶೀಲ ರಾಷ್ಟ್ರಗಳ ಜನಪರ ವೇದಿಕೆ ವಿಶ್ವ ಸಾಮಾಜಿಕ ವೇದಿಕೆ. ಇದರ ಮೂರು ಅಂತರ್‍ರಾಷ್ಟ್ರೀಯ ಸಮ್ಮೇಳನಗಳು ಬಹಳ ಯಶಸ್ವಿಯಾಗಿ ಬ್ರೆಜಿಲ್ ದೇಶದ ಪೋರ್ಟ್ ಅಲೆಗ್ರೆ ಪಟ್ಟಣದಲ್ಲಿ ಜರುಗಿ ವ್ಯಾಪಕ ಜನಮನ್ನಣೆ ಗಳಿಸಿವೆ. ಇದರನಾಲ್ಕನೇ ವಿಶ್ವ ಸಮ್ಮೇಳನ ಭಾರತದ ವಾಣಿಜ್ಯ ರಾಜಧಾನಿಯಾದ ಮುಂಬಯಿಯಲ್ಲಿ ಬರುವ ಜನವರಿ 2004 ರಲ್ಲಿ ನಡೆಯಲಿದೆ. ಹಾಗೆಯೇ ಕರ್ನಾಟಕ ರಾಜ್ಯ ಸಮ್ಮೇಳನ ರಾಜ್ಯದ ಎರಡನೇ ಪ್ರಮುಖ ಕೇಂದ್ರವಾದ ಹುಬ್ಬಳ್ಳಿಯಲ್ಲಿ ನವೆಂಬರ್ 29-30 ರಂದು ಜರುಗಲಿದೆ.

ಇದರ ಪೂರ್ವಬಾವಿಯಾಗಿ ಧಾರವಾಡ ಜಿಲ್ಲಾ ಸಮಾವೇಶ ಅಕ್ಟೋಬರ್ 12 ರಂದು ಧಾರವಾಡದಲ್ಲಿ ಡೈಟ್ ಸಂಸ್ಥೆಯ ಸಭಾಭವನದಲ್ಲಿ ಯಶಸ್ವಿಯಾಗಿ ನೆರವೇರಿತು. ಬುದ್ಧಿಜೀವಿಗಳು, ನೌಕರರು, ಕಾರ್ಮಿಕರು, ವೈದ್ಯರು, ಮಹಿಳೆಯರು, ವಿದ್ಯಾರ್ಥಿ-ಯುವಜನರು, ಸ್ವಯಂಸೇವಾ ಸಂಸ್ಥೆಗಳುಹಾಗೂ ಕಾರ್ಮಿಕ ಸಂಘಟನೆಗಳ ಪ್ರತಿನಿಧಿಗಳು, ರೈತರು ಮುಂತಾದ ವಿವಿಧ ಜನವರ್ಗಗಳ 164 ಜನ ಭಾಗವಹಿಸಿದ್ದ ಸಮಾವೇಶವನ್ನು ಸ್ವಾಗತಿಸಿದವರು ಆನಂದ ಹೆಗಡೆ, ಡಾ. ಕೆ.ರಾಘವೇಂದ್ರ ರಾವ್(ಭಾರತಕ್ಕಾಗಿ ಜನತೆ ವೇದಿಕೆ), ಎಂ.ಕೆ.ದೇಶಪಾಂಡೆ (ಎಲ್‌ಐಸಿ ನಿವೃತ್ತ



ನೌಕರರ ಸಂಘ) ಶೇಷು (ಬ್ಯಾಂಕ್ ನೌಕರರ ಸಂಘ) ಮತ್ತು ಆರ್.ಎಚ್.ಆಯಿ (ವಿಮಾ ನೌಕರರ ಸಂಘ) ಅವರನ್ನೊಳಗೊಂಡ ಅಧ್ಯಕ್ಷೀಯ ಮಂಡಳಿ ಸಮಾವೇಶ ಕಾರ್ಯಕಲಾಪವನ್ನು ನಡೆಸಿಕೊಟ್ಟಿತು.

ಸಮಾವೇಶದ ಆಶಯ ಭಾಷಣ ಮಾಡಿದ ಕರ್ನಾಟಕ ರಾಜ್ಯ ಸಾಮಾಜಿಕ ವೇದಿಕೆಯ ಧುರೀಣ ಮತ್ತು ಬೆಂಗಳೂರು ನ್ಯಾಷನಲ್ ಲಾ ಕಾಲೇಜಿನ ಪ್ರಾಧ್ಯಾಪಕರಾದ ಡಾ. ಬಾಬೂ ಮಾಥ್ಯೂ ವಿಶ್ವ ಸಾಮಾಜಿಕ ವೇದಿಕೆಯ ಧ್ಯೇಯೋದ್ದೇಶಗಳನ್ನು ವಿವರಿಸಿದರು. ಸಾಮ್ರಾಜ್ಯಶಾಹಿ ಜಾಗತೀಕರಣ ದಿಂದ ತೃತೀಯ ಜಗತ್ತಿನ ಜನಸಾಮಾನ್ಯರು ಅಪಾರ ಕಷ್ಟ-ನಷ್ಟಗಳನ್ನು ಅನುಭವಿಸುತ್ತಾ ಮೌನವಾಗಿ ಕುಳಿತಿಲ್ಲ. ವಿಶ್ವಬ್ಯಾಂಕ್-ವಿಶ್ವವ್ಯಾಪಾರ ಸಂಸ್ಥೆಗಳ ಜನವಿರೋಧಿ ನೀತಿಗಳಿಗೆ ತೀವ್ರ ಪ್ರತಿರೋಧ ವ್ಯಕ್ತಪಡಿಸುತ್ತಿದ್ದಾರೆ. ಇದರ ಫಲವೇ ವಿಶ್ವ ಸಾಮಾಜಿಕ ವೇದಿಕೆಯ ರಚನೆ. ಅದರ ಘೋಷಣೆ 'ಇನ್ನೊಂದು ಜಗತ್ತು ಸಾಧ್ಯ'. ಶೋಷಣಾ ರಹಿತವಾದ, ಜನಪರವಾದ ಸಾಮಾಜಿಕ-ಆರ್ಥಿಕ ವ್ಯವಸ್ಥೆಯನ್ನೊಳಗೊಂಡ ಹೊಸ ವಿಶ್ವದ ಕಲ್ಪನೆಯನ್ನು ಸಾಕಾರಗೊಳಿಸುವುದೇ ವಿಶ್ವ ಸಾಮಾಜಿಕ ವೇದಿಕೆಯ ಗುರಿ ಎಂದು ಪರಿಣಾಮಕಾರಿಯಾಗಿ ತಿಳಿಸಿದರು.

ಕರ್ನಾಟಕ ರಾಜ್ಯ ಸಾರಿಗೆ ನೌಕರ-ಕಾರ್ಮಿಕರ ಸಂಘದ ಗೌರವಾಧ್ಯಕ್ಷರಾದ ಡಾ. ಸಿದ್ದನಗೌಡ ಪಾಟೀಲ ಸಮಾವೇಶಕ್ಕೆ ಶುಭಕೋರಿ ಅಭಿವೃದ್ಧಿಶೀಲ ರಾಷ್ಟ್ರಗಳೆಲ್ಲ ಆರ್ಥಿಕ, ಸಾಮಾಜಿಕ ನೀತಿಗಳು ಜನಪರವಾಗಿದ್ದು ನಿಜವಾದ ಅಭಿವೃದ್ಧಿಯನ್ನು ಸಾಧಿಸುವತ್ತ ವಿಶ್ವ ಸಾಮಾಜಿಕ ವೇದಿಕೆಯ ಚಳುವಳಿ ಮುನ್ನಡೆಯಲೆಂದು ಹಾರೈಸಿದರು.

ನಂತರ ವಿವಿಧ ಗುಂಪುಗಳ ರಚನೆಯಾಗಿ ಈ ಗುಂಪುಗಳು ಜಾಗತೀಕರಣ, ಉದಾರೀಕರಣ, ಖಾಸಗೀಕರಣ ನೀತಿಗಳಿಂದಾಗಿ ದೇಶದ ರಾಜಕೀಯ, ಆರ್ಥಿಕ, ಸಾಂಸತಿಕ ರಂಗಗಳ ಮೇಲೆ ಮತ್ತು ಶಿಕ್ಷಣ, ಆರೋಗ್ಯ, ಉದ್ದಿಮೆ, ಕೃಷಿ ಹಾಗೂ ಮಹಿಳೆಯರ ಮೇಲೆ ಯಾವ ಪರಿಣಾಮ ಉಂಟಾಗಿದೆ ಎನ್ನುವುದನ್ನು ವಿವರವಾಗಿ ಚರ್ಚಿಸಿ ತಮ್ಮ ವರದಿ ಸಲ್ಲಿಸಿದವು.

ಇದೇ ಸಂದರ್ಭದಲ್ಲಿ ಧಾರವಾಡದ ಸಮುದಾಯ ತಂಡದಿಂದ 'ದೇಶ ಎತ್ತ ಸಾಗುತ್ತಿದೆ' ಎಂಬ ಬೀದಿ ನಾಟಕ ಪ್ರದರ್ಶನವಾಯಿತು.

ಹುಬ್ಬಳ್ಳಿಯಲ್ಲಿ ನಡೆಯಲಿರುವ ರಾಜ್ಯ ಸಮ್ಮೇಳನದ ರೂಪುರೇಷೆಗಳ ಕುರಿತು ಕರ್ನಾಟಕ ಸಾಮಾಜಿಕ ವೇದಿಕೆ ಸಂಚಾಲಕರಲ್ಲೊಬ್ಬರಾದ ದೇವದಾಸ್ ರಾವ್ ಮಾತನಾಡಿದರು. ಸುಮಾರು ಎಂಟು ಗಂಟೆಗಳ ಕಾಲ ನಡೆದ ಈ ಕಾರ್ಯಕ್ರಮ ಬಿ.ಎನ್.ಪೂಜಾರಿಯವರ ವಂದನಾರ್ಪಣೆಯೊಂದಿಗೆ ಮುಕ್ತಾಯವಾಯಿತು.


# 'ಶೂದ್ರ ಸಂಸ್ಕೃತಿಯು ಮಹಿಳಾ ಪರವಾದದ್ದು'

**ಉಡುಪಿಯ ಜಿಲ್ಲಾ ವಿಚಾರ ವೇದಿಕೆಯು ಪ್ರತಿತಿಂಗಳೂ ಒಂದು ಪ್ರಮುಖ ವಿಷಯದ ಬಗ್ಗೆ ಚಿಂತನ ಕಾರ್ಯಕ್ರಮವನ್ನು ನಡೆಸುತ್ತಾ ಬಂದಿದೆ. ಈಚೆಗಿನ 'ಪ್ರತಿಸಂಸತಿ' ಕುರಿತು ನಡೆದ ವಿಚಾರ ಮಂಡನೆ-ಸಂವಾದದಲ್ಲಿ ಮೂಡಿಬಂದ ಕೆಲವು ಅಭಿಪ್ರಾಯಗಳು ಇಲ್ಲಿವೆ.**

ಮೇಲ್ಜಾತಿಯವರು ಆಚರಿಸುತ್ತಿರುವ ವೈದಿಕ ಸಂಸ್ಕೃತಿಯು ಪಿತೃ ಮೂಲವಾಗಿದ್ದು ಮಹಿಳೆಯರನ್ನು ಶೋಷಣೆಗೊಳಪಡಿಸುತ್ತಿದೆಯಾದರೆ, ಕೆಳ ಜಾತಿಯವರು ಅನುಕರಿಸುತ್ತಿರುವ ಶೂದ್ರ ಸಂಸ್ಕೃತಿಯು ಮಾತೃ ಮೂಲವಾಗಿದ್ದು ಮಹಿಳಾ ಪರ ಒಲವುಳ್ಳದ್ದು ಆಗಿರುತ್ತದೆ ಎಂದು ಮಂಗಳೂರು ಕಾವೂರಿನ ಸರಕಾರಿ ಕಾಲೇಜಿನ ಪ್ರಾಂಶುಪಾಲ ಡಾ.ಗಣನಾಥ ಎಕ್ಕಾರು ಅವರು ಹೇಳಿದರು. ಅವರು ಉಡುಪಿ ಜಿಲ್ಲಾ ವಿಚಾರವಾದಿ ವೇದಿಕೆಯ ಆಸರೆಯಲ್ಲಿ ಜರುಗಿದ ಐದನೇ ತಿಂಗಳ ಚಿಂತನ ಕಾರ್ಯಕ್ರಮದಲ್ಲಿ ಪ್ರತಿ ಸಂಸ್ಕೃತಿ ಎಂಬ ವಿಷಯದ ಮೇಲೆ ಮಾತನಾಡುತ್ತಿದ್ದರು.

ಮುಂದುವರಿದು ಮಾತನಾಡಿದ ಅವರು, ವೈದಿಕ ಸಂಸ್ಕೃತಿಯು ಗಂಡ ಸತ್ತ ಮಹಿಳೆಯನ್ನು ...ರೆ ಬೋಳಿಸಿ ಕತ್ತಲೆಯ ಕೋಣೆಯತ್ತ ...ಬಿಡುತ್ತಡೆಯಾದರೆ, ಶೂದ್ರ ಸಂಸ್ಕೃತಿಯಲ್ಲಿ ಗಂಡ ಸತ್ತ ಮಹಿಳೆಯು ಮರು ವಿವಾಹವಾಗುವ ...ರ್ಯ ತೋರಿ ಮರುವಿವಾಹವಾಗುವ ಅವಕಾಶವಿರುತ್ತದೆ. ನಮ್ಮ ನೆಲದ ಕೆಳಜಾತಿಯವರು ಆಚರಿಸುತ್ತಿರುವ ಸಂಸ್ಕೃತಿಯು ಜನಪದದ ತಳಗಟ್ಟಿನಲ್ಲಿ ರೂಪುಗೊಂಡಿದ್ದಾಗಿದೆ, ವಾಸ್ತವಿಕತೆಗೆ ಸಮೀಪವಾದುದಾಗಿದೆ. ನಾವು ಕಲ್ಕುಡ-ಕಲ್ಲುರ್ಟಿ, ಕೊರಗ ತನಿಯ, ಕೋರ್ದಬ್ಬು, ಬೊಬ್ಬರ್ಯ ಮುಂತಾದ ಕತೆಗಳಿಂದ ಪ್ರತಿಭಾವಂತ, ಸ್ವಾಭಿಮಾನಿ ಶೂರರು ಕುತಂತ್ರಗಳಿಗೆ ಬಲಿಯಾದುದನ್ನು ಕಂಡುಕೊಳ್ಳಬಹುದಾಗಿದ್ದರೆ, ಸಿರಿ ಪಾಡ್ದನದಿಂದ ಹೆಣ್ಣೋರ್ವಳು ಶೋಷಣೆಯ ವಿರುದ್ಧ ಪ್ರತಿಭಟಿಸಿರುವುದನ್ನು ಕಾಣಬಹುದು.

ನಾವು ಇತಿಹಾಸವನ್ನು ನೋಡುವ ದೃಷ್ಟಿ ಭಿನ್ನವಾಗಿರುವುದರಿಂದ, ಬಹು ಸಂಖ್ಯಾತರ ಸಂಸ್ಕೃತಿಯು ಕಡೆಗಣಿಸಲ್ಪಟ್ಟು, ವೈದಿಕಪರ ಸಂಸ್ಕೃತಿಯನ್ನೇ ಹಿಂದೂ ಸಂಸ್ಕೃತಿ ಎಂದು ವಿಜೃಂಭಿಸಲ್ಪಡುವಂತಹ ತಪ್ಪು ಮಾಡುತ್ತಿದ್ದೇವೆ. ಶೂದ್ರ ಪರ ಸಂಸ್ಕೃತಿಯು ಬದಲಾವಣೆಗೆ ಹೊಂದಿಕೊಳ್ಳುವ ಗುಣವನ್ನು ಹೊಂದಿದ್ದು, ಸದಾ ಬದಲಾಗುತ್ತಾ ಸಾಗಿದ್ದರೆ, ವೈದಿಕ ಸಂಸ್ಕೃತಿಯು ಕೊಳಚೆ ನೀರಾಗಿ ನಿಂತಿದೆ. ಉದಾಹರಣೆಗೆ ಭೂತಾರಾಧನೆ, ಕಂಬಳ, ಯಕ್ಷಗಾನ ಮುಂತಾದವುಗಳಲ್ಲಿ ಆಗಿರುವ ಬದಲಾವಣೆಗಳನ್ನು ಗಮನಿಸಬಹುದಾಗಿದೆ. ನಾವು ಎಳೆಯರಿದ್ದಾಗ ಆಡುತ್ತಿದ್ದ ಹಲವು ಜಾನಪದ ಆಟಗಳಾದ ಉಗುಳುವ ಕಾಗೆ-ಗಿಳಿ ಆಟ, ಕೊರಗ- ಭಟ್ಟ ಆಟ ಮುಂತಾದವುಗಳು ಸಂಸ್ಕೃತಿಯಲ್ಲಿರುವ ವಿಕೃತಿಗಳಿಗೆ ಸಂಕೇತವಾಗಿ ಕಾಣಿಸುತ್ತವೆ. ಜನಪದ ಸಂಸ್ಕೃತಿಯಲ್ಲಿಯೂ ಮೂಢ ನಂಬಿಕೆ, ಜನವಿರೋಧಿ, ಅಭಿವೃದ್ಧಿ ವಿರೋಧಿ, ಕೋಮುವಾದಕ್ಕೆ ಪೂರಕವಾದ ಅಂಶಗಳೂ ಇವೆ. ಅವನ್ನು ಎಚ್ಚರಿಕೆಯಿಂದ ಗಾಳಿಸಿ ತೆಗೆದು ಒಳ್ಳೆಯ ಅಂಶಗಳನ್ನು ಮಾತ್ರ ಉಳಿಸಿಕೊಳ್ಳಬೇಕಾದ ಅವಶ್ಯಕತೆ ಇಂದಿನದಾಗಿದೆ" ಎಂದರು.



ಬಳಿಕ ಜರುಗಿದ ಸಂವಾದದಲ್ಲಿ, ಪ್ರತಿ ಸಂಸ್ಕೃತಿ ಎಂಬ ಪದ ಬಳಕೆ ಸೂಕ್ತವಲ್ಲ. ಅದರ ಬದಲಾಗಿ ಬಹುಮುಖಿ ಸಂಸ್ಕೃತಿ ಅಥವಾ ಜನಪದ ಸಂಸ್ಕೃತಿ ಎಂಬ ಪದವನ್ನು ಉಪಯೋಗಿಸುವುದು ಸೂಕ್ತ ಎಂಬ ಒಮ್ಮತದ ಅಭಿಪ್ರಾಯ ಮೂಡಿಬಂದಿತು. ಸಂಸ್ಕೃತಿಯ ಒಂದು ಎಳೆಯೆನಿಸಿರುವ ಆಹಾರ ಪದ್ಧತಿಯತ್ತ ಹೊರಳಿದ ಸಂವಾದವು, ಗೋಹತ್ಯೆ ನಿಷೇಧದ ಎಂಬ ವಿಷಯದ ಸುತ್ತ ಬಹಳಷ್ಟು ಹೊತ್ತು ಸುಳಿದಾಡಿತು.

ಸಂವಾದದಲ್ಲಿ ಶ್ರೀ ಕೆ.ಆರ್.ವಿ.ಬಾಳಿಗಾ, ಜಿ.ರಾಜಶೇಖರ್, ಫಣಿರಾಜ್, ನಾರಾಯಣ ನಾಯಕ್ ಪರ್ಕಳ, ಹುಸೈನ್ ಹೂಡೆ, ಅದಮಾರು ಶ್ರೀಪತಿ ಆಚಾರ್ಯ, ಪ್ರೊ. ರಾಜೇಂದ್ರ ಉಡುಪ, ಸಿ.ಎನ್.ಶೆಟ್ಟಿ, ರಾಧಾಕೃಷ್ಣ ಶಾಸ್ತ್ರಿ ಮೊದಲಾದವರು ಭಾಗವಹಿಸಿದ್ದರು.

ಸಭೆಯ ಅಧ್ಯಕ್ಷತೆಯನ್ನು ವೇದಿಕೆಯ ಅಧ್ಯಕ್ಷ ಡಾ/ ಗುಂಡ್ಮಿ ಭಾಸ್ಕರಮಯ್ಯರವರು ವಹಿಸಿದ್ದರು. ಪ್ರೊಫೆಸರ್ ಹೆಯವದನ ಉಪಾಧ್ಯರವರು ಕಾರ್ಯಕ್ರಮ ನಿರ್ವಹಿಸಿದರು. ವೇದಿಕೆಯ ಕಾರ್ಯದರ್ಶಿ ಬಾಲಕೃಷ್ಣ ಪರ್ಕಳರವರು ವಂದಿಸಿದರು.

## ಅಕ್ಟೋಬರ್ 31, ಕೋಮು ಸೌಹಾರ್ಧತೆಗಾಗಿ ಬೃಹತ್ ರ್‍ಯಾಲಿ ಮಂಗಳೂರಿಗೆ ಸೀತಾರಾಂ ಯೆಚೂರಿ

ಕೋಮು ಸೌಹಾರ್ಧತೆಗಾಗಿ ಬೃಹತ್ ರ್‍ಯಾಲಿಯನ್ನು ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ಇದೇ ಅಕ್ಟೋಬರ್ 31 ರಂದು ಮಂಗಳೂರಿನಲ್ಲಿ ಸಂಘಟಿಸುತ್ತಿದೆ.

ದಕ್ಷಿಣ ಕನ್ನಡ, ಕೊಡಗು, ಉಡುಪಿ, ಉತ್ತರ ಕನ್ನಡ ಮುಂತಾದ ಕರಾವಳಿ-ಘಟ್ಟ, ಮಲೆನಾಡು ಪ್ರದೇಶಗಳಿಂದ ಸಹಸ್ರ, ಸಹಸ್ರ ಸಂಖ್ಯೆಯಲ್ಲಿ ಜನತೆ ಭಾಗವಹಿಸಲಿದ್ದಾರೆ. ಈ ಬೃಹತ್ ರ್‍ಯಾಲಿಯನ್ನು ಉದ್ದೇಶಿಸಿ ಸಿಪಿಐ(ಎಂ) ಪೊಲಿಟ್ ಬ್ಯುರೊ ಸದಸ್ಯರಾದ ಸೀತಾರಾಂ ಯೆಚೂರಿ ಮಾತನಾಡಲಿದ್ದಾರೆ. ಅಲ್ಲದೇ ರಾಜ್ಯ ಮುಖಂಡರು ಪಲ್ಗೊಳ್ಳಲಿದ್ದಾರೆ.

ರಾಜ್ಯಮಟ್ಟದ ಪ್ರಚಾರಾಂದೋಲನ, ಜಾಥಗಳ ಬಳಿಕ ಸೆಪ್ಟೆಂಬರ್ 9 ರಂದು ಬೆಂಗಳೂರಿನಲ್ಲಿ ಬೃಹತ್ ರ್‍ಯಾಲಿ ನಡೆದಿತ್ತು. ಕಾಮ್ರೇಡ್ ಪ್ರಕಾಶ್ ಕಾರತ್ ಭಾಗವಹಿಸಿದ್ದರು. ಇದು ಆ ಪ್ರಚಾರಾಂದೋಲನದ ಮುಂದುವರಿಕೆಯಾಗಿದೆ. ಇದರಲ್ಲಿ ಎಲ್ಲಾ ಧರ್ಮ ನಿರಪೇಕ್ಷಿತ, ಪ್ರಗತಿಪರ ದೇಶ ಪ್ರೇಮಿ ಜನತೆ ಭಾಗವಹಿಸಲು ಕೋರಲಾಗಿದೆ.

## ಐಕ್ಯರಂಗ

**40 ವರ್ಷಗಳ ಹಿಂದೆ**

14.10.1964

### ಅನ್ನಕ್ಕಾಗಿ ಕಂಗಾಲಾದ ಜನತೆಯ ಹೋರಾಟ

ಮಂಗಳೂರು ತಾಲೂಕಿನಲ್ಲಿ ಸೆಕ್ಷನ್ 144. ಕಛೇರಿಗಳ ವಠಾರಗಳಲ್ಲಿ ಸಭೆ ಮೆರವಣಿಗೆಗಳಿಗೆ ನಿಷೇಧ. ಊರಲ್ಲಿ ಘೋಷಣೆಗಳಿಗೆ ನಿಷೇಧ. ಸಭೆಗಳಿಗೆ ಯಾ ಮೌನ ಮೆರವಣಿಗೆಗಳಿಗೆ ನಿಷೇಧವಿಲ್ಲ. ಪೂರ್ತಿ ನಿರ್ಬಂಧವಲ್ಲ, ಅಂಶಿಕ ನಿರ್ಬಂಧ.

ಈ ನಿರ್ಬಂಧದ ಉದ್ದೇಶ ಇದರಿಂದಲೇ ಸ್ಪಷ್ಟವಾಗುತ್ತದೆ. ಜನ ಅಕ್ಕಿ ಕೇಳಬಾರದು. ಬೆಲೆ ಕಡಿಮೆಯಾಗಬೇಕೆನ್ನಬಾರದು. ಕಡಿಮೆ ದರದ ಧಾನ್ಯದಂಗಡಿಗಳಾಗಬೇಕೆಂದು ಘೋಷಿಸಬಾರದು. ಅಂಗಡಿಗಳಿಂದ ಅಕ್ಕಿ ಮೂಟೆಗಳನ್ನು ಹಿಂದಿನ ಬಾಗಿಲಿನಿಂದ ಸಾಗಿಸದಂತೆ, ಗುರುತು ಚೀಟಿ ಮೂಲಕ ಅಕ್ಕಿ ವಿತರಣೆ ಮರುವಂತೆ ಕೇಳಿಕೊಳ್ಳಲೇಬಾರದು.

ಆದರೆ ಮಂಗಳೂರಿನ ಜನತೆ ಮಾತ್ರ ಹಾಗೆ ತಿಳಿದಿಲ್ಲ. ಬಾಯಿಗೆ ಬೀಗ ಮುದ್ರೆ ಹಾಕಿದರೆ ಹೊಟ್ಟೆ ತುಂಬುವುದಿಲ್ಲವೆಂದು ಅವರಿಗೆ ಗೊತ್ತಿದೆ, ಎಂತಲೇ ಸರಕಾರ ತನ್ನ ನಿರ್ಬಂಧಕಾಜ್ಞೆಗಳನ್ನು ಹಿಂತೆಗೆಯಬೇಕೆಂದೂ, ಜನತೆಯ ಹೇಳಿಕೆಳನ್ನು ಮನ್ನಿಸಬೇಕೆಂದೂ ಜನ ಒತ್ತಾಯಿಸುತ್ತಿದ್ದಾರೆ.

**ಮೂರು ತಿಂಗಳುಗಳ ಚಳುವಳಿ**

ಕಳೆದ ಜೂನ್ ತಾ.22 ರ ಒಂದು ದಿನದ ಸಾರ್ವತ್ರಿಕ ಮುಷ್ಕರದಿಂದ ಆರಂಭವಾದ ಮಂಗಳೂರಿನ ಕಾರ್ಮಿಕರ, ಮಹಾ ಜನತೆಯ ಚಳುವಳಿ ಈ ಮೂರು ನಾಲ್ಕು ತಿಂಗಳುಗಳಲ್ಲೂ ನಿರಂತರವಾಗಿ ನಡೆದುಬಂದಿದೆ. ಚಳುವಳಿಯು ಇಂದು ಹೊಸದೊಂದು ಹಂತವನ್ನು ತಲುಪಿದೆ.

#### ಅಕ್ಕಿ ಹಿಡಿದರು

ಪಾಣೆಮಂಗಳೂರಿನ ಪ್ರಮುಖ ವ್ಯಾಪಾರಿಗಳೊಬ್ಬರು ಮೈಸೂರಿಗೆ ಸುಮಾರು ನೂರು ಚೀಲಗಳಷ್ಟು ಅಕ್ಕಿ ಸಾಗಿಸುತ್ತಿದ್ದಾಗ ಪೆರ್ಲ ಕಸ್ಟಮ್ಸ್ ಗೇಟಿನಲ್ಲಿ ಅದನ್ನು ಹಿಡಿದರೆಂದೂ, ಅಲ್ಲದೆ ಮೇಲಾಧಿಕಾರಿಗಳ ಅಪ್ಪಣೆ ಮೇರೆಗೆ ಪ್ರತಿಯೊಂದು ಬಡ ಕುಟುಂಬಕ್ಕೂ 5 ಕಿಲಲೋ ಅಕ್ಕಿಯಂತೆ ಗುರುತು ಚೀಟಿ ಮೂಲಕ ಕಿಲೋಗೆ 78 ಪೈಸೆಯಂತೆ ವಿತರಣೆ ಮಾಡಿದರೆಂದೂ ತಿಳಿದುಬರುತ್ತದೆ.

**ಅರಣ್ಯ ಅತಿಕ್ರಮಣದಾರರನ್ನು ರಕ್ಷಿಸಲಾಗುವುದು, ಒಕ್ಕಲೆಬ್ಬಿಸುವುದಿಲ್ಲವೆಂದು ಹೇಳುತ್ತಿದ್ದ ಸರ್ಕಾರ ಸುಪ್ರೀಂಕೋರ್ಟ್ ಆದೇಶ ಜಾರಿಗೊಳಿಸದೇ ಅನ್ಯ ಮಾರ್ಗವಿಲ್ಲ ಎನ್ನುತ್ತಿದೆ. ಕಾನೂನು ಸಚಿವ ಚಂದ್ರೇಗೌಡರು ಒಂದು ಹೇಳಿದರೆ ಇನ್ನೊಬ್ಬ ಸಚಿವ ದೇಶಪಾಂಡೆ ಮತ್ತೊಂದು ಹೇಳುತ್ತಾರೆ! ಈ ಸಮಸ್ಯೆಗೆ ಶಾಶ್ವತ ಪರಿಹಾರ ನೀಡುವ ದಿಶೆಯಲ್ಲಿ ಕೇಂದ್ರ-ರಾಜ್ಯ ಸರ್ಕಾರಗಳು ಪ್ರಾಮಾಣಿಕರಾಗಿಲ್ಲ. ಇಂತಹ ವಂಚನೆಯ ವಿರುದ್ಧ ಉತ್ತರ ಕನ್ನಡದ ಜನ ಬೀದಿಗಿಳಿದು ತಮ್ಮ ಹಕ್ಕು ಪ್ರತಿಪಾದಿಸುತ್ತಿದ್ದಾರೆ. ಸಮುದ್ರದ ದಂಡೆಗೇ ಬಂದು ನಿಂತಿರುವ ಆ ಜನರ ಹೋರಾಟದ ವರದಿ....**

# ಸಮುದ್ರದ ದಂಡೆಗೇ ಅರಣ್ಯ ಅತಿಕ್ರಮಣದಾರರು

**ಯಮುನಾ ಗಾಂವ್ಕರ**

ಸೆಪ್ಟೆಂಬರ್ 30, 2003 ರಂದು ಕಾರವಾರದ ಬೀದಿಬೀದಿಗಳಲ್ಲಿ ರೈತರ ಘೋಷಣೆಗಳು ಪ್ರತಿಧ್ವನಿಸಿದವು. ಕರ್ನಾಟಕ ಪ್ರಾಂತ ರೈತ ಸಂಘದ ಬ್ಯಾನರುಗಳು ಹಾರಾಡಿದವು. ಪ್ರಾರಂಭವಾದ ಮೆರವಣಿಗೆಯ ಕೊನೆಯನ್ನು ನೋಡಲು ನಿಂತವರು ಸುಸ್ತಾಗಿ ಕುಳಿತುಕೊಳ್ಳ ಬೇಕಾಯಿತು. ಇತ್ತೀಚಿನ ದಿನಗಳಲ್ಲಿ ಕಾರವಾರದ ಜನ ತಾವು ನೋಡಿದ ಅತ್ಯಂದ ದೊಡ್ಡ ಮೆರವಣಿಗೆ, ಯಾಕೆ ಎಂದು ಅಕ್ಕಪಕ್ಕದವರನ್ನು ಕೇಳಬೇಕಾಗಿರಲಿಲ್ಲ. ಮೆರವಣಿಗೆ ಯಾಕೆ ಎಂದು ಚಿಂತಿಸಬೇಕಾಗಿಲ್ಲವಲ್ಲ. ಮುಗಿಲುಮುಟ್ಟುವ ಘೋಷಣೆಗಳು, ಉದ್ದೇಶ ಹೇಳುವ ಬ್ಯಾನರುಗಳು, ಬೇಡಿಕೆಗಳನ್ನು ಹೊತ್ತ ನೂರಾರು ಪ್ಲೇಕಾರ್ಡ್‌ಗಳು ಉತ್ತರ ಕನ್ನಡ ಜಿಲ್ಲೆಯ ರೈತರ ಸಂಕಷ್ಟವನ್ನು ಹೇಳುತ್ತಿದ್ದವು.

**ಜಮೀನು ಬೇಕು**

ಪಾಯ್ಜೆ... ಪಾಯ್ಜೆ... ಜಮೀಣ್ ಪಾಯ್ಜೆ (ಬೇಕೇ ಬೇಕು.. ಜಮೀನು ಬೇಕು) ತೆಮಿ ದಿನಮಂಟಾ... ಆಮಿ ಸೋಡ್ನಾಮಂಟಾ (ಅವರು ಕೊಡೋದಿಲ್ಲ... ನಾವು ಬಿಡೋದಿಲ್ಲ). 'ಜೈಲಿಗಾದರೂ ಹೋದೇವು.. ಭೂಮಿ ಬಿಡುವುದಿಲ್ಲ', 'ಅತಿಕ್ರಮಣ ಭೂಮಿ ಸಕ್ರಮಗೊಳಿಸಬೇಕು', 'ನಮ್ಮ ಭೂಮಿ-ನಮ್ಮ ಹಕ್ಕು', 'ಓಟು ಕೇಳಲು ಬರುವವರೆ ಭೂಮಿ ಕೊಡಿಸಲು ಬನ್ನಿ', 'ರೈತರು ಬಂದರು ದಾರಿ ಬಿಡಿ, ರೈತರ ಕೈಗೆ ಭೂಮಿ ಕೊಡಿ' 'ರೈತರ ಮನೆಗೊಂದು ಉದ್ಯೋಗಕೊಡಿ', 'ಬಡ ರೈತರಿಗೆ, ಕೃಷಿ ಕೂಲಿಕಾರರಿಗೆ ಪೆನ್ಷನ್ ಯೋಜನೆ ಜಾರಿಗೊಳಿಸಿ', 'ನೀರಾವರಿ ಯೋಜನೆ ಜಾರಿಯಾಗಲಿ', 'ಅತಿಕ್ರಮಣಕಾರರನ್ನು ಒಕ್ಕಲೆಬ್ಬಿಸುವ ರಾಜ್ಯ-ಕೇಂದ್ರ ಸರ್ಕಾರಗಳಿಗೆ ಧಿಕ್ಕಾರ' ಈ ಮುಂತಾದ ಘೋಷಣೆಗಳು ಸಮುದ್ರದ ತೆರೆಗಳ ಭೋರ್ಗರೆತವನ್ನು ಮೀರಿ ಮೆರವಣಿಗೆಗಾರರ ಧ್ವನಿಯಾಗಿ ಮೊಳಗಿದವು.

ಕರ್ನಾಟಕ ಪ್ರಾಂತ ರೈತಸಂಘ (ಕೆಪಿಆರ್ ಎಸ್)ದ ನೇತೃತ್ವದಲ್ಲಿ ಅರಣ್ಯ ಅತಿಕ್ರಮಣದಕಾರರ ಹೋರಾಟ ಸಮಿತಿಯ ಜೊತೆಗೂಡಿ ಅರಣ್ಯ ಅತಿಕ್ರಮಣ ಭೂಮಿಯನ್ನು ಸಕ್ರಮಗೊಳಿಸಲು ಒತ್ತಾಯಿಸಿ ನಡೆದ ಹೋರಾಟದ ದೃಶ್ಯ ಇದು.

**ತಿರಸ್ಕಾರ - ವಂಚನೆ?**

ಸುಪ್ರೀಂಕೋರ್ಟ್‌ನ ಆದೇಶದ ಹಿನ್ನೆಲೆಯಲ್ಲಿ 1978 ರ ನಂತರದ ಒತ್ತುವರಿಯನ್ನು ತೆರವುಗೊಳಿಸಲು ರಾಜ್ಯ ಸರ್ಕಾರ ಮುಂದಾದಾಗ ಜಿಲ್ಲೆಯಾದ್ಯಂತ ಹೋರಾಟ ನಡೆದಿತ್ತು. ಉಗ್ರ ಹೋರಾಟದ ಭಾಗವಾಗಿ ರಾಜ್ಯ ಸರ್ಕಾರ ಅತಿಕ್ರಮಣ ಸಕ್ರಮಕ್ಕೆ ಅನುಮತಿಕೋರಿ ಕೇಂದ್ರ ಸರ್ಕಾರಕ್ಕೆ ಮನವಿ ಕಳುಹಿಸಿತು. 7-8 ತಿಂಗಳು ಈ ಮನವಿಯನ್ನು ತನ್ನ ಬಳಿ ಇಟ್ಟುಕೊಂಡ ಕೇಂದ್ರ ಸರ್ಕಾರ ಈಗ ರಾಜ್ಯ ಸರ್ಕಾರದ ಪ್ರಸ್ತಾವನೆಯನ್ನು ತಿರಸ್ಕರಿಸಿದ ಪರಿಣಾಮವಾಗಿ ಕೇಂದ್ರ ಅರಣ್ಯ ಮತ್ತು ಪರಿಸರ ಇಲಾಖೆ ರಾಜ್ಯ ಸರ್ಕಾರದ ಮನವಿಯನ್ನು ವಾಪಸು ಕಳುಹಿಸಿದೆ. ಇದರಿಂದ ಉದ್ಭವಿಸಿದ ಬಿಕ್ಕಟ್ಟು ಲಕ್ಷಾಂತರ ಜನರನ್ನು ಬೀದಿಗೆ ತಳ್ಳುವಂತಾಗಿದೆ. ಇದರ ವಿರುದ್ಧ ಪ್ರತಿಭಟಿಸಲು ಜೀವನಕ್ಕೊಂದು ಭದ್ರತೆಯ ಕನಸು ಕಂಡ ಸಾವಿರಾರು ಸಂಖ್ಯೆಯಲ್ಲಿ ಅತಿಕ್ರಮಣದಾರರು, ರೈತರು ಕಡಲತಡಿ ಕಾರವಾರಕ್ಕೆ ಹರಿದುಬಂದರು. ಜಿಲ್ಲಾಧಿಕಾರಿ ಕಚೇರಿಗೆ ಮುತ್ತಿಗೆ ಹಾಕಿದರು. ಮಿನಿ ವಿಧಾನಸೌಧದ ಮೇಲೆ ಜಿಲ್ಲಾಡಳಿತ, ಜಿಲ್ಲಾ ಉಸ್ತುವಾರಿ ಸಚಿವರು, ಜಿಲ್ಲೆಯ ವಿವಿಧ ಶಾಸಕರು ಜಿಲ್ಲೆಯ ಅಭಿವೃದ್ಧಿಯ ನಾಟಕ ಆಡುತ್ತಿದ್ದಾರೆ. ಪೋಲೀಸರು ಇವರ ಕಾವಲಿಗಾಗಿ ಮಿನಿ ವಿಧಾನಸೌಧದ ಎಲ್ಲಾ ಬಾಗಿಲುಗಳನ್ನು ಮೊದಲೇ ಮುಚ್ಚಿ ಬಂದೋಬಸ್ತ್ ನಡೆಸಿದ್ದರು. ಕೆಳಗೆ ರೈತರು ಪಾಯ್ಜೆ.. ಪಾಯ್ಜೆ... ಜಮೀಣ್ ಪಾಯ್ಜೆ... ಓಟು ಕೇಳಲು ಬರುವವರೆ ಭೂಮಿ ಕೊಡಿಸಲು ಬನ್ನಿ ಎನ್ನುವ ಘೋಷಣೆಯೊಂದಿಗೆ ಸರ್ಕಾರದ ಜನವಿರೋಧಿ ನೀತಿಯನ್ನು, ಜನಪ್ರತಿನಿಧಿಗಳ ಬೇಜವಾಬ್ದಾರಿ ತನವನ್ನು ಬಯಲು ಮಾಡುತ್ತಾ ಸಾರ್ವಜನಿಕ ಸಭೆ ನಡೆಸುತ್ತಿದ್ದರು.

**ಕಾಯ್ದೆ ಜನರಿಗಾಗಿ ಇಲ್ಲವಾದರೆ ಬದಲಾಯಿಸಿ**

ಪ್ರತಿಭಟನೆಕಾರರನ್ನು ಉದ್ದೇಶಿಸಿ ಪ್ರಾಂತಕೃಷಿಕೂಲಿಕಾರ ಸಂಘದ ರಾಜ್ಯ ಅಧ್ಯಕ್ಷರಾದ ನಿತ್ಯಾನಂದಸ್ವಾಮಿಯವರು ಮಾತನಾಡಿ 'ಗಿಡ-ಮರಗಳನ್ನು ನಾಶ ಮಾಡದೇ ಕೃಷಿ ಕಾರ್ಯದಲ್ಲಿ ತೊಡಗಿದ ಅರಣ್ಯ ಅತಿಕ್ರಮಣದಾರ ರೈತರು ಇನ್ನೂ ತೀವ್ರ ಹೋರಾಟಕ್ಕೆ ಮುಂದಾಗಿ ಭೂಮಿ ಸಾಗುವಳಿ ಮಾಡಿದ ದಾಖಲೆ ಇಲ್ಲ ಎನ್ನುವವರು ನಾವು ಬೆಳೆಸಿದ ಮರಗಿಡ ವರ್ಷ ಲೆಕ್ಕಹಾಕಿ, ಅರಣ್ಯ ಹಾಳುಗೆಡವಲು ಇಲಾಖೆ ಅಧಿಕಾರಿಗಳು ಕಾಡುಗಳ್ಳರೊಂದಿಗೆ ಶಾಮೀಲಾಗಿರುವುದು ಕಾರಣ ಹೊರತೂ ರೈತರಲ್ಲ. **ಕಾನೂನಿಗಾಗಿ ನಾವುಗಳಲ್ಲ-ನಮಗಾಗಿ ಕಾನೂನಿರುವುದು. ಕಾನೂನು ನಮ್ಮಂಥ ಬಡ ರೈತರ ವಿರೋಧಿಯಾಗಿದೆ ಎಂದಾದರೆ ನಮ್ಮ ಪರ ಅರಣ್ಯ ಕಾಯ್ದೆ ಬದಲಾಗುವವರೆಗೆ ಹೋರಾಟ ಮುಂದುವರೆಯುತ್ತದೆ** ಎಂದರು. ಅಲ್ಲದೇ ಒತ್ತುವರಿದಾರ ರೈತರನ್ನು ಮೋಸಕ್ಕೆ ಸಿಲುಕಿಸಿದ ಸರ್ಕಾರಗಳ ನೀತಿಯನ್ನು ಬಯಲುಗೊಳಿಸಿದರು. ಅರಣ್ಯ ಕಾಯ್ದೆ ಕಾನೂನುಗಳು ರೂಪಿತ ಆಗುವ ಮೊದಲಿಂದಲೇ ಈ ಕಾಡಿನಲ್ಲಿ ಅರಣ್ಯ ಪ್ರದೇಶ ಎಂದುಕರೆಯುವ ಸ್ಥಳದಲ್ಲಿ ವಾಸವಾಗಿದ್ದರು. ಹಾಗಾಗಿ ಈಗಿರುವ ಒತ್ತುವರಿ ಮಾತ್ರವಲ್ಲ, ಉಳಿದ ಕೃಷಿಯೋಗ್ಯ ಭೂಮಿಯನ್ನು ರೈತರಿಗೆ ಕೊಡಬೇಕು' ಎಂದರು.

**ಪ್ರಧಾನಿ ಬಳಿಗೆ**

ಪ್ರಾಂತ ರೈತ ಸಂಘದ ಜಿಲ್ಲಾ ಕಾರ್ಯದರ್ಶಿ ಶಾಂತಾರಾಮ ನಾಯಕ ಪ್ರಾಸ್ತಾವಿಕವಾಗಿ ಮಾತನಾಡಿ, ಈವರೆಗಿನ ಎಲ್ಲಾ ಅತಿಕ್ರಮಣ ಭೂಮಿ ಸಕ್ರಮಗೊಳಿಸಬೇಕು. ಸ್ವಾತಂತ್ರ್ಯ ಪೂರ್ವದಿಂದಲೂ ತಮ್ಮ ಉಪಜೀವನಕ್ಕೋಸ್ಕರ ಕುಂಬ್ರಿ ಜಮೀನನ್ನು ಮಾಡಿಕೊಂಡು ಬಂದ ಜೋಯ್ಡ ಮತ್ತು ಭಟ್ಕಳ ಪ್ರದೇಶದ ರೈತರಿಗೆ ಕುಂಬ್ರಿ ಜಮೀನು ಸಕ್ರಮಗೊಳಿಸಬೇಕು. ಜಿಲ್ಲೆಯಲ್ಲಿ ಹಲವಾರು ಯೋಜನೆಗಳಿಗೆ ರೈತರು ಭೂಮಿ ಕಳಕೊಂಡಿದ್ದಾರೆ. ಬರಗಾಲದಿಂದಾಗಿ ಇರುವ ಭೂಮಿಯನ್ನು ಉಳುಮೆ ಮಾಡುವುದು ಕಷ್ಟವಾಗುತ್ತಿದೆ. ರೈತರ ಮನೆಯೊಂದು ಉದ್ಯೋಗ, ಬಡರೈತ-ಕೃಷಿ ಕೂಲಿಕಾರರಿಗೆ ಪೆನ್ಷನ್ ಯೋಜನೆ ಜಾರಿಗೆ, ರಾಜ್ಯದ ಅತಿಕ್ರಮಣದಾರ ರೈತರ ಸಮಸ್ಯೆ ಕುರಿತು ಸರ್ಕಾರ ಪ್ರಧಾನಿ ಬಳಿ ನಿಯೋಗ ಹೋಗಬೇಕು. ಬೇಡಿಕೆ ಈಡೇರದಿದ್ದರೆ ಉಗ್ರ ಪ್ರತಿಭಟನೆ ಎದುರಿಸಬೇಕಾದೀತು ಎಂದು ಎಚ್ಚರಿಸಿದರು.

**ರೈತನೀಗ ಸಮುದ್ರ ದಂಡೆಯಲ್ಲಿ**

ಸಿರ್ಸಿ ದಾಸನಕೊಪ್ಪದ ಮಾಜಿ ಜಿ.ಪಂ. ಸದಸ್ಯ ಹಾಲಪ್ಪ ಜಲಕಣ್ಣನವರ ಪ್ರಾಂತ ರೈತ ಸಂಘದ ಹೋರಾಟಕ್ಕೆ ಸಂಪೂರ್ಣ ಬೆಂಬಲ ನೀಡುತ್ತಾ ಕೇಂದ್ರ ಸರ್ಕಾರ ರೈತರ ಬದುಕನ್ನು ಸಮುದ್ರ ದಂಡೆ ತಂದು ನಿಲ್ಲಿಸಿದೆ. ಪರಿಸರಕ್ಕೆ ಧಕ್ಕೆಯಾಗದಂತೆ ಕೃ ಚಟುವಟಿಕೆ ಮಾಡುತ್ತಿರುವ ರೈತರ ಪರವಾ ಕೋರ್ಟಿನಲ್ಲಿ ಸರಿಯಾಗಿ ವಾದ ಮಂಡಿಸಿ ಎಂದರು.

ಸಿಐಟಿಯು ನ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಗಳಾದ ತಿಲಕಗೌಡ ಮಾತನಾಡಿ ರೈತರನ್ ಒಕ್ಕಲೆಬ್ಬಿಸುವ ಯಾರಾದರೂ ಬಂದಲ್ಲಿ ಜಿಲ್ಲೆ ಕಾರ್ಮಿಕ ವರ್ಗರೈತರ ಬೆಂಗಾವಲಿಗಿರುತ್ತ ದೆಂದ ಕಾರ್ಮಿಕ ಸಂಘಟನೆಯ ಬೆಂಬಲ ಘೋಷಿಸಿದರು.

ಅಂಗನವಾಡಿ ನೌಕರರ ಸಂಘಟನೆಯ ಜಿಲ್ ಕಾರ್ಯದರ್ಶಿ ಯಮುನಾ ಗಾಂವ್ಕ ಮಾತನಾಡುತ್ತಾ ಸುಪ್ರೀಂಕೋರ್ಟ್ ಈವರ ಹಲವಾರು ಜನಪರ ತೀರ್ಪಿತ್ತಿದೆ. ಉಗ್ರಾಣಿಗ ದಿನಗೂಲಿಗಳ ಸೇವೆ ಖಾಯಂಗೊಳಿಸಲು, ಎ ಕಾರ್ಮಿಕರಿಗೆ ಕನಿಷ್ಟ ಕೂಲಿ ಜಾರಿ ಇತ್ಯಾದಿ. ಆದ ಅದನ್ನೆಲ್ಲ ಸರ್ಕಾರ ಜಾರಿ ಮಾಡಿಲ್ಲ; ನ್ಯಾಯಾ ನಿಂದನೆಯೂ ಆಗಿಲ್ಲ. ಅದೇ ಈಗ ಜನವಿರೋ ತೀರ್ಪನ್ನು ಮಾತ್ರ ಜಾರಿ ಮಾಡ ತುದಿಗಾಲಮೇಲೆ ಸರ್ಕಾರ ಮುಂದಾಗಿರುವು ರೈತರನ್ನು ರಕ್ಷಿಸದಿರುವುದು ನಾಚಿಕೆಗೇಡು ಎಂದ ಡಿವೈಎಫ್ಐನ ಜಿಲ್ಲಾಧ್ಯಕ್ಷ ಸುಭಾಷ ಕೊಪ್ಪಿಕ ಕಿಸಾನ್ ಸಂಘದ ಎಂ.ಆರ್.ಹೆಗಡೆ, ಕಾರವ ಕೆಪಿಆರ್‌ಎಸ್ ಅಧ್ಯಕ್ಷರಾದ ವಿಷ್ಣುನಾಯ ಹೊನ್ನಾವರದ ಎಡ್ವಿನ್ ರೋಡ್ರಿಗಿ ಮುಂತಾದವರು ಮಾತನಾಡಿದರು.

ಕೆಪಿಆರ್‌ಎಸ್ ಜಿಲ್ಲಾಧ್ಯಕ್ಷರಾದ ಮಂಜುನ ಪುಲ್ಕರ ಈ ಸಮಸ್ಯೆ ಮುಂದುವರೆದಿದ್ದೇ ಆ ಜಿಲ್ಲೆಯಾದ್ಯಂತ ರಸ್ತೆ, ರೈಲು ತಡೆ, ಜಿಲ್ಲೆ ಬಂ ಮುಂತಾದ ಉಗ್ರ ಹೋರಾಟಕ್ಕೆ ಸಹಸ ಸಂಖ್ಯೆಯಲ್ಲಿ ದಿನನಿತ್ಯ ಅಣಿನೆರೆಯುವುದ ಘೋಷಿಸಿದರು. ಜಿ.ಪಂ.ಸದಸ್ಯ ಜಿ.ಎಂ. ಉಪಸ್ಥಿತರಿದ್ದರು. ವಿಠ್ಠಲ ಭಂಡಾರಿ ವ ಓದಿದರು. ಹೋರಾಟದ ನೇತೃತ್ವವನ್ನು ಕಾರವಾ ಶಾಮನಾಥ ನಾಯ್ಕ, ಸಂತೋಷ ನಾ ಅನಂದುಬರ್ಗಿ, ಕೃಷ್ಣಗಾಂವ್ಕಾರ, ಜಿ. ನಾಯಕ್, ಅಂಕೋಲಾದ ಗೌರೀಶ ನಾ ಹೊನ್ನಾವರದ ಎಸ್.ಎಂ.ನಾಯ್ಕ, ಶ್ರಿ ಭಂಡಾರಿ, ಮಾಣ್ಣು ನಾಯ್ಕ, ಮಾರುತಿ ನಾ ಕೆ.ಎನ್.ನಾಯ್ಕ, ನಾರಾಯಣ ವೇ ಪ್ರೇಮಾನಂದ ವೇಳೀಪ, ಹಾಳ ಮುಂತಾದವರು ವಹಿಸಿದ್ದರು.



ಕಾರವಾರದ ರಸ್ತೆ-ಗಲ್ಲಿಗಳಲ್ಲಿ ಹರಿದ ಜನಸಾಗರ

## ಪ್ರಧಾನಮಂತ್ರಿಯ ಬಳಿ ನಿಯೋಗ - ಕೆಪಿಆರ್‌ಎಸ್ ಒತ್ತಾಯ

ಪ್ರತಿಭಟನೆಕಾರರ ಪರವಾಗಿ ಕರ್ನಾಟಕ ಪ್ರಾಂತ ರೈತ ಸಂಘ ಸರ್ಕಾರಕ್ಕೆ ಮನವಿಯೊಂದನ್ನು ಅರ್ಪಿಸಿತು. ಇದರಲ್ಲಿ ಅತಿಕ್ರಮಣ ಒತ್ತುವರಿಯನ್ನು ತೆರವುಗೊಳಿಸಲು ಮುಂದಾದರೆ ಉದ್ಭವಿಸುವ ಸಮಸ್ಯೆಯನ್ನು ವಿವರಿಸಿದೆ. ಮತ್ತು ಯಾವುದೇ ಕಾರಣದಿಂದ ತೆರವುಗೊಳಿಸುವುದನ್ನು ತಡೆಯಲು ಅಗತ್ಯಬಿದ್ದರೆ ಸುಗ್ರೀವಾಜ್ಞೆಯನ್ನು ತರಲು ಒತ್ತಾಯಿಸಿತು.

ಈಗಾಗಲೇ ಸುಪ್ರೀಂಕೋರ್ಟ್‌ನ ಆದೇಶದಂತೆ 1978 ರ ಪೂರ್ವದ ಅತಿಕ್ರಮಣ ಭೂಮಿಯನ್ನು ಕೂಡ ಸಕ್ರಮ ಮಾಡಿಲ್ಲ.ಅದನ್ನು ಕೂಡ ತಕ್ಷಣ ಕ್ರಮಬದ್ಧಗೊಳಿಸಬೇಕು. ಅನೇಕ ಒತ್ತುವರಿದಾರರಲ್ಲಿ ಅಗತ್ಯ ಕಾಗದ ಪತ್ರಗಳಿಲ್ಲದ್ದರಿಂದ ಸ್ಥಳ ನೋಡಿ ಮರದ ಆಯಸ್ಸು, ಮನೆಕರ, ಮನೆ ಕಟ್ಟಿಕೊಂಡ ಕಾಲ ಮುಂತಾದ ವಿಷಯಗಳನ್ನು ದಾಖಲೆಯಾಗಿ ಸ್ವೀಕರಿಸಬೇಕು ಎಂದು ಒತ್ತಾಯಿಸಿದೆ.

ಇದೆಲ್ಲವನ್ನು ಮಾನ್ಯ ಮಾಡಬೇಕಾದ ಪ್ರಮುಖ ಜವಾಬ್ದಾರಿ ಕೇಂದ್ರ ಸರ್ಕಾರದ ಮೇಲೂ ಇರುವುದರಿಂದ ಪ್ರಧಾನಿಯ ಬಳಿಗೆ ರಾಜ್ಯಮಟ್ಟದ ನಿಯೋಗವೊಂದನ್ನು ತೆಗೆದುಕೊಂಡು ಹೋಗಬೇಕು. ಅದರಲ್ಲಿ ಅತಿಕ್ರಮಣ ಹೋರಾಟ ಸಮಿತಿ, ಕೆಪಿಆರ್‌ಎಸ್ ಸಂಘಟನೆಗಳ ಪ್ರತಿನಿಧಿಗಳನ್ನು ಒಳಗೊಂಡಿರಬೇಕೆಂದು ಒತ್ತಾಯಿಸಿತು.

**ಸಚಿವ ದೇಶಪಾಂಡೆ ಹೇಳಿದ್ದು**

ಈ ಮನವಿಯನ್ನು ರಾಜ್ಯ ಸರ್ಕಾರದ ಪರವಾಗಿ ಉ.ಕ. ಜಿಲ್ಲೆಯ ಉಸ್ತುವಾರಿ ಸಚಿವರು, ಕೈಗಾರಿಕಾ ಸಚಿವರು ಆದ ಆರ್.ವಿ. ದೇಶಪಾಂಡೆ ಸ್ವೀಕರಿಸಿ ಮಾತನಾಡಿದರು. "ಈಗಾಗಲೇ 1980ರ ವರೆಗಿನ ಭೂಮಿಯನ್ನು ಸಕ್ರಮಕ್ಕೆ ತೀರ್ಮಾನಿಸಿದೆ. 1990 ರ ವರೆಗಿನ ಕೃಷಿ ಭೂಮಿ ಮತ್ತು 1998 ರ ವರೆಗಿನ ನಿವೇಶನ ಭೂಮಿಯನ್ನು ಸಕ್ರಮಗೊಳಿಸುವಂತೆ ಕ್ಯಾಬಿನೆಟ್ ತೀರ್ಮಾನಿಸಿದೆ. ಈ ಬಗ್ಗೆ ಕೇಂದ್ರಕ್ಕೆ ಕಳುಹಿಸಿದ್ದೇವೆ. ಯಾವುದೇ ಕಾರಣಕ್ಕೂ ಒಕ್ಕಲೆಬ್ಬಿಸದಂತೆ ಅಧಿಕಾರಿಗಳಿಗೆ ಆದೇಶಿಸಿದ್ದೇವೆ. ಒಂದು ತಿಂಗಳಲ್ಲಿ ಪ್ರತಿ ತಾಲೂಕಿನಲ್ಲಿ ಅತಿಕ್ರಮಣದಾರ ಮುಖಂಡರನ್ನು ಸೇರಿಕೊಂಡಂತೆ ಅಧಿಕಾರಿ, ಜನಪ್ರತಿನಿಧಿಗಳ ಸಮಿತಿ ರಚನೆ ಮಾಡುತ್ತಿದ್ದೇವೆ. ಹಳೆ ಅತಿಕ್ರಮಣ ಸಕ್ರಮ ಆಗುತ್ತಿದೆ. ಹೊಸದನ್ನು ಮಾಡಲು ಪ್ರೋತ್ಸಾಹಿಸಬೇಡಿ. ಈಗಾಗಲೇ ಕಾಡು ಕಡಿಮೆ ಆಗಿರುವುದರಿಂದ ಘಟ್ಟದ ಮೇಲೆ ಮಳೆ ಕಡಿಮೆ ಆಗಿದೆ' ಎಂದರು. ಜಿಲ್ಲಾಧಿಕಾರಿಗಳು ಕೂಡಾ ಹಾಜರಿದ್ದರು. ಜಿ.ಪಂ. ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು, ಶಾಸಕರು ಜೊತೆಗಿದ್ದರು.

**ಭಾರತ ಪಾಕ್ ಸಂಬಂಧ**


# ಆಶಯಗಳಿಗೆ ಬೇಕಿದೆ ನೈಜ ಪ್ರಯತ್ನಗಳ ಕಾಯಕಲ್ಪ

**ಭಾರತ-ಪಾಕ್ ಸಂಬಂಧಗಳ ಸುಧಾರಣೆಗೆ ಮತ್ತೆ ಹೊಸ ಕ್ರಮಗಳು ಪ್ರಕಟವಾಗಿವೆ. ಇದು ಸ್ವಾಗತಾರ್ಹ. ಆದರೆ ಈಗ ಬೇಕಿರುವುದು ಕೇವಲ ಆಶಯಗಳಲ್ಲ, ಅದನ್ನು ನಿಜವಾಗಿಸುವ ಪ್ರಾಮಾಣಿಕ ಪ್ರಯತ್ನ.... ವಾಜಪೇಯಿ ಸರ್ಕಾರ ಇದನ್ನು ಸಾಧಿಸಿತೇ?**

ಭಾರತ-ಪಾಕ್ ಸಂಬಂಧವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರವು ಹಲವಾರು ಕ್ರಮಗಳನ್ನು ಕೈಗೊಂಡಿದೆ. ನಾಗರಿಕ ವಿಮಾನ ಯಾನ ಮತ್ತು ರೈಲು ಸಂಚಾರವನ್ನು ಪುನರಾರಂಭಿಸುವ ಕುರಿತು ಮಾತುಕತೆ, ಕ್ರಿಕೆಟ್ ಸೇರಿದಂತೆ ಇನ್ನಿತರ ಆಟೋಟ ಸ್ಪರ್ಧೆಗಳ ಪುನರಾರಂಭ, ಎರಡೂ ದೇಶಗಳ ನಡುವೆ ಸಂಚರಿಸುವ ಪ್ರಯಾಣಿಕರಿಗೆ ಅನುಕೂಲವಾಗುವಂತೆ ಸರಳ ವೀಸಾ ವ್ಯವಸ್ಥೆ ಇನ್ನಿತರ ಅಂಶಗಳ ಕುರಿತು ವಿದೇಶಾಂಗ ಸಚಿವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಪ್ರಧಾನ ಮಂತ್ರಿಯವರ ಅಧ್ಯಕ್ಷತೆಯಲ್ಲಿ ಸಭೆ ಸೇರಿದ್ದ ಭದ್ರತೆ ಕುರಿತ ಸಚಿವಾಲಯ ಸಮಿತಿಯು ಈ ಕ್ರಮಗಳನ್ನು ಕೈಗೊಂಡಿತ್ತು.

ಮಾತ್ರವಲ್ಲದೇ, ಕಾಶ್ಮೀರದ ಹುರಿಯತ್ ಕಾನ್ಫರೆನ್ಸ್‌ನ ಮುಖಂಡರೊಂದಿಗೆ ಮಾತುಕತೆ ನಡೆಸಲು ಉಪ ಪ್ರಧಾನಿಯವರಿಗೆ ಅಧಿಕಾರ ನೀಡಿದೆ. ಈ ಎಲ್ಲಾ ಬೆಳವಣಿಗೆಗಳು ಭಾರತ-ಪಾಕ್ ಸಂಬಂಧವನ್ನು ಬೆಳೆಸುವಲ್ಲಿ ಸಹಕಾರಿಯಾಗುವುದಲ್ಲದೆ, ಕಾಶ್ಮೀರ ವಿವಾದವನ್ನು ತಿಳಿಗೊಳಿಸಲು ಸಹಕಾರಿಯಾಗುತ್ತದೆ. ಆದ್ದರಿಂದ ಇದು ಸ್ವಾಗತಾರ್ಹ. ಇದಕ್ಕೆ ಕೆಲವೇ ವಾರಗಳ ಹಿಂದೆ ವಿಶ್ವ ಸಂಸ್ಥೆ ಜನರಲ್ ಅಸೆಂಬ್ಲಿಯಲ್ಲಿ ಮುಷರಫ್-ವಾಜಪೇಯಿ ಪರಸ್ಪರ ದೂಷಿಸಿಕೊಂಡಿದ್ದರು. ಬಿಸಿ ವಾತಾವರಣ ನಿರ್ಮಾಣಗೊಂಡು ಮಾತುಕತೆಯೇ ಇಲ್ಲ ಎನ್ನುವಷ್ಟು ಹೋಗಿತ್ತು. ಸರ್ಕಾರದ ಈ ನಿರ್ಧಾರ ಉತ್ತಮ ಹೆಜ್ಜೆ. ಆದರೆ ನಿರ್ಧಾರಗಳನ್ನು ಪ್ರಕಟಿಸಿದರೆ ಸಾಲದು. ಅವುಗಳ ಜಾರಿಯತ್ತ ಗಮನ ನೀಡಬೇಕು. ಭಯೋತ್ಪದನೆಯ ಚಟುವಟಿಕೆಗಳ ವಿರುದ್ಧ ಎಚ್ಚರಿಕೆ ವಹಿಸುತ್ತಲೇ, ಕಾಶ್ಮೀರದ ವಿವಿಧ ಸಂಘಟನೆಗಳ ಮುಖಂಡರ ಜತೆ ಮಾತುಕತೆ ನಡೆಸುವುದು ಅಗತ್ಯ. ಈ ಮಾತುಕತೆ ಯಾವುದೇ ಬಾಹ್ಯ ದೇಶಗಳ (ಅಮೆರಿಕಾ) ಒತ್ತಡದಿಂದ ಆಗಬಾರದು. ಬದಲಾಗಿ ನೆರೆಹೊರೆಯ ದೇಶಗಳ ಜತೆ ಉತ್ತಮ ಸಂಬಂಧವಿರಿಸಿಕೊಳ್ಳುವ ಭಾರತ ದೇಶದ ವಿದೇಶಾಂಗ ನೀತಿಯ ಪರಂಪರೆಯ ಭಾಗವಾಗಿ ಬರಬೇಕು.

ಹುರಿಯತ್ ಜೊತೆಗಿನ ಮಾತುಕತೆಗಳ ಕುರಿತಂತೆ ಸರ್ಕಾರದ ಹಿಂದಿನ ಪ್ರಯತ್ನಗಳು 'ಪ್ರಾಮಾಣಿಕ' ತನದಿಂದ ಕೂಡಿದ್ದವು ಎನ್ನುವಂತಿಲ್ಲ. ಮೊದಲು ಕೆ.ಸಿ.ಪಂತರನ್ನು ಇದಕ್ಕಾಗಿ



ನೇಮಿಸಲಾಯಿತು. ನಂತರ ರಾಮಜೇಠ್ಮಲಾನಿ - ಅಧಿಕೃತವಾಗಿ, ಅಧಿಕಾರರಹಿತವಾಗಿ. ಬಳಿಕ ಅರುಣ್ ಜೆಟ್ಲಿ. ಇತ್ತೀಚೆಗಷ್ಟೇ ಎನ್.ಎನ್.ವೋಹ್ರಾ ರವರಿಗೆ ಈ ಜವಾಬ್ದಾರಿ ನಿರ್ವಹಿಸಲು ಸೂಚಿಸಲಾಗಿದೆ. ಆದರೆ ಆತ ಕೆಲಸ ಆರಂಭಿಸುವ ಮೊದಲೇ ಸಚಿವಸಂಪುಟ ಅಡ್ವಾಣಿಯನ್ನು ನೇಮಕ ಮಾಡಿದೆ!

ಈ ಹಿಂದಿನ ಪ್ರಯತ್ನಗಳ ಫಲಶ್ರುತಿ ಏನಾಯಿತು? ಈ ಬಗ್ಗೆ ದೇಶದ ಉನ್ನತ ಪ್ರಜಾಪ್ರಭುತ್ವೀಯ ಅಂಗವಾದ ಸಂಸತ್ತು ಮತ್ತು ದೇಶದ ಜನತೆಗೆ ಏನೂ ತಿಳಿಸದೇ ಕಗ್ಗತ್ತಲಲ್ಲಿ ಇಡಲಾಗಿದೆ. ಕೆ.ಸಿ.ಪಂತ್‌ರವರಾದರೂ ರಾಷ್ಟ್ರದ ಮುಖ್ಯ ರಾಜಕೀಯ ಪಕ್ಷಗಳ ನಾಯಕರೊಂದಿಗೆ ಅಭಿಪ್ರಾಯ ಕೇಳಲಾದರೂ ಮುಂದಾಗಿದ್ದರು. ಆದರೆ ಉಳಿದವರೂ, ಸರ್ಕಾರವೂ ಇದರತ್ತ ಹೊರಟೂ ಇಲ್ಲ. ಇನ್ನೂ ಗೃಹ ಸಚಿವ ಅಡ್ವಾಣಿಯವರು ಹೇಗೆ ಈ ಬಗ್ಗೆ ಮುಂದುವರಿಯಲಿದ್ದಾರೆ ಹಾಗೂ ಅವರ ಅಜೆಂಡಾಗಳು ಏನು ಎಂಬುದನ್ನು ಇನ್ನೂ ಪ್ರಕಟಿಸಿಲ್ಲ. ಅದನ್ನು ದೀಪಾವಳಿಯ ನಂತರವೇ ತಿಳಿಸಲಾಗುವುದೆಂದು ಹೇಳಲಾಗಿದೆ. ಇದಕ್ಕಾಗಿ ದೇಶದ ಜನತೆ ಕಾಯಬೇಕಾಗಿದೆ!

**ಈಗ ಬೇಕಿರುವುದು ಪ್ರಾಮಾಣಿಕತೆ ಮತ್ತು ಪಾರದರ್ಶಕತೆ. ಗಂಭೀರವಾಗಿ - ಪ್ರಾಮಾಣಿಕವಾಗಿ ಸರ್ಕಾರ ತನ್ನ ಹಲವು ಕ್ರಮಗಳನ್ನು ಮುತುವರ್ಜಿಯಿಂದ ಹೆಜ್ಜೆ ಇಡುತ್ತದೆ ಎಂಬ ಆಶಯ ದೇಶದ ಜನರದ್ದು.**

# ......ಆಶ್ವಾಸನೆಗಳಿಗೆ ಕೊನೆ ಇಲ್ಲ

ಪುಟ 2 ರಿಂದ

ಮ್ಯಾನೇಜರ್ ಪಿ.ಶರೀಫ್ ಹೇಳಿಕೆ ನೀಡಿ 1979 ರ ಮಾರ್ಚ್ ಅಂತ್ಯದೊಳಗೆ ರೈಲು ಮಾರ್ಗ ಸಿದ್ಧವಾಗುವುದೆಂದೂ, ಮೊದಲು ಸಾಗಾಣಿಕೆ (ಗೂಡ್ಸ್)ಗಾಗಿ ರೈಲು ಓಡಿಸಲಾಗುವುದೆಂದೂ ಸೂಚಿಸಿದ್ದರು. ಅದಾದ ಕೆಲವು ವರ್ಷಗಳ ನಂತರ ಮೀಟರ್ ಗೇಜ್‌ನಲ್ಲಿ ರೈಲು ಆರಂಭಗೊಂಡಿತು. ಆದರೆ ಈಗ ಅದನ್ನು ಕಿತ್ತುಹಾಕಲಾಗಿದೆ.

ಇದೀಗ ಪುನಃ ಮಂಗಳೂರು - ಹಾಸನ ಬ್ರಾಡ್‌ಗೇಜ್ ಪೂರ್ಣಗೊಳಿಸಲು ಕೇಂದ್ರ ರೈಲ್ವೆ ಇಲಾಖೆ ಮತ್ತು ರಾಜ್ಯ ಸರ್ಕಾರ ಒಪ್ಪಂದ ಮಾಡಿಕೊಂಡಿದೆ. 274 ಕೋಟಿ ರೂ. ಅಂದಾಜು ವೆಚ್ಚದ ಈ ಯೋಜನೆಯನ್ನು 2004 ರ ಡಿಸೆಂಬರ್‌ಗಿಂತ ಮೊದಲೇ ಪೂರ್ಣಗೊಳಿಸುವ ಇಂಗಿತವನ್ನು ವ್ಯಕ್ತಪಡಿಸಿದೆ.

ಬೆಂಗಳೂರು - ಮಂಗಳೂರು ರೈಲು ಮಾರ್ಗ 40 ವರ್ಷಗಳಿಂದ ನೆನಗುದಿಗೆ ಬಿದ್ದಿರುವಾಗ 14 ತಿಂಗಳುಗಳಲ್ಲಿ ಹಾಸನ-ಮಂಗಳೂರು ಮಾರ್ಗ ಮುಗಿಸುವುದು ಸಾಧ್ಯವೇ? ಇದು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಚುನಾವಣಾ ಪೂರ್ವದ ಹೇಳಿಕೆ ಎಂದು ಅಮೋದಿಸುತ್ತದೆ. ಅಥವಾ ಹಾಸನ-ಮಂಗಳೂರು ಮಾರ್ಗವನ್ನು ಹೇಗಾದರೂ ಮುಗಿಸಿ, ಬೆಂಗಳೂರು-ಹಾಸನ ಮಾರ್ಗವನ್ನು ಅಲ್ಲಿಗೇ ಕೈಬಿಡುವ ಆಲೋಚನೆ ಇರಬೇಕು. ಫೆಬ್ರವರಿಯಲ್ಲಿ ಮಂಡಿಸಿದ ಬಜೆಟ್‌ನಲ್ಲಿ ಬೆಂಗಳೂರು - ಹಾಸನ ಮಾರ್ಗಕ್ಕೆ ಕೇವಲ 8 ಕೋಟಿ ರೂ. ಮಾತ್ರ ನೀಡಲಾಗಿತ್ತು. ಈ ಮಾರ್ಗದ ಒಟ್ಟು ವೆಚ್ಚ 408 ಕೋಟಿ ರೂ. (96-97 ರಲ್ಲಿ ನಿಗದಿಪಡಿಸಿದ್ದು) ಈ ವರೆಗೆ ಖರ್ಚು ಮಾಡಿದ್ದು ಕೇವಲ50 ಕೋಟಿ ರೂ.

ಖಾಸಗಿ ಬಸ್ಸುಗಳ ಲಾಬಿ: ಕರ್ನಾಟಕದ ಅಬಕಾರಿ, ವಿದ್ಯಾಸಂಸ್ಥೆಗಳ ಲಾಬಿಯನಂತರ ಸರ್ಕಾರದ ಮೇಲೆ ಹೆಚ್ಚು ಪ್ರಭಾವ ಬೀರುವವರು, ಖಾಸಗಿ ಸಾರಿಗೆ ಸಂಸ್ಥೆಗಳ ಮಾಲಕರು. ಇಲ್ಲಿ ಒಂದೆರೆಡು ಬಸ್ಸು, ಲಾರಿಗಳನ್ನು ಇಟ್ಟುಕೊಂಡವರು ದೊಡ್ಡ ಮಾಲಕರೇನಲ್ಲ, ಆದರೆ 10, 20, 30... 100 ಬಸ್ಸು, ಲಾರಿಗಳನ್ನು ಇಟ್ಟುಕೊಂಡು ದೊಡ್ಡದೊಡ್ಡ ಕುಳಗಳಿದ್ದಾರೆ. ಅವರು ಹೆಚ್ಚಾಗಿ ಕಾಂಗ್ರೆಸ್ ಮತ್ತು ಬಿಜೆಪಿಯ ಮುಖಂಡರುಗಳು. ಒಂದು ವೇಳೆ ರಾಜಕೀಯದಲ್ಲಿ ನೇರವಾಗಿ ಭಾಗವಹಿಸಿದಿದ್ದರೂ, ಆಳುವ ಸರ್ಕಾರಗಳ ಜತೆ ಆತ್ಮೀಯ ಸಂಬಂಧ ಇಟ್ಟುಕೊಂಡವರು. ಅಂತವರಿಂದಾಗಿ ರೈಲು ಮಾರ್ಗ ನಿಧಾನಗತಿಯಲ್ಲಿ ಸಾಗುತ್ತಿವೆ ಎಂಬ ಗುಮಾನಿ ಬರುತ್ತದೆ.

ಮಂಗಳೂರು, ಧರ್ಮಸ್ಥಳ, ಉಡುಪಿ,



ಕುಂದಾಪುರ ಮತ್ತಿತರ ಪ್ರದೇಶಗಳಿಗೆ ದಿನ ನಿತ್ಯ ಸಾಧಾರಣ 160 ಕ್ಕೂ ಹೆಚ್ಚು ಬಸ್ಸುಗಳು ಓಡಾಡುತ್ತವೆ. ಅದರಲ್ಲಿ ಕೆಎಸ್‌ಆರ್‌ಟಿಸಿ ಓಡಿಸುವುದು 89 ಬಸ್ಸುಗಳನ್ನು. ಧರ್ಮಸ್ಥಳಕ್ಕೆ ಪ್ರತಿನಿತ್ಯ 33 ಬಸ್ಸುಗಳು ಹೋಗುತ್ತವೆ. ರಜಾ ದಿನಗಳಲ್ಲಿ ಮತ್ತು ಹಬ್ಬದ ದಿನಗಳಲ್ಲಿ ಧರ್ಮಸ್ಥಳಕ್ಕೆ 20 ರಿಂದ 30 ಹೆಚ್ಚುವರಿ ಬಸ್ಸುಗಳನ್ನು ಓಡಿಸುತ್ತಾರೆ. ಖಾಸಗಿಯವರು ಸಾಧಾರಣ 80 ಬಸ್ಸುಗಳನ್ನು ಓಡಿಸುತ್ತಾರೆ. ಸುಗಮ ಟೂರಿಸ್ಟ್, ಶ್ರೀ ದುರ್ಗಾಂಭ, ಬ್ಲೂಲೈನ್, ವಿಆರ್ ಎಲ್ ಇತ್ಯಾದಿ. ದಿನನಿತ್ಯ ಅಂದಾಜು 8000 ಜನ ಬೆಂಗಳೂರಿನಿಂದ ದ.ಕ ಜಿಲ್ಲೆಗೆ ಪ್ರಯಾಣಿಸಿ ದರೆ ಸಾಧಾರಣ ಅಷ್ಟೇ ಸಂಖ್ಯೆಯ ಪ್ರಯಾಣಿಕರು ಅಲ್ಲಿಂದ ಬೆಂಗಳೂರಿಗೆ ಬರುತ್ತಾರೆ. ಬೆಂಗಳೂರು-ಮಂಗಳೂರು ರೈಲು ಮಾರ್ಗವಾಗಿದ್ದರೆ ಎಷ್ಟು ಆರಾಮವಾಗಿ ಸಂಚರಿಸಬಹುದಿತ್ತು. ಬಿಡಿ, ವೆಚ್ಚವು ವಗಣನೆ ಜನರಿಗೆ ಎಷ್ಟು ಅನುಕೂಲವಾಗುತ್ತಿತ್ತು.

**ಕಿತ್ತುಹಾಕಿದ ರೈಲು ಹಳಿಗಳು ಹೀಗೇ ಇನ್ನೆಷ್ಟು ವರ್ಷ**

ಬ್ರಾಡ್‌ಗೇಜ್ ಮಾರ್ಗ ಸಿದ್ಧವಾಗದೇ ಮೀಟರ್‌ಗೇಜ್ ರೈಲುಗಳನ್ನು ಇಷ್ಟೊಂದು ದೀರ್ಘಕಾಲ ಎಲ್ಲಿಯೂ ಕಿತ್ತು ಹಾಕಿಲ್ಲ. 15 ವರ್ಷಕ್ಕೂ ಮೊದಲು ಮೀಟರ್‌ಗೇಜ್‌ನಲ್ಲಿ ಮಹಾಲಕ್ಷ್ಮಿ ಎಕ್ಸ್‌ಪ್ರಸ್ ಓಡುತ್ತಿತ್ತು. ಅದು ಜನಪ್ರಿಯಗೊಳ್ಳುತ್ತಿದ್ದಂತೆ ಬ್ರಾಡ್‌ಗೇಜ್ ನಿರ್ಮಾಣದ ಹೆಸರಿನಲ್ಲಿ ಕಿತ್ತು ಹಾಕಲಾಯಿತು. ಖಾಸಗಿ ಬಸ್ ಮಾಲಕರು ಎಷ್ಟೊಂದು ಪ್ರಭಾವ ಉಳ್ಳವರು ಎಂಬುದು ಇದರಿಂದ ವ್ಯಕ್ತವಾಗುತ್ತದೆ.

ದ.ಕ., ಉಡುಪಿ ಜಿಲ್ಲೆಗಳಲ್ಲಿ ಓಡಾಡುವ ಸ್ಥಳೀಯ ಪ್ರಯಾಣಿಕರ ಮೇಲೆ ವಿಪರೀತ ಬಸ್ ದರ ಹೆಚ್ಚಿಸುವ ಇವರು ಅದರ ವಿರುದ್ಧ ಜನ ಪ್ರತಿಭಟನೆ ನಡೆಸಿದರೆ, ಗೂಂಡಾಗಳ ಮೂಲಕ ಬೆದರಿಕೆ ಹಾಕುತ್ತಾರೆ.,

**ಅಪರಾಧಿಗಳು**

ಸಾಹಿತಿ ನಿರಂಜನರು ಮಂಗಳೂರು ಬಂದರು ಆದ ಮೇಲಾದರೂ 'ಗಿರಿ ಕಾನನಗಳ ನಡುವಿನಿಂದ ಜುಕುಬುಕು ಬಂಡಿ ಸಾಗಬಹುದು' ಎಂದು ಆಶಿಸಿದ್ದರು. ಹಾಗಾಗಲಿಲ್ಲ. ಖಾಸಗಿ ಬಸ್ ಮತ್ತು ಲಾರಿ ಮಾಲೀಕರ ಲಾಬಿ ಸಣ್ಣದೇನಲ್ಲ. ಮೀಟರ್ ಗೇಜಿನ 'ಜುಕುಬುಕು ಬಂಡಿ' ಕೆಲಕಾಲ ಚಲಿಸಿದರೂ ಹೆಚ್ಚು ದಿನ ಬಾಳಲಿಲ್ಲ. ಬ್ರಾಡ್‌ಗೇಜ್ ಪರಿವರ್ತನೆಗೆಂದು ಮುಚ್ಚಿ 15 ವರ್ಷ ಸಂದರೂ ಬಂಡಿ ಹೊರ ಬರಲಿಲ್ಲ. ದ.ಕ., ಉಡುಪಿ ಜಿಲ್ಲೆಯ ರಾಜಕಾರಣದಲ್ಲಿ 'ನಾ ಮೇಲು, ತಾ ಮೇಲು' ಎನ್ನುವ ಬಿಜೆಪಿ-ಕಾಂಗ್ರೆಸ್ ಪಕ್ಷಗಳೆರಡೂ ದೋಷಿಗಳೇ, ಅಪರಾಧಿಗಳೇ.

ಅಕ್ಟೋಬರ್ 23, 2003 ರಂದು ಕೇಂದ್ರ ರೇಷ್ಮೆ ಇಲಾಖೆ ಮತ್ತು ರಾಜ್ಯ ಸರ್ಕಾರ ಮಾಡಿಕೊಂಡ ಒಪ್ಪಂದದ ಹಾಸನ-ಮಂಗಳೂರು ರೈಲು ಮಾರ್ಗ ದಿಂದಾಗಿ ಒಳನಾಡಿನಿಂದ ಮಂಗಳೂರು ಬಂದರಿಗೆ ಸರಕು ಸಾಗಾಟಕ್ಕೆ ಹೆಚ್ಚಿನ ಆಸ್ಪದವಾಗಲಿದೆ ಎಂದಿದ್ದಾರೆ. ಬಜ್ಪೆ ವಿಮಾನ ನಿಲ್ದಾಣ ಅಂತರ್‍ರಾಷ್ಟ್ರೀಯ ವಿಮಾನ ನಿಲ್ದಾಣವಾಗುವ ಸಂಭವ ಇದೆ ಎಂದು ಹೇಳಿದ್ದಾರೆ.

34 ವರ್ಷಗಳ ಹಿಂದೆ ಸಾಹಿತಿ ನಿರಂಜನರವರೇ ಹೇಳಿದ ಪ್ರಕಾರ ನವಮಂಗಳೂರು ಬಂದರು ಆಗುವ ಮೊದಲೇ, ಸರಕು ಸಾಕಾಣಿಕೆಯ ಅನುಕೂಲಕ್ಕಾಗಿ ಬೆಂಗಳೂರು-ಮಂಗಳೂರು ರೈಲು ಮಾರ್ಗ ಆಗುತ್ತದೆ ಎಂದು ಘೋಷಿಸಲಾಗಿತ್ತು ಹಾಗಾಗಲಿಲ್ಲ. ದೇವನಹಳ್ಳಿ ಅಂತರ್‍ರಾಷ್ಟ್ರೀಯ ವಿಮಾನ ನಿಲ್ದಾಣವೇ ಮರೀಚಿಕೆಯಾಗಿರುವಾಗ ಬಜ್ಪೆ ಅಂತರ್‍ರಾಷ್ಟ್ರೀಯ ವಿಮಾನ ನಿಲ್ದಾಣವಾಗುವುದು ಬರೀ ಪ್ರಚಾರಕ್ಕೆ ಮಾತ್ರ.

**ಕೆ-ರೈಡ್ ಯೋಜನೆ :** ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಹಭಾಗಿತ್ವ (ಶೇ 50-50)ದಲ್ಲಿ, ಕೆ-ರೈಡ್ (Karnataka Rail Infrastrucure Development Enterprises) ಅಡಿಯಲ್ಲಿ ಹಲವಾರು ಯೋಜನೆಗಳನ್ನು ತರದಿದ್ದು ಯಾವುದೂ ಕಾರ್ಯರೂಪಕ್ಕೆ ಬರಲಿಲ್ಲ. 997 ಕೋಟಿ ರೂ. ವೆಚ್ಚದ ಹುಬ್ಬಳ್ಳಿ-ಅಂಕೋಲ, 262 ಕೋಟಿ ರೂ. ವೆಚ್ಚದ ಗದಗ್-ಬಿಜಾಪುರ-ಸೋಲಾಪುರ 159 ಕೋಟಿ ರೂ. ನ ಹೊಸಪೇಟೆ-ಬಳ್ಳಾರಿ-ಗುಂತಕಲ್ ಜೋಡಿ ಮಾರ್ಗ, ಮೊದಲಾದ ಯೋಜನೆಗಳು ಇದರಲ್ಲಿ ಒಳಗೊಂಡಿವೆ. ಆದರೆ ಯಾವುದೇ ಯೋಜನೆಗಳು ಭರದಿಂದ ಸಾಗುತ್ತಿಲ್ಲ.

ಬದಲಾಗಿ, ಹೊಸತಾಗಿ ಕೇಂದ್ರ ರೈಲ್ವೆ ಇಲಾಖೆಯ ರಾಜ್ಯ ಸಚಿವರಾಗಿ ನೇಮಕಗೊಂಡ ಬಸವನಗೌಡ ಪಾಟೀಲ್ ಯತ್ನಾಳ್ ಅಲ್ಲಿಂದಿಲ್ಲಿಗೆ ಭರದಿಂದ ಓಡಾಡುತ್ತಿದ್ದಾರೆ. ಕೇಂದ್ರದಲ್ಲಿ ಬಿಜೆಪಿ ನೇತೃತ್ವದ ಸರ್ಕಾರಕ್ಕೆ ಅಧಿಕಾರಕ್ಕೆ ಬಂದ ನಂತರದ ಐದು ರೈಲ್ವೆ ಬಜೆಟ್‌ಗಳನ್ನು ಪರಿಶೀಲಿಸಿದರೆ, ರಾಜ್ಯದ ರೈಲ್ವೆ ಯೋಜನೆಗಳಿಗೆ ನೀಡಿದ ಹಣ ಅತ್ಯಲ್ಪ. ಆದ್ದರಿಂದ ಹಾಸನ-ಮಂಗಳೂರು ರೈಲು ಮಾರ್ಗಕ್ಕೆ ಸಂಬಂಧಿಸಿದ ಒಪ್ಪಂದವೂ ಕೂಡಾ ಕಸದ ಬುಟ್ಟಿಗೆ ಸೇರುವ ಸಂಭವವೇ ಹೆಚ್ಚು.

ಅಂದಿನ ಡಿವೈಎಫ್‌ಐ, ರಾಜ್ಯ ಮತ್ತು ದ.ಕ ಜಿಲ್ಲೆಯಲ್ಲಿ ಕೊಂಕಣ ರೈಲ್ವೆಗಾಗಿ ಹೋರಾಟ ನಡೆಸಿತ್ತು. ಗದಗ-ಬಿಜಾಪುರ ಮಾರ್ಗಕ್ಕಾಗಿ ಬಿಜಾಪುರದ ನಾಗರಿಕರು ಹೋರಾಡುತ್ತಿರುವಂತೆ ಈ ರೈಲಿಗಾಗಿಯೂ ಹೋರಾಡದೆ ಅನ್ಯ ಮಾರ್ಗವಿಲ್ಲವೆನಿಸುತ್ತದೆ. ಆಗ ಮಾತ್ರವೇ 40 ವರ್ಷಗಳಿಂದ ನೆನೆಗುದಿಗೆ ಬಿದ್ದಿರುವ ಯೋಜನೆಗೆ ಮುಕ್ತಿ ಸಾಧ್ಯವಾದೀತು.

• ಬಾಲಕೃಷ್ಣ ಶೆಟ್ಟಿ



ದುಡಿದ ಒಡಲು ಬರಿದೇ ಬರಿದು

ರೈತರ ಆತ್ಮಹತ್ಯೆಗಳ ದುರಂತ ಸರಣಿಯ ಬೆನ್ನ ಹಿಂದೆಯೇ ಸಾಗಿಬರುತಿದೆ ಹಸಿವಿನ ಸಾವುಗಳು. ಈಚಿನ ದಿನಗಳಲ್ಲೇ ವರದಿಯಾದಂತೆ ಬಳ್ಳಾರಿ ಜಿಲ್ಲೆಯಲ್ಲೇ ಎರಡನೇ ಸಾವು ಘಟಿಸಿದೆ. ಕರ್ನಾಟಕ ಸರ್ಕಾರದ ಸಚಿವರು ಅದಿಕಾರಿಗಳು ಈ ಸಾವುಗಳನ್ನು ಅಲ್ಲೆಗಳೆದು ಮಾನ ಮುಚ್ಚಿಕೊಳ್ಳಲು ಹೆಣಗುತ್ತಿದ್ದಾರೆ. ಆದರೆ ಸಹಜ ಸಾವೆಂಬ ಹಸಿವಿನ ಸಾವಿನ ಕಗ್ಗೊಲೆಯ ಕೌರ್ಯಗಳನ್ನು, ಆದರ ವಿವಿಧ ಮಗ್ಗಲುಗಳನ್ನು ವಿಶಿಷ್ಟವಾಗಿ ತೆರೆದಿಟ್ಟಿದ್ದಾರೆ ಲೇಖಕರು. ಈಗ ಕರ್ನಾಟದಲ್ಲಿ ಹಸಿವಿನ ಸಾವಿನ ಸರಣಿ ಆರಂಭಗೊಂಡಿದೆಯೇ? ಓದಿ...

# ಹಸಿವಿನ ಸಾ

**ಈ**ಚಿನ ದಿನಗಳಲ್ಲಿ ಹಸಿವಿನ ಸಾವುಗಳು ಸಾಮಾನ್ಯವಾಗುತ್ತಿವೆ. ಅದೇ ರೀತಿ ರೈತರ ಆತ್ಮಹತ್ಯೆಗಳು ಕೂಡ. ಆದರೆ ಆಘಾತಕಾರಿಯಾದ ಬೆಳವಣಿಗೆಯೆಂದರೆ ನೀರಾವರಿ ಪ್ರದೇಶದ ಕೂಲಿಕಾರರು ಹಸಿವಿನ ಸಾವಿಗೀಡಾಗುತ್ತಿರುವುದು.

ಬಳ್ಳಾರಿ ಜಿಲ್ಲೆಯ ಬಳ್ಳಾರಿ ತಾಲೂಕಿನ ಕುಪ್ರಸಿದ್ಧ ವಣೇನೂರು ಗ್ರಾಮಪಂಚಾಯ್ತಿಗೆ ಸೇರಿದ ಚಿಕ್ಕ ಗ್ರಾಮ 'ಕಲ್‌ಕುಡ್ಲಿಳು' ಉರುಫ್ ಕೆ.ಕೆ.ಹಾಳ್ ಗ್ರಾಮದ ಕೂಲಿಕಾರ 'ವೀರಾಸ್ವಾಮಿ' ಅಸಹಜವಾಗಿ ಹಸಿವಿನ ಸಾವಿಗೀಡಾಗಿರುವ ಘಟನೆ 05.10.2003 ರಂದು ಘಟಿಸಿದೆ.

ಸಹಜವಾಗಿಯೇ ಪ್ರತಿಯೊಬ್ಬರೂ ಈ ಘಟನೆಯನ್ನು ನಂಬುತ್ತಿಲ್ಲ. ತುಂಗಭದ್ರಾ ನದಿಯ ಬಲದಂಡೆ ಹೆಚ್.ಎಲ್.ಸಿ ಕಾಲುವೆ ಹಾಗೂ ಎಲ್.ಎಲ್.ಸಿ ಕಾಲುವೆಯಿಂದ ವರ್ಷದ11 ತಿಂಗಳು ನೀರಾವರಿಯಾದ ಪ್ರದೇಶದಲ್ಲಿ ಕೂಲಿಕಾರನೊಬ್ಬ ಹಸಿವಿನಿಂದ ಸಾಯುತ್ತಾನೆಂದರೆ ಖಂಡಿತವಾಗಿಯೂ ನಂಬಲಾಗದ್ದು.

ಜಿಲ್ಲಾಧಿಕಾರಿ ಜಯರಾಂರವರು ಇಂತಹ ಹಸಿವಿನ ಸಾವು ಘಟಿಸಿಲ್ಲ, ಅದೊಂದು ಅನಾರೋಗ್ಯದಿಂದಾಗಿ ಘಟಿಸಿದ ಸಹಜ ಸಾವೆಂದು ಟೀವಿ ಮಾಧ್ಯಮಕ್ಕೆ ಅವರು ಆಸ್ಪತ್ರೆಯಿಂದ ದಾಖಲಾತಿ ಒದಗಿಸಿ ಪ್ರತಿಕ್ರಿಯಿಸಿದ್ದಾರೆ. ಆದರೆ ಅದು ನಿಜ. ಮುಂದಿನ ದಿನಗಳಲ್ಲಿ ಮತ್ತಷ್ಟು ಇಂತಹದ್ದು ಘಟಿಸಿದರೇ ಆಶ್ಚರ್ಯ ಪಡಬೇಕಿಲ್ಲ.

ಕೆ.ಕೆ.ಹಾಳ್ ಒಂದು ಪುಟ್ಟ ಗ್ರಾಮ. ಇಡೀ ಗ್ರಾಮದಲ್ಲಿ ಒಟ್ಟು 300 ಮನೆಗಳಿದ್ದರೆ ಭೂಮಿಯನ್ನು ಹೊಂದಿರುವ ಕುಟುಂಬಗಳು ಕೇವಲ ಒಂದುನೂರು ಮಾತ್ರವೇ? 200 ಕುಟುಂಬಗಳು ಪೂರ್ಣವಾಗಿ ವ್ಯವಸಾಯದ ಕೂಲಿ ಕೆಲಸ ನಂಬಿಕೊಂಡವುಗಳು. ಒಂದು ತುಂಡು ಜಮೀನು ಅವುಗಳಿಗಿಲ್ಲ. ಇವರಲ್ಲಿ ಹೆಚ್ಚಿನವರು ಮನೆಯೆಂಬ ಮಣ್ಣಿನ ಗೂಡಿನಲ್ಲಿ ಜೀವನ ಕಳೆಯುತ್ತಿದ್ದಾರೆ.

ಈ ಗ್ರಾಮದಲ್ಲಿ ಅತೀ ಹೆಚ್ಚು ಜಮೀನು ಹೊಂದಿರುವ 2-3 ಕುಟುಂಬಗಳಿವೆ. ಅತೀ ಹೆಚ್ಚು ಜಮೀನು ಹೊಂದಿದ ಕುಟುಂಬಕ್ಕೆ ಇರುವುದು ಕೇವಲ 9 ಎಕರೆ ಮಾತ್ರವೇ. ಅಂದರೆ ಉಳಿದ 97 ಕುಟುಂಬಗಳು ಹೊಂದಿದ ಹಿಡುವಳಿ ಕೇವಲ 2-3 ಎಕರೆ ಮಾತ್ರವೇ.

ಅದೇ ರೀತಿ ಇಡೀ ಗ್ರಾಮಕ್ಕೆ ಅಧಿಕೃತವಾಗಿ ಸಾಗುವಳಿಯೋಗ್ಯ ಜಮೀನಿರುವುದೇ 500-600 ಎಕರೆ. ನೀರಾವರಿಗೆ ಅಧಿಕೃತವಾಗಿ ಒಳಗಾಗಿರುವುದು ಕೇವಲ 250 ಎಕರೆ ಮಾತ್ರವೇ.

ಸಣ್ಣ ಹಿಡುವಳಿಗಳು ಮತ್ತು ಇಡೀ ಗ್ರಾಮಕ್ಕೆ 300 ಕುಟುಂಬಕ್ಕೆ ಕೇವಲ 250 ಎಕರೆ ಜಮೀನಿರುವುದೇ ಈ ಗ್ರಾಮದ ಕೂಲಿಕಾರರಿಗೆ ಮೊದಲ ಮುಳುವಾಗಿದೆ.

ಅದೇ ಸಂದರ್ಭದಲ್ಲಿ ಈ ಗ್ರಾಮದಲ್ಲಿ ಒಟ್ಟು 6 ಟ್ರಾಕ್ಟರ್‌ಗಳು ಈ 250 ಎಕರೆ ಜಮೀನಿನಲ್ಲಿ ಕಾರ್ಯನಿರ್ವಹಿಸುತ್ತಿವೆ. ಮಾತ್ರವಲ್ಲ ಕಳೆದ 3-4 ವರ್ಷಗಳಿಂದ ಕೊಯ್ಲುಯಂತ್ರಗಳು ಈ ಪ್ರದೇಶದಲ್ಲಿ ಕಾರ್ಯನಿರ್ವಹಿಸುತ್ತಿರುವುದು ಮತ್ತೊಂದು ಮುಳುವಾಗಿದೆ. ಕಳೆದ 3-4 ವರ್ಷಗಳಿಂದ ಬಾಧಿಸುತ್ತಿರುವ ತೀವ್ರ ಬರಗಾಲದಿಂದಾಗಿ ತುಂಗಭದ್ರಾ ನದಿಗೆ ನೀರು ನೀರಿಕ್ಷಿತ ಮಟ್ಟದಲ್ಲಿ ಸಂಗ್ರಹಿಸಲಾಗುತ್ತಿಲ್ಲ. ಪರಿಣಾಮವಾಗಿ ಕಳೆದೆರಡು ವರ್ಷಗಳಿಂದ ಕೇವಲ ಒಂದು ಬೆಳೆಗೆ ಮಾತ್ರವೇ ನೀರು ದೊರೆಯುತ್ತಿದೆ.

ಈ ಒಂದು ಬೆಳೆಯು (ಭತ್ತ) ಕೇವಲ ನಾಲ್ಕು ತಿಂಗಳ ಫಲವಾಗಿದ್ದು, ಇದರಲ್ಲಿ ಕೂಲಿ ಕೆಲಸವೆಂದರೆ ಬಿತ್ತನೆಯ ಒಂದು ತಿಂಗಳು ನಂತರ ಕೊಯ್ಲಿನ ಒಂದು ತಿಂಗಳು ಅಂದರೆ ಇಡೀ ವರ್ಷ ಕೇವಲ 2 ತಿಂಗಳು ಮಾತ್ರವೇ ದುಡಿಮೆಯ ದಿನಗಳು. ಈ ಪರಿಸ್ಥಿತಿಯು ಕೂಲಿಕಾರನ ಮುಳುವಾಗಿದೆ.

ಸಣ್ಣ ಹಿಡುವಳಿದಾರರು ತಮ್ಮ ಸ್ವಂತ ಜಮೀನಿನಲ್ಲಿ ತಮ್ಮ ಕುಟುಂಬವೇ ಪೂರ್ಣಶ್ರಮ ಹಾಕಬೇಕಾಗುತ್ತದೆ. ಕೆಲ ದಿನಗಳಲ್ಲಿ ಹೆಚ್ಚಿನ ಕೆಲಸದ ಒತ್ತಡವಿದ್ದಾಗ ಸಣ್ಣ ಹಿಡುವಳಿದಾರರ 2-3 ಕುಟುಂಬಗಳು ಒಟ್ಟಾಗಿ ಸಹಕಾರಿ ಪದ್ಧತಿ ಮೇಲೆ (ಅಂದರೆ, 3 ಕುಟುಂಬಗಳು ಒಟ್ಟಾಗಿ ತಮ್ಮ ಇಡೀ ಜಮೀನಿನಲ್ಲಿ ದುಡಿಯುತ್ತವೆ) ಕಾರ್ಯನಿರ್ವಹಿಸುತ್ತವೆ.

ಹೆಚ್ಚು ಕಡಿಮೆ ಕೂಲಿಕಾರರನ್ನು ಬಳಸುವುದೇ ಇಲ್ಲ. ಹೀಗಾಗಿ ಕಳೆದ ವರ್ಷ ಕೂಲಿಕಾರರ ಸರಾಸರಿ ದುಡಿಮೆ 40 ದಿನಗಳನ್ನೂ ದಾಟಿದೆ.

ಇಲ್ಲಿ 11 ತಿಂಗಳು ನೀರಾವರಿಯೆಂದು ಹೇಳಲಾದ ಪ್ರದೇಶದಲ್ಲಿ ಮಹಿಳಾ ಕೂಲಿಕಾರರಿಗೆ ಸರಾಸರಿ-10 ರೂ.ಗಳು ಒತ್ತಡವಿದ್ದಾಗ 15 ರೂ.ಗಳು. ಪುರುಷ ಕೂಲಿಕಾರರಿಗೆ ಸರಾಸರಿ 20-25 ಒತ್ತಡವಿದ್ದಾಗ 30-35 ರೂ.ಗಳಾಗಿವೆ.

ಕೂಲಿಕಾರರ ಕುಟುಂಬವಿಡೀ ಅಂದರೆ ಗಂಡ ಮತ್ತು ಹೆಂಡತಿ ಇಬ್ಬರು ಸರಿಸುಮಾರು ಈ 40 ದಿನಗಳು ಒಟ್ಟಾಗಿ ದುಡಿದರೆನ್ನಿ, ಅವರ



ಈ ವರುಷದ ಬರಗಾಲದ ಹಸಿವಿಗೆ ಮೊದಲ ಬಲಿ ಬಳ್ಳಾರಿಯಲ್ಲೇ...

## "ರೊಕ್ಕ ಇಲ್ದೇ ಯಾವ್ದಾರ ಕೊಡ್ತಾರಾ ಸ್ವಾಮೀ....."

32 ವರ್ಷದ ಹರೆಯದ ಕೂಲಿಕಾರ ಎರ್ರಿಸ್ವಾಮಿ ಹಸಿವಿಗೆ ಬಲಿಯಾದ ದುರ್ದೈವಿ. ಬಳ್ಳಾರಿ ತಾಲೂಕಿನಿಂದ ಹೊರಬಂದ ಎರಡನೇ ಪ್ರಕರಣವಿದು.

ಹೆಂಡತಿ, ತಮ್ಮ, ತಾಯಿ ಮೂವರು ಅಪ್ರಾಪ್ತ ಹೆಣ್ಣುಮಕ್ಕಳನ್ನು ಅಗಲಿದ್ದಾನೆ. ಒಟ್ಟು ಕುಟುಂಬದ ಸದಸ್ಯರ ಸಂಖ್ಯೆ-07. ಎರ್ರಿಸ್ವಾಮಿಯೇ ಕುಟುಂಬದ ಆಧಾರ. ತಾಯಿ:ಕೆ.ರಂಗಮ್ಮ (56 ವರ್ಷ) ಅವರಿವರ ಮನೆಯ ಚಾಕರಿ (ಪಾತ್ರೆ ತೊಳೆಯುವುದು ಮುಂತಾಗಿ) ಆಗೀಗ ಮಾಡಿ ಅವರು ಕೊಟ್ಟ ಉಳಿಕೆ ಆಹಾರದೊಂದಿಗೆ ಜೊತೆಯಾಗಿದ್ದಾಳೆ. ಹೆಂಡತಿ ಶಿವಮ್ಮ ಕೂಲಿ ಇರುವಾಗ ಕೈಜೋಡಿಸುತ್ತಾಳೆ. ತಮ್ಮ ವೆಂಕಟೇಶನಿಗೆ 18 ವರ್ಷ, ಕಳೆದೆರಡು ಮೂರು ತಿಂಗಳಿನಿಂದ ಟ್ರಾನ್ಸ್‌ಪೋರ್ಟ್‌ನಲ್ಲಿ ಕ್ಲೀನರ್ ಆಗಿ ಸೇರಿಕೊಂಡಿದ್ದಾನೆ. ಊಟೋಪಚಾರ ಪಡೆದು ದಿನಕ್ಕೆ 10 ರೂ ನಂತರ ಕೂಲಿ ಪಡೆಯುತ್ತಾನೆ. ದಿನಂಪ್ರತಿ ಊರಿಗೆ ಹೋಗಿ ಬರಲಾಗದು. ಬಸ್ ಛಾರ್ಜ್ ಕನಿಷ್ಟವೆಂದರೂ 15 ರೂ.ಗಳಾಗುತ್ತದೆ. ಈ 2-3 ತಿಂಗಳಿನಿಂದ ಈತ ಕುಟುಂಬಕ್ಕೆ ಹೊರೆಯಲ್ಲ ಎಂಬುದೇ ಆತನ ಸಹಕಾರ!

ಕಳೆದ ಜನವರಿಯಿಂದ ಕೂಲಿ ಕೆಲಸವಿಲ್ಲ. ಕೆಲಸವಿಲ್ಲದ ಕೂಲಿಕಾರನನ್ನು ನಂಬುವರಾರು? ಇವರಿಗಾಗಿ ಸಾಲವನ್ನು ಏನನ್ನೂ ನಂಬಿಕೊಟ್ಟಾರು. ಕಿರಾಣಿ ಅಂಗಡಿಯವನು ಎಷ್ಟೆಂದು ನಂಬಿಯಾನು? ಈ 8-10 ತಿಂಗಳಲ್ಲಿ ಉಂಡ ದಿನಗಳೆಷ್ಟು? 2 ತಿಂಗಳಿನಿಂದಲೇ ಅಸ್ವಸ್ಥನಾದ. ಗ್ರಾಮದ ಕೆಲವರು 300 ರೂ.ಗಳನ್ನು ಈ ಸಂಕಷ್ಟದ ನಡುವೆಯೂ ತೋರಿಸಿಕೊಳ್ಳಲು ಸಂಗ್ರಹಿಸಿಕೊಟ್ಟರು. ಅದೇನಾಯಿತು. ಕೊನೆಯ ದಿನಗಳಲ್ಲಿ ನಿತ್ರಾಣವಾಯಿತೆಂದು ಡಾಕ್ಟರ್ ಹತ್ತಿರ (ಆರ್.ಎಂ.ಪಿ) ಹೋದ. ನಿತ್ರಾಣವೆಂದು ಗ್ಲುಕೋಸ್ ಏರಿಸಿ ಒಂದಷ್ಟು ಮಾತ್ರೆ ನೀಡಿದರು. ಹಿಟ್ಟಿಲ್ಲದೆ ಅದ್ಹೇಗೆ ಬದುಕಿಸಿತು?

ಮರಳಿ ಗ್ರಾಮದವರೆಲ್ಲಾ ಮತ್ತೆ ಹಣ ಸಂಗ್ರಹಿಸಿದರು. ಶವಸಂಸ್ಕಾರ ಮಾಡಿದರು.

ನಾವು ಆತನ ಮನೆ ಕಡೆ ಹೆಜ್ಜೆ ಹಾಕಿದೆವು. ಮೇಲ್ಛಾವಣಿಯ ಆಕಾಶ ಮಾತ್ರವೇ ನಾಲ್ಕು ಮಣ್ಣಿನ ಗೋಡೆಗೆ ಹೊದಿಕೆಯಾಗಿದೆ. ಇದು ಎರ್ರಿಸ್ವಾಮಿಯ ಮನೆಯೆಂಬ ಹಂದಿಗೂಡು. ಗೋಡೆಗಳೆಲ್ಲಾ ಮಳೆಗೆ ಅರ್ಧಂಬರ್ಧ ಬಿದ್ದುಹೋಗಿವೆ? ಪ್ಲಾಸ್ಟಿಕ್ ಹಾಳೆಯಿಂದ ಈಗ ಮುಚ್ಚಲಾಗಿದೆ.

**ತಾಯಿ ರಂಗಮ್ಮನ ಹೇಳಿಕೆ**

*ಐಕ್ಯರಂಗ:* ನಿಮ್ಮ ಮಗ ಟಿ.ಬಿ. ಕಾಯಿಲೆಯಿಂದ ಸತ್ತಿದ್ದಾನೆಂದು ಜಿಲ್ಲಾಧಿಕಾರಿಗಳು ಹೇಳುತ್ತಾರಲ್ಲ?

*ಕೆ.ರಂಗಮ್ಮ:* ಇಲ್ಲ ಸಾಮಿ ಅವನಿಗೆ ಟಿ.ಬಿ. ಕಾಯಿಲೆ ಇರಲಿಲ್ಲ.

*ಐಕ್ಯರಂಗ:* ಹಿಂದೆ ಎಂದಾದರೂ ಟಿ.ಬಿ. ಆಸ್ಪತ್ರೆಗೆ ಹೋಗಿದ್ದೀರಾ?

*ಕೆ.ರಂಗಮ್ಮ:* ಹೌದು ಸಾಮಿ 3 ವರ್ಷದ ಕೆಳಗೆ ಹೋಗಿದ್ದೆವು.ಡಾಕ್ಟರು ಸಾಬರು ಚೆಕ್ ಮಾಡಿ ಟಿ.ಬಿ. ಇಲ್ಲ ಹೋಗಿ ಎಂದು ಕಳಿಸಿದ್ದರು.

*ಐಕ್ಯರಂಗ:* ಮೋಕಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಮಾಡಿಸಿದ್ದೀರಂತಲ್ಲಾ?

*ಕೆ.ರಂಗಮ್ಮ:* ಯಾವ ಆಸ್ಪತ್ರೆಗೂ ಹೋಗಿಲ್ಲಾ ಸಾಮಿ. ಸತ್ಯವಾಗಲೂ ಮೋಕಾ ಆಸ್ಪತ್ರೆಗೆ ಹೋಗಿಲ್ಲ.

*ಐಕ್ಯರಂಗ:* ನೀವೂ ಕಾಯಿ ಪಲ್ಯೆ ಮಾರಾಟ ಮಾಡಿ- ನಿಮ್ಮ ಆರೋಗ್ಯ ತೋರಿಸಿದ್ದೀರಂತಲ್ಲಾ?

*ರಂಗಮ್ಮ:* ನನ್ನ ಗಂಡ ಇದ್ದಾಗ ಅಂದ್ರೆ 12-15 ವರ್ಷದ ಹಿಂದೆ ಕಾಯಿಪಲ್ಯೆ ಮಾರಾಟಕ್ಕೆ ಹೋಗ್ತಾ ಇದ್ದೆ. ಅದು ಬಿಟ್ಟು 12 ವರ್ಷದ ಮೇಲಾತು. ನನಗ ದುಡಿಯಾಕೆ ಆಗಾದಿಲ್ಲ. ಅಲ್ಲೆ ಊರಾಗ ಯಾರಾರ ನಿಮ್ಮಂತಹವರು ಪಾತ್ರೆ-ಗೀತ್ರೆ ತೊಳೆದುಕೊಂಡು - ಕಸಹೊಡಿ ಅಂದ್ರೆ- ಆ ಕೆಲಸ ಮಾಡ್ತೀನಿ ಸಾಮಿ. ಅದರಿಂದೇನು ಆದಾಯವಿಲ್ಲ. ಯಾವಾಗ್ಲೊಮ್ಮೆ ಕೊಟ್ಟದ್ದು ತಿಂದಬಂದಷ್ಟೆಯಾ.

*ಐಕ್ಯರಂಗ:* ನಮ್ಮ ಮಗ ಸಣ್ಣವನು ವೆಂಕಟೇಶ ದುಡಿದು ಎರ್ರಿಸ್ವಾಮಿಗೆ ನೆರವಾಗಿದ್ದನಂತಲ್ಲಾ?

*ರಂಗಮ್ಮ:* ಅಂವ್ನು 3-4 ತಿಂಗಳ ಕೆಳಗ ಹೋದವನು ಈಗ ಅವ್ರಣ್ಣ ತೀರಿಕೊಂಡಾಗ ಬಂದಾನ. ಅವ್ನಿಂದ ಒಂದು ಪೈಸಾನು ನಾನು ನೋಡಿಲ್ಲ. ಅವ್ನಿಗೆ 18 ವರ್ಷ ಸಾಮಿ. ಈಗೇನೋ ಬಳ್ಳಾರಿಗೆ ದುಡಿಯೋದು ಕಲ್ಯಾಕ ಹೊರಟೀನಿ ಅಂತಾನ. ಅವ್ನಿಗೇ ಗೊತ್ತು.

*ಐಕ್ಯರಂಗ:* ಸರ್ಕಾರ ನಿಮಗೆ ವಾಸಕ್ಕೆ ಮನೆ ಕೊಡ್ಲಿಲ್ವ.

*ರಂಗಮ್ಮ:* ನಮ್ಮಂತ ಬಡವರಿಗೆ ಹೆಂಗ ಕೊಡ್ತಾರೆಯ್ಯಾ.

*ಐಕ್ಯರಂಗ:* ರೇಷನ್ ಕಾರ್ಡ್?

*ರಂಗಮ್ಮ:* ಕೊಟ್ಟಾರ ಸಾಮಿ ಇಲ್ಲಾಂತ ಹೇಳಾಕಿಲ್ಲ ಹಸಿರುಕಾರ್ಡ್ ಏನೋ ಅಂತಾರಾ

*ಐಕ್ಯರಂಗ:* ಕಳೆದ 2 ವರ್ಷದಲ್ಲಿ ಎಷ್ಟುಬಾರಿ ರೇಷನ್ ತಂದಿರಾ?

*ರಂಗಮ್ಮ:* ಎಲ್ ಸಾಮಿ ರೊಕ್ಕ ಇದ್ರಲ್ಲಾ ರೇಷನ್ ತರೋದು

*ಐಕ್ಯರಂಗ:* ನಿನ್ನೆ ಹೊಸಾ ಕಾರ್ಡ್ - ಅಂತ್ಯೋದಯ ಕಾರ್ಡ್ ಕೊಟ್ಟಾರಂತಲ್ಲಾ?

*ರಂಗಮ್ಮ:* ಹೌದು ಸಾಮಿ ಕೊಟ್ಟಾರ. ಯಾವ್ದಾರ ಆಗ್ಲಿ ರೊಕ್ಕ ಇಲ್ದೆ ಕೊಡ್ತಾರಾ ಸಾಮಿ. ರೊಕ್ಕ ಬೇಕಲ್ಲಾ?

ಗ ಕೇವಲ (15+ 25)x=1600
ತ್ರವೇ ಆಗುತ್ತದೆ. ಹೊರಗಿನವರು
ವಿಸಿದಂತೆ ಎರಡು ಬೆಳೆಯು ಅಲ್ಲಿ
ುತ್ತ 1600 ಸೇರಿ 3200/ ರೂ.
ಆಗುತ್ತದೆ.
ಉಪಕಸುಬುಗಳು ಅಲ್ಲಿ ಗೊತ್ತಿಲ್ಲ
ಗಂತೂ ಇಲ್ಲ. ಉಪ ಕಸುಬಿಗೆ
ವಿಲ್ಲ.
ದು; ಪಕ್ಕದ ಹಳ್ಳಿಗಳಿಗೆ
ುದಲ್ಲಾ? ನಿಜ, ಕೆ.ಪಿ.ಸಿ.ಸಿ ಮಾಜಿ
ಪರಿಸರ ಮತ್ತು ವಾರ್ತಾ ಮತ್ತು
ಚಿವರಾದ ಅಲ್ಲಂ ವೀರಭದ್ರಪ್ಪ

# ...ಗಳು

ೀಕರನ್ನೂ ನಿರಂತರವಾಗಿ 3 ಬಾರಿ
ೆಗ್ಗಳಿಕೆಯ ಕುರುಗೋಡು
ಾ ಕ್ಷೇತ್ರದ ಮತ್ತೊಂದು ಪ್ರಮುಖ
ಮೋಕಾ ವಿಭಾಗಕ್ಕೆ ಸೇರಿದ
. ಈ ಹೋಬಳಿ ಕ್ಷೇತ್ರದ ಬಹುತೇಕ
ನೀರಾವರಿಗೊಳಪಟ್ಟಿವೆ.
ವತಿ (ಹಗರಿ) ನದಿ ತಟದಲ್ಲಿರುವ
ಪ್ರದೇಶವಿದು. ಮೋಕಾ
ಗ್ರಾಮದಿಂದ ಕೆ.ಕೆ.ಹಾಳ್ ಕಡೆ
ಹೊರಟರೆ ಪ್ರತಿ ಒಂದು ಕಿ.ಮೀ ಗೆ
ಮ ಸಿಗುತ್ತದೆ. ಕೆ.ಕೆ.ಹಾಳ್
ಕ್ಕೆಲಗಳಲ್ಲಿ ಗೋಟೂರು, ಮೋಕಾ
ಮಸೀದಿಪುರ, ಬಾಣಾಪುರಗಳೆಂಬ
. ಬಹುಶಃ ಮೋಕಾ ಒಂದು
ಮವೆಂಬುದನ್ನು ಬಿಟ್ಟರೆ
ಲ್ಲಾ ತಲಾ 1000 ಎಕರೆ
ಜಮೀನನ್ನು ಹೊಂದಿಲ್ಲ. ಇದೇ
ಮಾಜಿ ಶಾಸಕ ಜನತಾದಳ(ಎಸ್)
ಶಿವರಾಮರೆಡ್ಡಿಯವರ ಬಾಣಾಪುರ
ಸೇರಿದೆ.
ಕೃಷಿಯೋಗ್ಯ ಜಮೀನಿರುವ ಆ
ನ ಹಳ್ಳಿಗಳಲ್ಲಿ ಕೃಷಿ ಕೂಲಿಕಾರರ
ಮದ ಶೇ.65 ರಿಂದ 70 ರಷ್ಟು.
ರ್ಭದಲ್ಲಿ ಇಲ್ಲಿ 7-8 ಜನರು
ಕರಿದ್ದಾರೆ. 100 ರಿಂದ 250 ಎಕರೆ
ಹೊಂದಿದ್ದಾರೆ. ಈ ಹಳ್ಳಿಗಳೂ ಕೂಡ
ುದ ಕೂಲಿಕಾರರಿಗೆ ಕೂಲಿ
ಸಾಧ್ಯವಾಗುತ್ತಿಲ್ಲ. ದೊಡ್ಡ
ಳು ಕೃಷಿ ಯಂತ್ರಗಳನ್ನು ಬಳಸುತ್ತಿವೆ.

**ಜಿನಲ್ಲಿ ಮತ್ತೆಲ್ಲಿ ಕೆಲಸ?**

ಸುಬುಗಳಿಲ್ಲದಾಗ ಉಳಿದದ್ದು ಕೆಲಸ
ಮತ್ತೊಂದು ಪ್ರದೇಶ ವೇದಾವತಿ



ನದಿ(ಹಗರಿ) ನಗರ ಪ್ರದೇಶಕ್ಕೆ ಕಟ್ಟಡಕ್ಕೆ ಸಾಗಿಸಬೇಕಾದ ಮರಳು ಅಥವಾ ಉಸುಕು ಲಾರಿಗಳಿಗೆ ತುಂಬುವ ಕೆಲಸ. ಅಲ್ಲಿಗೆ ಈಗ ಫೋಕ್‌ಲೈನ್ ಎಂಬ ಯಂತ್ರದ ಪ್ರವೇಶ. ಅದಿಲ್ಲದಿದ್ದರೆ ಲಾರಿಗಳಿಗೆ ಹೇರಲು ಸುತ್ತ-ಮುತ್ತಲ ಹಳ್ಳಿಗಳ ಜನರ ನೂಕುನುಗ್ಗಲು ಗಲಾಟೆ-ಬಡಿದಾಟ- ಮೋಕಾ ಹಮಾಲರ ಸಂಘದ ಕಛೇರಿಯಲ್ಲಿ ಪಂಚಾಯ್ತಿ. ಹೊಸದಾಗಿ ನೀವೆಲ್ಲಾ ಬಂದು ಲಾರಿ ಹಮಾಲಿಗಳಿಗೆ ಕೆಲಸವಿಲ್ಲದಂತೆ ಮಾಡಬೇಡಿರೆಂಬ ಬೇಡಿಕೆ.


ಮತ್ತೊಂದು ಕೆಲಸ ಆಹ್ವಾನಿಸುವುದು ಕಟ್ಟಿಗೆ ಕಡಿದು ಉರುವಲಿಗಾಗಿ ಶ್ರೀಮಂತರ ಮನೆಗಳಿಗೆ, ನೌಕರರ ಮನೆಗಳಿಗೆ, ಹೋಟೆಲ್ಲುಗಳಿಗೆ ಸಾಗಿಸುವುದು. ಇದು ಎಷ್ಟು ಜನರಿಗೆ ಕೆಲಸ ಒದಗಿಸೀತು? ಆದೂ ಕೂಡ ಅಡಿಗೆ ಅನಿಲ ಆಕ್ರಮಿಸಿದ ಸಂದರ್ಭದಲ್ಲಿ.

ಇನ್ನೂ ರಸ್ತೆ ನಿರ್ಮಾಣದ ಸರ್ಕಾರಿ ಕೆಲಸ? ಅದು ಯಂತ್ರಗಳಿರುವ ಬಡವ - ಕಾಂಟ್ರಾಕ್ಟರ್‌ದಾರರಿಗೆ ಮೀಸಲು. ಅವನಿಗೆ ಕೆಲಸ ಕೊಡುವುದು ಬೇಡವೇ. ಕೂಲಿಕಾರನಿಗೆಲ್ಲಿ?!

ಉಳಿದದ್ದೊಂದೇ ಊರು ಬಿಟ್ಟು ದೂರದ ಪಟ್ಟಣಗಳಿಗೆ ವಲಸೆ ಹೋಗುವುದು? ಅದೂ ಆಯಿತಲ್ಲಾ ನೂರಾರು ಸಂಖ್ಯೆಯಲ್ಲಿ ನಗರದ ಕಟ್ಟಡದ ಕೆಲಸದಲ್ಲಿ ಭಾಗಿಯಾಗಿ ಬರಿಗೈಲಿ ಬೆಂಗಳೂರು ದಬ್ಬಿತಲ್ಲಾ!

ಅಬ್ಬಾ!! ಕೂಲಿಗಾಗಿ ಕಾಳು ಯೋಜನೆ?

ಇದೆಲ್ಲಾ ಬರಗಾಲದ ಅಂದರೆ ಒಣಭೂಮಿಯ ಬಡವರಿಗೆ ಆಸೆ ತೋರಿಸಿ



ಎಲ್ಲವೂ ಇದೆ ತಿನ್ನಲು ಇಲ್ಲ..

ಆಳುವ ಪಕ್ಷದ ಹಿಂಬಾಲಕ ಕಂಟ್ರಾಕ್ಟರುದಾರರಿಗೆ ಲಾಭ ಮಾಡುವ ಯೋಜನೆ.

ಹೆಸರಿಗಾದರೂ ಈ ಭಾಗದಲ್ಲಿ ಬಾರದು? ಯಾಕೆಂದರೆ ಇದು ಹನ್ನೊಂದು ತಿಂಗಳ ನೀರಾವರಿ ಪ್ರದೇಶ. ಹೌದು ಇಲ್ಲಿ ಕೂಲಿಗಾಗಿ ಕಾಳು ಇಲ್ಲ- ಅದರ ನಾಟಕವೂ ಇಲ್ಲ. ಕೆಲಸವೂ ಇಲ್ಲ? ಯಾಕೆಂದರೆ 11 ತಿಂಗಳ ನೀರಾವರಿ ಪ್ರದೇಶ

ಈಗ ಹೇಳಿ?

ಇಲ್ಲಿಯ ಬಹುಸಂಖ್ಯಾತ ಕೂಲಿಕಾರರು ಬದುಕುವದಾದರೂ ಹೇಗೆ? ಹಸಿವಿನ ಹೊರತು ಬೇರೆ ರೀತಿಯ ಸಹಜ ಸಾವು ಘಟಿಸುವುದಾದರೂ ಹೇಗೆ?

ವಲಸೆದಾರರಿಗೆ ಆಶ್ರಯವಾಗಿದ್ದ ನೀರಾವರಿ ಕೈಬಿಟ್ಟಿತೇಕೆ?

ಹೌದು ಬಳ್ಳಾರಿ ತಾಲೂಕಿನ ನೀರಾವರಿ ಪ್ರದೇಶ ಶೇ.50 ಮಾತ್ರವೇ ಇದ್ದಾಗಲು ಕಳೆದ 15 ವರುಷಗಳ ಹಿಂದೆ ಬಳ್ಳಾರಿ ತಾಲೂಕಿನ ಒಣಪ್ರದೇಶದ ಕೂಲಿಕಾರರು -ಬಡವರಿಗೆ ಅದೇ ರೀತಿ ಚಿತ್ರದುರ್ಗ ಜಿಲ್ಲೆಯ ಮೊಣಕಾಲ್ಮೂರು- ಚಳ್ಳಕೆರೆ ತಾಲೂಕುಗಳ ಬಡವರಿಗೆ ಮತ್ತು ಕೂಡ್ಲಿಗಿ ತಾಲೂಕಿನ ಬಡವರಿಗೆ ಕೆಲಸ ಒದಗಿಸುವ ತಾಣವಾಗಿತ್ತು.

ಆಗ ಈ ಪ್ರದೇಶದಲ್ಲಿ ಹೇರಳವಾದ ಹತ್ತಿಯನ್ನು ಬೆಳೆಯಲಾಗುತ್ತಿತ್ತು. ಹತ್ತಿ ಬಿಡಿಸುವ ಸೀಜನ್ ಆರಂಭವಾಯಿತೆಂದರೆ ಪ್ರತಿ ಗ್ರಾಮಕ್ಕೆ ನೂರಾರು ವಲಸೆ ಬಡಕುಟುಂಬಗಳ ಆಗಮನವಾಗುತ್ತಿತ್ತು. 2-3 ತಿಂಗಳು ಕೈತುಂಬಾ ಕಾಸು ನೀಡುವ ದುಡಿಮೆ. ಒಣಿ ಓಣಿಗಳಲ್ಲಿ ದೇವಸ್ಥಾನಗಳ ಗೋಡೆಗಳ ಆಶ್ರಯದಲ್ಲಿ ಉರಿಯುವ ಒಲೆಗಳು, ಟಪ-ಟಪ ರೊಟ್ಟಿ ಬಡಿಯುವ ನಾದ ಕೇಳಿಬರುತ್ತಿತ್ತು. ಆ ಪ್ರದೇಶದ ಮಧ್ಯಮ ಶ್ರೀಮಂತ ರೈತರಿಗೆ ಈ ರೀತಿ ಹೊರ ಊರಿನ ಕೂಲಿಕಾರರನ್ನು ಹುಡುಕಿ ಕರೆತಂದು- ದುಡಿಸಿಕೊಳ್ಳುವ ಹೆಮ್ಮೆಯ ವಿಷಯವಾಗಿತ್ತು.

ಆದರೆ ಇದೀಗ ಹೊರಗಿನ ಕೂಲಿಕಾರರಲ್ಲ! ಇಲ್ಲಿನ ಕೂಲಿಕಾರರು ಗಂಟು ಮೂಟೆ ಕಟ್ಟಿಕೊಂಡು ನೂರಾರು ಮೈಲಿ ಸಾಗಿ ಬರಿಗೈಲಿ ಹಳ್ಳಿಗೆ ಬಂದು ಹಸಿವಿನ ದವಡೆಗೆ ದೂಡಲ್ಪಡುವುದು ಸಾಮಾನ್ಯ ಚಿತ್ರಣವಾಗುತ್ತಿದೆ.

ಈಗ ಹತ್ತಿ ಬೆಳೆಯಿಲ್ಲ. ಒಂದು ಬೆಳೆಗಾದರೂ ನೀರು ಭರವಸೆಯಿಂದ ದೊರೆಯುತ್ತವೆಂಬಲ್ಲಿ ರೈತರು ಸ್ವಲ್ಪವಾದರೂ ಜೀವನ ನಿರ್ವಹಿಸಬಹುದೆಂದು ಭತ್ತದ ಬೆಳೆಗೆ ಬದಲಾಯಿಸಲ್ಪಟ್ಟಿದ್ದಾರೆ.

ಮತ್ತೆ ಹಲವು ರೈತರು ಹತ್ತಿಬೆಳೆಗೆ ಸಿಗದ ಧಾರಣೆಯಿಂದಾದ ಸಾಲ ತೀರಿಸಲು ಅದಕ್ಕಿಂತ ಲಾಭ ತರುವ ಮತ್ತೊಂದು ವಾಣಿಜ್ಯ ಬೆಳೆಗೆ 'ಮೆಣಸಿನಕಾಯಿ'ಗೆ ಸಾಗಿ ಬಾಣಲೆಯಿಂದ ಬೆಂಕಿಗೆ ಬಿದ್ದು ಸಾಲದ ದವಡೆಯಲ್ಲಿ ಮತ್ತೆಂದೂ ಮೇಲೇಳಲು ಸಾಧ್ಯವಾಗದ ಸ್ಥಿತಿಯಲ್ಲಿದ್ದಾರೆ. ವಿಷ ಉಂಡಿದ್ದಾರೆ. ಕೂಲಿಕಾರರಿಗೆ ಕೂಲಿ ಕೊಡಲಾಗದೆ ಇಡೀ ಕುಟುಂಬಗಳೇ ತಮ್ಮ ಜಮೀನಿನಲ್ಲಿ ದುಡಿಯುತ್ತಿವೆ. ಮತ್ತೆ ಕೆಲವು ಬೇರೆ ಹೊಲದ ಕೂಲಿಗಾಗಿ ಹಾತೊರೆಯುತ್ತಿವೆ. ಭೂಮಿ ಕಳೆದುಕೊಂಡವರು ಕೂಲಿಕಾರರ ಸಂಖ್ಯೆ ಬೆಳೆಸಿದ್ದಾರೆ.

ಹಳೆಯ ಭೂಮಾಲಕರು ಮತ್ತು ಬಡ್ಡಿವ್ಯಾಪಾರಿಗಳು ಗ್ರಾಮೀಣ ಪ್ರದೇಶದ ಭೂಮಾಲಿಕ- ಬಂಡವಾಳದಾರರಾಗಿ ಬೆಳೆದಿದ್ದಾರೆ. ನೂರಾರು ಕೋಟಿ ಬಂಡವಾಳ ಸಾವಿರ-ಸಾವಿರದಷ್ಟು ಎಕರೆ ಭೂಮಿ ಒಂದೆಡೆ ಸೇರ್ಪಡೆಯಾಗುತ್ತಿದೆ.

ಇಂತಹ ದೊಡ್ಡ ಹಿಡುವಳಿಗೆ ಬಂಡವಾಳ ಸಹಾಯ ಮಾಡಿ ಕೃಷಿಯೊಳಗೆ ಯಾಂತ್ರೀಕರಣ ತೀವ್ರಗೊಳ್ಳುತ್ತಿದೆ. ಬಂಡವಾಳಶಾಹಿ ಕೃಷಿಕರಾಗಿ ಬೆಳೆಯಲು ಈ ಹೊಸ ಭೂಮಾಲಿಕರು ಯಂತ್ರಗಳನ್ನು ; ಆಧುನಿಕ ತಂತ್ರಜ್ಞಾನವನ್ನು ಬಳಸಲು ಮುಂದಾಗುತ್ತಿದ್ದವು ಕೂಲಿ ಕೆಲಸದ ಮೇಲಿನ ಹೊಸ ಪ್ರಹಾರವಾಗಿ ಬೆಳೆದಿದೆ.

ನಿಜ, ವಿಶ್ವಬ್ಯಾಂಕಿನ ಅಣತಿಯಂತೆ ವಿಶ್ವವಾಣಿಜ್ಯ ಸಂಘಟನೆಯ ಒಪ್ಪಂದಗಳಂತೆ ಕಾರ್ಯನಿರ್ವಹಿಸುವ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಹೊಸ ಕೃಷಿ ನೀತಿ ಹಾಗೂ ಆರ್ಥಿಕ ನೀತಿ ಆಮದು- ರಫ್ತು ಮುಂತಾದ ನೀತಿಗಳ ಪರಿಣಾಮವೇ ಇದಾಗಿದೆ.

## ಹಸಿವಿನ ಸಾವನ್ನು ಅನಾರೋಗ್ಯವೆಂದು ಹೇಳುತ್ತಿರುವ ಅಮಾನವೀಯ ಸರ್ಕಾರ

**ಸಿಪಿಐ(ಎಂ) ನಿಯೋಗ ಕಂಡ ಸತ್ಯ**

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಬಳ್ಳಾರಿ ಜಿಲ್ಲಾಸಮಿತಿ ಕಾರ್ಯದರ್ಶಿ ಯು. ಬಸವರಾಜ್ ನೇತೃತ್ವದಲ್ಲಿ ಕಾಂ.ವಿ.ಎಸ್. ಶಿವಶಂಕರ್ ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರು ಹಾಗೂ ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಅಧ್ಯಕ್ಷರು ಮತ್ತು ಕಾಂ.ಹೆಚ್.ಎಂ.ವಿಶ್ವನಾಥ ಸ್ವಾಮಿ ಜಿಲ್ಲಾ ಸಮಿತಿ ಸದಸ್ಯರು, ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಜಿಲ್ಲಾಮುಖಂಡರು ಕಾಂ.ಅಮೀನ್ಸಾಬ್ ಡಿವೈಎಫ್‌ಐ ಮುಖಂಡರನ್ನೊಳಗೊಂಡ ಸಿಪಿಐ(ಎಂ) ನ ನಿಯೋಗ ದಿನಾಂಕ 07.10.2003 ರಂದು ಕೆ.ಕೆ.ಹಾಳ್ ಗ್ರಾಮಕ್ಕೆ ಭೇಟಿ ನೀಡಿ ಎರ್ರಿಸ್ವಾಮಿ ಕುಟುಂಬಕ್ಕೆ ಸಾಂತ್ವಾನ ಹೇಳಿದವು. ಅವರ ಕುಟುಂಬದ ಸದಸ್ಯರ ಜೊತೆ ಗ್ರಾಮದ ಜನತೆಯ ಜೊತೆ ಅಲ್ಲಿನ ಆರ್.ಎಂ.ಪಿ ಡಾಕ್ಟರ್ ಜೊತೆ, ಗ್ರಾಮ ಪಂಚಾಯ್ತಿ ಸದಸ್ಯರ ಜೊತೆ ಚರ್ಚಿಸಿತು. ಕೂಲಂಕುಷವಾಗಿ ಪರಿಶೀಲಿಸಿತು.

ಈ ನಿಯೋಗ ಮರುದಿನ ಪತ್ರಿಕಾ ಸಮ್ಮೇಳನ ನಡೆಸಿ ಅದು ಹಸಿವಿನಿಂದಾದ ಸಾವೆಂದು ದೃಢಪಡಿಸಿತು. ಈ ಕೂಡಲೇ ಮೃತನ ಕುಟುಂಬಕ್ಕೆ 2 ಲಕ್ಷ ರೂಪಾಯಿಗಳ ಪರಿಹಾರ ನೀಡಬೇಕೆಂದು ರಾಜ್ಯ ಸರ್ಕಾರವನ್ನು ಒತ್ತಾಯಿಸಿತು. ಸಚಿವ ಅಲ್ಲಂ ವೀರಭದ್ರಪ್ಪನವರ ಒತ್ತಡ ಹಾಗೂ ರಾಜ್ಯ ಸರ್ಕಾರದ ಒತ್ತಡದ ಮೇರೆಗೆ ಜಿಲ್ಲಾಧಿಕಾರಿಗಳು ಅದು ಹಸಿವಿನಿಂದಾದ ಸಾವಲ್ಲವೆಂದು, ಅನಾರೋಗ್ಯದ ಸಾವೆಂದು ಹೇಳುತ್ತಿರುವ ಅರ್ಧಸತ್ಯವನ್ನು ಖಂಡಿಸಿತು.

ಇದು ಜನಗಳ ಕುರಿತು ತನಗಿರುವ ಬೇಜವಾಬ್ದಾರಿತನವನ್ನು ಸರ್ಕಾರ ಎತ್ತಿ ತೋರಿದೆಯೆಂದು ಮುಂದಾಳುಗಳು ಖಂಡಿಸಿದರು.

ರಂಗಮ್ಮ ಪತ್ರಿಕಾ ಸಮ್ಮೇಳನದಲ್ಲಿ ಭಾಗಿಯಾಗಿ ನಿಜವೇನೆಂದು ವಿವರಿಸಿದಳು.

13.10.2003 ರಂದು ಕೆ.ಕೆ.ಹಾಳ್ ಗ್ರಾಮದಿಂದ 22 ಕಿ.ಮೀ ಬಳ್ಳಾರಿ ಜಿಲ್ಲಾಧಿಕಾರಿ ಕಛೇರಿಗೆ 300 ಕ್ಕೂ ಹೆಚ್ಚು ಜನರಿಂದ ಬೃಹತ್ ಪಾದಯಾತ್ರೆಯನ್ನು ಬೇಡಿಕೆಗಳಿಗಾಗಿ ಹಮ್ಮಿಕೊಳ್ಳಲಾಗಿತ್ತು.

**ಬೇಡಿಕೆಗಳು**

1. ಮೃತರ ಕುಟುಂಬಕ್ಕೆ 2 ಲಕ್ಷ ಪರಿಹಾರ ನೀಡಬೇಕು.
2. ಕೂಡಲೇ ಮನೆ ಕಟ್ಟಿಸಿಕೊಡಬೇಕು
3. ಗ್ರಾಮದ ಬಹುತೇಕ ಎಲ್ಲಾ ಕೂಲಿಕಾರರಿಗೆ ಅಂತ್ಯೋದಯ ಕಾರ್ಡ್ ಒದಗಿಸಬೇಕು.
4. ಜನವರಿಯಿಂದ ಪ್ರತಿವರ್ಷ ಕನಿಷ್ಠ 3 ತಿಂಗಳು ಕೂಲಿಗಾಗಿ ಕಾಳು ಯೋಜನೆ ಜಾರಿಗೆ ತರಬೇಕು.
5. ಕೂಲಿಕಾರರಿಗೆ ಉಪಕಸುಬಾಗಿ ಹೈನುಗಾರಿಕೆ ಕೈಗೊಳ್ಳಲು ದೊಡ್ಡ ಪ್ರಮಾಣದಲ್ಲಿ ಉಚಿತವಾಗಿ ತಲಾ 2 ಎಮ್ಮೆಗಳನ್ನು ಕೊಡಿಸಬೇಕು.
6. ಹೆಚ್ಚುವರಿ ಜಮೀನನ್ನು, ಬಂಜರು ಜಮೀನನ್ನು ಕೂಲಿಕಾರರು ಬಡವರಿಗೆ ಹಂಚಬೇಕು.
7. ಕುಡಿಯುವ ನೀರಿಗಾಗಿ 4-5 ಹಳ್ಳಿಗಾಗಿ ಕಟ್ಟಲಾಗುತ್ತಿರುವ ಬಾಣಾಪುರದ ಹತ್ತಿರ ಹೊಸಕೆರೆ ನಿರ್ಮಾಣದಲ್ಲಿ ಬಳಸಲಾಗುತ್ತಿರುವ ಯಂತ್ರವನ್ನು ವಾಪಾಸು ಪಡೆದು ಕೂಲಿಕಾರರಿಗೆ ಕೆಲಸ ಕೊಡಬೇಕು.
8. ಸರ್ಕಾರಿ ಕೆಲಸಗಳಲ್ಲಿ ಹಾಗೂ ಕೃಷಿಯಲ್ಲಿ ಕೊಯ್ಲ ಯಂತ್ರ ಮುಂತಾಗಿ ತಾತ್ಕಾಲಿಕವಾಗಿ ನಿಷೇಧಿಸಬೇಕು.

# ಧಾಳಿಗಳೆದುರು ನಿಲ್ಲದ ಸಮರ ಹೊಸ ವಿಭಾಗಗಳತ್ತ ಸಂಘಟನೆ ವಿಸ್ತಾರ




**ಹಲವಾರು ಧಾಳಿಗಳನ್ನು ಎದುರಿಸಿ ನಿಂತಿದೆ ಸಿಐಟಿಯು. ಪ್ರತಿರೋಧ ಮಾತ್ರವಲ್ಲ ಕಾರ್ಮಿಕ ವರ್ಗದ ಐಕ್ಯ ಚಳುವಳಿಗೆ, ಹಿತಾಸಕ್ತಿಗಳ ರಕ್ಷಣೆಗೆ ಕೇಂದ್ರ ಬಿಂದುವಾಗಿ, ಮುಖ್ಯಪಾತ್ರವಹಿಸುತ್ತಿದೆ. ಹೊಸ ಹೊಸ ದುಡಿವ ವರ್ಗದ ವಿಭಾಗಗಳತ್ತ ವಿಸ್ತರಿಸುತ್ತಿದೆ. ಮೈಸೂರಿನಲ್ಲಿ ಜರುಗಿದ 9ನೇ ರಾಜ್ಯ ಸಮ್ಮೇಳನದಲ್ಲಿ ಕಳೆದ ಅವಧಿಯ ಅನುಭವಗಳನ್ನು ಮಂಥನ ನಡೆಸಿ, ಹೊಸ ಗೊತ್ತುಗುರಿಗಳನ್ನು ನಿರ್ಧರಿಸಲಾಗಿದೆ. ಅದರ ಒಟ್ಟು ಅವಲೋಕನವನ್ನು ಸಂಕ್ಷಿಪ್ತ ಸಾರ ನೀಡಿದ್ದಾರೆ ಸಿಐಟಿಯುವಿನ ರಾಜ್ಯ ಪ್ರಧಾನ ಕಾರ್ಯದರ್ಶಿಯವರಾದ ವಿಜೆಕೆ ನಾಯರ್‌ರವರು. ಅಲ್ಲದೆ ಸಮ್ಮೇಳನದ ಇತರೆ ಕಲಾಪಗಳು ಇಲ್ಲಿ.**

ಸಿಐಟಿಯು ನ 9ನೇ ರಾಜ್ಯ ಸಮ್ಮೇಳನ ಮೈಸೂರಿನಲ್ಲಿ ಅಕ್ಟೋಬರ್ 16 ರಿಂದ 19 ರ ವರೆಗೆ ನಡೆಯಿತು.

ಈ ಸಮ್ಮೇಳನ ರಾಜ್ಯದಲ್ಲಿ ಸಿಐಟಿಯು ನ ಹೆಚ್ಚುತ್ತಿರುವ ಮಹಿಳಾ ಸದಸ್ಯತ್ವದಲ್ಲಿ ಮೂಡಿಬರುತ್ತಿರುವ ಶಕ್ತಿಯನ್ನು ಬಿಂಬಿಸಿತು. 271 ಪ್ರತಿನಿಧಿಗಳಲ್ಲಿ 86 ಮಹಿಳೆಯರು ( ಶೇ 32) 24 ವೀಕ್ಷಕರಲ್ಲಿ 14 ಮಹಿಳೆಯರು. ಚರ್ಚೆಯಲ್ಲಿ ಭಾಗವಹಿಸಿದ 63 ಪ್ರತಿನಿಧಿಗಳಲ್ಲಿ 13 ಮಹಿಳೆಯರು. ಅಕ್ಟೋಬರ್ 19 ರ ರ್‍ಯಾಲಿಯಲ್ಲಂತೂ ಮಹಿಳೆಯರ ಭಾಗವಹಿಸುವಿಕೆ ಹೆಚ್ಚಿತ್ತು. ಬಹಿರಂಗ ಸಭೆಯನ್ನುದ್ದೇಶಿಸಿ ಮಾತನಾಡಿದ ಪಶ್ಚಿಮ ಬಂಗಾಳದ ಮಂತ್ರಿಗಳು ಹಾಗೂ ಸಿಐಟಿಯು ಮುಖಂಡರು ಇದನ್ನು ಕಂಡು ಮಹಿಳಾ ಸದಸ್ಯರನ್ನು ಸಕ್ರಿಯಗೊಳಿಸುವಲ್ಲಿ ಕರ್ನಾಟಕ ಸಿಐಟಿಯುವಿನ ಪ್ರಯತ್ನವನ್ನು ಅಭಿನಂದಿಸಿದರು.

ಸಮ್ಮೇಳನದಲ್ಲಿನ ಚರ್ಚೆ ಹಲವು ರಂಗಗಳಲ್ಲಿ ಅಸಂಘಟಿತರನ್ನು ಸಂಘಟಿಸುವಲ್ಲಿ ಸಿಐಟಿಯು ನ ಮುಂದಿರುವ ಅಪಾರ ಸಾಧ್ಯತೆಗಳ ಬಗ್ಗೆ ಕೇಂದ್ರಿತವಾಗಿತ್ತು. ಸಂಘಟಿತ ಉದ್ದಿಮೆಗಳಲ್ಲಿ ಮತ್ತು ಪ್ರಮುಖ ವಲಯಗಳಲ್ಲದೆ ಅಂಗನವಾಡಿ, ಗ್ರಾಮ ಪಂಚಾಯತು, ಹಮಾಲಿ, ಕಟ್ಟಡ ಕೆಲಸ ಮತ್ತು ಸಾರಿಗೆ ನೌಕರರನ್ನು ಇನ್ನಷ್ಟು ಸಂಘಟಿಸುವ ನಿರ್ಧಾರ ಮಾಡಿತು.

ಸಮ್ಮೇಳನ ನಿರುದ್ಯೋಗಿ ಯುವಕರು ಎದುರಿಸುತ್ತಿರುವ ಸಮಸ್ಯೆಗಳತ್ತವೂ ಗಮನ ಕೇಂದ್ರೀಕರಿಸಿತು. ಇದು ಕೈಗಾರಿಕೆಗಳ ಅಭಿವೃದ್ಧಿಯ ಅಭಾವದ ನೇರ ಪರಿಣಾಮ ಎಂದು ಅದು ನಿರ್ಧರಿಸಿತು. ಇದರಿಂದಾಗಿ ನಿರುದ್ಯೋಗಿಗಳನ್ನು ಸಂಘಟಿಸಿ ಅವರ ಚಟುವಟಿಕೆಗಳನ್ನು ಯೂನಿಯನ್‌ಗಳಲ್ಲಿ ಸಂಘಟಿಸಲ್ಪಟ್ಟ



ಶ್ರಮಿಕರೊಂದಿಗೆ ಸಂಯೋಜಿಸುವ, ಆಯಾಯ ಪ್ರದೇಶಗಳಲ್ಲಿ ಕೈಗಾರಿಕಾ ಅಭಿವೃದ್ಧಿಯ ಅಭಾವವನ್ನು ಎತ್ತಿ ತೋರಿಸುವ ಜಾಥಾಗಳನ್ನು ನಡೆಸುವ ಒಂದು ಕರೆ ಈ ಸಮ್ಮೇಳನದಿಂದ ಮೂಡಿಬಂತು.

ರಾಜ್ಯದಲ್ಲಿ ರೈತರ ಆತ್ಮಹತ್ಯೆಗಳು ನಡೆಯುತ್ತಿರುವ ವಿಶೇಷ ಸನ್ನಿವೇಶದಲ್ಲಿ ರೈತರ ರಕ್ಷಣೆಗಾಗಿ ಕಾರ್ಯಾಚರಣೆಗಿಳಿಯುವ ಅಗತ್ಯ ಸಮ್ಮೇಳನದ ಚರ್ಚೆಯಲ್ಲಿ ಪ್ರತಿಫಲನಗೊಂಡಿತು.

·ಬೀಡಿ ಕಾರ್ಮಿಕರ ಪ್ರಶ್ನೆ ಗಂಭೀರ ಚರ್ಚೆಗೊಳಗಾಯಿತು. ಸರ್ಕಾರ ಮತ್ತು ಮಾಲಕರು ಕಳೆದ 6 ವರ್ಷಗಳ ಕೂಲಿ ಬಾಕಿಯನ್ನು ಕೊಡುವಂತೆ ಒತ್ತಾಯಿಸಿ ಕ್ರಮಗಳನ್ನು, ಹೋರಾಟಗಳನ್ನು ನಡೆಸಬೇಕು ಎಂದು ಕರೆ ನೀಡುವ ಒಂದು ನಿರ್ಣಯವನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು. ಅದೇ ರೀತಿ ಕೂಲಿ ನಿರ್ಧಾರ ಮತ್ತು ಆರು ದಿನಗಳ ಕೆಲಸದ ಬಗ್ಗೆ ನಿರ್ಧರಿಸಲು ಒಂದು ತ್ರಿಪಕ್ಷೀಯ ಸಮಿತಿಯನ್ನು ರಚಿಸಬೇಕು ಎಂದೂ ನಿರ್ಣಯ ಕರೆ ನೀಡಿತು.

ಹಲವು ಉದ್ದಿಮೆಗಳ ಮುಚ್ಚುವಿಕೆಯ ನಂತರದ ಪರಿಣಾಮಗಳನ್ನು ಚರ್ಚಿಸಲಾಯಿತು. ಈ ಕಾರ್ಮಿಕರ ಸಂಕಟಗಳನ್ನು ನಿವಾರಿಸಲು ಪರ್ಯಾಯಗಳನ್ನು ಸಂಘಟಿಸಬೇಕು ಎಂಬ ಸಂಗತಿಯನ್ನು ಗಮನಿಸಲಾಯಿತು.

ಪ್ರತಿನಿಧಿಗಳಲ್ಲಿ ಬಹಳಷ್ಟು ಮಂದಿ, ಅಂದರೆ 123 ಪ್ರತಿನಿಧಿಗಳು ಉದಾರೀಕರಣದ ನಂತರದ ಅವಧಿಯಲ್ಲಿ ಆಂದೋಲನಕ್ಕೆ ಬಂದವರು. 67 ಪ್ರತಿನಿಧಿಗಳು ಎಂಭತ್ತರ ದಶಕದಲ್ಲಿ ಬಂದವರು, 48 ಎಪ್ಪತ್ತರ ದಶಕದಲ್ಲಿ ಬಂದವರು. ಇದ... ಕಾರ್ಮಿಕ ಆಂದೋಲನದಲ್ಲಿ ಪ್ರತಿನಿಧಿಗ... ಅನುಭವವನ್ನು ಸ್ಪಷ್ಟವಾಗಿ ಬಿಂಬಿಸುತ್ತದೆ... ಸಿಐಟಿಯು ಸ್ಥಾಪನೆಗಿಂತ ಮೊದಲೇ ಕಾರ್ಮಿ... ಆಂದೋಲನವನ್ನು ಸೇರಿದ್ದ ಹಿರಿಯರ ಸಂಖ್ಯೆ 2... ಇತ್ತು.

ಪ್ರತಿನಿಧಿಗಳ ಅನುಭವ ಅವರು ಸಂಘಟನ... ಪ್ರಶ್ನೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುವಂ... ಮಾಡಿತು. ರಾಜ್ಯದಲ್ಲಿ ಆಂದೋಲನ... ಮಾರ್ಗದರ್ಶನ ನೀಡಲು ರಾಜ್ಯ ಸಮಿತಿ ಇನ್ನು... ಪರಿಣಾಮಕಾರಿಯಾಗಿ ಕಾರ್ಯನಿರ್ವಹಿ... ಬೇಕೆಂಬುದು ಪ್ರತಿನಿಧಿಗಳ ನಿರೀಕ್ಷೆ.

ಉದಾರೀಕರಣ ಪ್ರಕ್ರಿಯೆಯ ಪರಿಣಾಮ... ಉಗ್ರತೆ ಸಮ್ಮೇಳನದಲ್ಲಿ ಅನುಭವಕ್ಕೆ ಬಂತು... ಉತ್ತರ ಕನ್ನಡ ಜಿಲ್ಲೆಯಿಂದ ಉಗ್ರಾಣಿಗ... (ಕರವಸೂಲಿ ಮಾಡುವವರು) ಮುಂತಾದ ಹೊ... ವಿಭಾಗಗಳು ಆಂದೋಲನಕ್ಕೆ ಬಂದವು. ಈ ಹಿಂ... ಸರ್ಕಾರಿ ನೌಕರರಾಗಿ ಕೆಲಸ ಮಾಡುತ್ತಿದ್ದ ಹೆಚ್ಚಿ... ವಿಭಾಗಗಳು ಈಗ ಕಾಂಟ್ರಾಕ್ಟ್ ಕಾರ್ಮಿಕರಾ... ದುಡಿಯುತ್ತಿದ್ದಾರೆ.

ನಾಗರಿಕರಿಗೆ ನೀರು ಪೂರೈಕೆ, ಚರಂಡಿ ವ್ಯ... ರಸ್ತೆ ದೀಪ ಇತ್ಯಾದಿ ಸೇವೆಗಳನ್ನು ಒದಗಿಸಬೇಕಾ... ನಗರಸಭೆಗಳ ಕೆಲಸವನ್ನೀಗ ಕಾಂಟ್ರಾಕ್ಟರುಗ... ಕೊಡಲಾಗಿದೆ. ಕಾಂಟ್ರಾಕ್ಟ್ ಲೇಬರ್ ಕಾನೂ... ಅಂಶಗಳನ್ನೂ ಕೂಡಾ ಪಾಲಿಸದೆ ಈ ಕಾಂಟ್ರಾ... ಕಾರ್ಮಿಕರನ್ನು ತೀವ್ರವಾಗಿ ಶೋಷಿಸಲಾಗುತ್ತಿ...

ಸಮ್ಮೇಳನ ಈ ಅಂಶಗಳನ್ನು ಚರ್ಚಿಸಿ ... ಕಾರ್ಮಿಕರನ್ನು ಸಕ್ರಿಯವಾಗಿ ಸಂಘಟಿಸ... ನಿರ್ಧರಿಸಿತು.

ಬೆಂಗಳೂರು ಜಿಲ್ಲಾ ಸಿಐಟಿಯುನ ಹಾ... ಬಿಪಿಎಲ್ ಗುಂಪಿನ ಕಂಪನಿಗಳ ಕಾರ್ಮಿ... ಸಂಘದ ಅಧ್ಯಕ್ಷರೂ ಆದ ಕಾಂ. ಆರ್.ಶ್ರೀನಿವಾ... ಸಂಘದ ಪ್ರಧಾನ ಕಾರ್ಯದರ್ಶಿ ಕಾ... ಟಿ.ಕೆ.ಎಸ್. ಕುಟ್ಟಿ ಮತ್ತು ಇತರ ಐವ... ಜೀವಾವಧಿ ಶಿಕ್ಷೆ ವಿಧಿಸಿದ ಬಗ್ಗೆ ಕೇಳಿದ... ಸಮ್ಮೇಳನದಲ್ಲಿ ಮನೋವೇಧಕ ದೃಶ್ಯ... ಕಂಡುಬಂದವು. ಕಾರ್ಮಿಕ ಆಂದೋಲ... ಸಮರಶೀಲ ಕಾರ್ಯಕರ್ತರ ಮೇಲೆ ಸು... ಕೇಸುಗಳನ್ನು ಹೇರುವ ಪ್ರವೃತ್ತಿ ಬಿಪಿ... ಕಾರ್ಮಿಕರ ಹೋರಾಟದ ಸಂದರ್ಭ... ಶಿಖರವನ್ನು ತಲುಪಿದೆ ಎಂಬ ತೀರ್ಮಾ... ಬರಲಾಯಿತು.

ಶಿಕ್ಷೆಗೊಳಗಾಗಿರುವ ಮುಖಂಡರ ... ಕಾರ್ಮಿಕರ ರಕ್ಷಣೆಗೆ ವ್ಯವಸ್ಥೆ ಮಾಡಬೇಕು ... ಸಮ್ಮೇಳನ ನಿರ್ಧರಿಸಿತು.

**- ವಿ.ಜೆ.ಕೆ.ನಾಯ...**



## ಕೆಂಪಾದವೋ, ಎಲ್ಲಾ ಕೆಂಪಾದವೋ...

ಕೆಂಪಾದವೋ ಎಲ್ಲಾ ಕೆಂಪಾದವೋ....

ಭಾನುವಾರ ಮೈಸೂರು ನಗರವೆಲ್ಲಾ ಕೆಂಪಾಗಿತ್ತು. ಪ್ರಮುಖ ವೃತ್ತಗಳು ಕೆಂಪು ಬಾವುಟಗಳಿಂದ ಆವೃತ್ತಗೊಂಡಿದ್ದರೆ, ನಗರದ ಪ್ರಮುಖ ರಸ್ತೆಗಳೆಲ್ಲಾ ಕೆಂಬಾವುಟಗಳು ಹಾರಾಡಿದವು. ಜನಸಾಗರದ ಘೋಷಣೆಗಳು ಮುಗಿಲು ಮುಟ್ಟಿದ್ದವು.

ಇಲ್ಲಿ ಪೌರಕಾರ್ಮಿಕರು, ಆಟೋಚಾಲಕರು, ಅಂಗನವಾಡಿ ಕಾರ್ಯಕರ್ತೆಯರು ಹಾಗೂ ನಾನಾ ಕಾರ್ಖಾನೆಗಳ ನೌಕರರು, ವಿವಿಧ ಧರ್ಮಗಳಿಗೆ ಸೇರಿದವರು ರಾಜ್ಯಾದ್ಯಂತ ಸಾಗರೋಪಾದಿಯಲ್ಲಿ ಬಂದು ಮೈಸೂರನ್ನು ಕೆಂಪಾಗಿಸಿದ್ದರು.

ನಗರದಲ್ಲಿ ನಡೆಯುತ್ತಿರುವ ಸಿಐಟಿಯು 9ನೇ ಕರ್ನಾಟಕ ರಾಜ್ಯ ಸಮ್ಮೇಳನದ ಮುಕ್ತಾಯದ ಅಂಗವಾಗಿ ನಡೆದ ಮೆರವಣಿಗೆಯ ದೃಶ್ಯವಿದು. ವಾರದಿಂದ ಮಳೆಯನ್ನು ಕರೆಸಿಕೊಂಡಿರುವ ನಗರದಲ್ಲಿ ಪ್ರಸರಿಸಿದ್ದ ಕೆಂಪಿಗೆ ತಂಪಿನ ಕಂಪು ಇತ್ತು. ಸೂರ್ಯ ಆಗಾಗ್ಗೆ ಕಾಣಿಸಿಕೊಳ್ಳಲು ಯತ್ನಿಸಿದರೂ ಮೋಡಗಳು ಬಿಡಲಿಲ್ಲ. ಸೂರ್ಯನನ್ನು ಆವರಿಸಿಕೊಂಡಿದ್ದವು. ಹಾಗಾಗಿ ಕೆಂಬಾವುಟ ಹಿಡಿದು ತಮ್ಮ ಹೊಟ್ಟೆಯ ಸಿಟ್ಟನ್ನು ಬೆಂಕಿಯಂತೆ ಘೋಷಣೆಗಳ ಮೂಲಕ ಹೊರಹಾಕುತ್ತಿದ್ದ ದುಡಿಯುವ ಜನರಿಗೆ ಸುಡುವ ಸೂರ್ಯನ ಕಾಟ ಇರಲಿಲ್ಲ.

15 ಸಾವಿರಕ್ಕೂ ಹೆಚ್ಚಿದ್ದ ಜನರಲ್ಲಿ ಬಹುತೇಕ ಇದ್ದವರು ಮಹಿಳೆಯರು. ತಮ್ಮ ಮೇಲೆ ನಿರಂತರವಾಗಿ ದಬ್ಬಾಳಿಕೆ, ದೌರ್ಜನ್ಯ ನಡೆಸುವ ವ್ಯವಸ್ಥೆಯ ವಿರುದ್ಧ ಕೆರಳಿ ಅವರ್‍ಯಾರು ಕಲ್ಲು ತೂರಾಟ ನಡೆಸಲಿಲ್ಲ. ಸ್ವಯಂ ಶಿಸ್ತಿಗೆ ಒಳಗಾಗಿ ಅಭೂತಪೂರ್ವ ಮೆರವಣಿಗೆ ನಡೆಸಿದರು. ತಲೆ ಮೇಲೆ ಬುತ್ತಿ.. ಕಂಕುಳಲ್ಲಿ ಕರುಳ ಕುಡಿ... ಕೈಯಲ್ಲಿ ಸಿಐಟಿಯು ನ ಕೆಂಪು ಧ್ವಜ.... ಬಾಯಿಯಲ್ಲಿ ಖಾಸಗೀಕರಣ, ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ ವಿರುದ್ಧ ಘೋಷಣೆಗಳ ಜೊತೆಯಲ್ಲಿ ಬಂಡಾಯ ಗೀತೆಗಳು, ಹೀಗೆ ದುಡಿಯುವ ವರ್ಗ ಸಾಂಸ್ಕೃತಿಕ ರಾಜಧಾನಿ ಮೈಸೂರಿನಲ್ಲಿ ಹಿಂದೆಂದೂ ಕಾಣದ ರೀತಿಯಲ್ಲಿ ಮೆರವಣಿಗೆ ನಡೆಸಿ ಆಳುವ ವರ್ಗದ ಜನರ ಕಣ್ತೆರೆಸಲು ಯತ್ನಿಸಿದರು.

ಪುರಭವನದಿಂದ ಹೊರಟ ಮೆರವಣಿಗೆ ಒಂದೂವರೆ ಕಿ.ಮಿ. ಗೂ ಉದ್ದವಿತ್ತು. ಪ್ರಮುಖ ರಸ್ತೆಗಳ ಮೂಲಕ ಮಹಾರಾಜ ಕಾಲೇಜು ಮೈದಾನದಲ್ಲಿ ನಡೆದ ಬೃಹತ್ ಬಹಿರಂಗ ಸಭೆಯಲ್ಲಿ ತಮ್ಮ ನಾಯಕರ ಭಾಷಣ ಕೇಳಿ ಮಕ್ಕಳು, ಮರಿಯೊಂದಿಗೆ ಬಂದಿದ್ದ ಮಂದಿ ಊರಿಗೆ ಪ್ರಯಾಣ ಬೆಳೆಸಿದರು.

....... ಸಮ್ಮೇಳನದ ಒಟ್ಟು ವ್ಯವಸ್ಥೆ ತುಂಬಾ ಅಚ್ಚುಕಟ್ಟು. ಯಾವುದಕ್ಕೂ ಕೊರತೆಯಿಲ್ಲ, ಗಡಿಬಿಡಿ ಇಲ್ಲ. ಆದರಾತಿಥ್ಯ. ರಾಜ್ಯಮಟ್ಟದ ಇಂತಹ ಸಮ್ಮೇಳನವನ್ನು ಯಶಸ್ವಿಗೊಳಿಸಲು ಸ್ವಾಗತ ಸಮಿತಿ, ಸ್ವಯಂಸೇವಕರು, ವಿವಿಧ ಕಾರ್ಖಾನೆಗಳ ಕಾರ್ಮಿಕರು ಅಹೋರತ ಶ್ರಮ ಪಟ್ಟಿದ್ದು ಎದ್ದುಕಾಣುತ್ತಿತ್ತು.

- ('ಕನ್ನಡ ಪ್ರಭ' ದಿಂದ)

ಕೆಂಪು ಬಾವುಟ ಹಾರಿಸಿ, ವರ್ಗ ಹೋರಾಟದ ಮೇಲೆ ನಮಗಿರುವ ವಿಶ್ವಾಸವನ್ನು ದೃಢಪಡಿಸಿದ್ದೀರಿ. ವರ್ಗ ಸಹಕಾರದ ಪ್ರವೃತ್ತಿ ಹೆಚ್ಚಾಗಿದ್ದ ಸನ್ನಿವೇಶದಲ್ಲಿ, ಕಾರ್ಮಿಕ ವರ್ಗದ ಶೋಷಣೆ ತಪ್ಪಿಸಲು, ಹೊಸ ವ್ಯವಸ್ಥೆಯೊಂದನ್ನು ರೂಪಿಸಲು, ವರ್ಗ ಹೋರಾಟವೇ ಸರಿಯಾದ ದಾರಿ ಎಂಬ ಧೋರಣೆಯಿಂದ ಸಿಐಟಿಯು ಅಸ್ತಿತ್ವಕ್ಕೆ ಬಂದು 33 ವರ್ಷಗಳಾಗಿವೆ. ನಮ್ಮ ಧೋರಣೆಯೇ ಸರಿಯಾದದ್ದೆಂದು, ನಮ್ಮ ಅನುಭವ ಶ್ರುತಪಡಿಸಿದೆ. ಬಂಡವಾಳಶಾಹಿ ವ್ಯವಸ್ಥೆ 'ಸಮೃದ್ಧಿಯಿಂದ ಸಮೃದ್ಧಿಯೆಡೆಗೆ ಸಾಗುವ ದಾರಿ' ಎಂಬ ಪ್ರಚಾರ ಇದೆ. ಅದು ಸುಳ್ಳು. ಬಂಡವಾಳಶಾಹಿ ವ್ಯವಸ್ಥೆ ಬಿಕ್ಕಟ್ಟಿನಿಂದ ಬಿಕ್ಕಟ್ಟಿನೆಡೆಗೆ ಸಾಗುವ ದಾರಿ. ವಿನಾಶದೆಡೆಗೆ ಒಯ್ಯುವ ದಾರಿ. ಆ ವ್ಯವಸ್ಥೆ ಇಂದು ಅತೀವ ಬಿಕ್ಕಟ್ಟಿನಲ್ಲಿದೆ. ಆ ಬಿಕ್ಕಟ್ಟಿನ ಹೊರೆಯನ್ನು ಕಾರ್ಮಿಕ ವರ್ಗದ ಮೇಲೆ ಹೊರಿಸಲು, ಬಂಡವಾಳಶಾಹಿ ಪ್ರಯತ್ನಿಸುತ್ತಿದೆ. ಬಲಿಷ್ಠವಾದ ಸಂಘಟನೆ ಮತ್ತು ಸಮರಶೀಲ ಚಳುವಳಿಯ ಮೂಲಕ ಕಾರ್ಮಿಕ ವರ್ಗ ಅಂತಹ ಪ್ರಯತ್ನಗಳನ್ನು ಹಿಮ್ಮೆಟ್ಟಿಸಬೇಕಾಗಿದೆ.'' ಎಂದು ರಾಜ್ಯ ಸಿ.ಐ.ಟಿ.ಯು. ಅಧ್ಯಕ್ಷ ಬಿ. ಮಾಧವರವರು ಕರೆ ನೀಡಿದರು. ಕರ್ನಾಟಕ ರಾಜ್ಯ 9ನೇ ಸಮ್ಮೇಳನದ ಧ್ವಜಾರೋಹಣ ಕಾರ್ಯಕ್ರಮವನ್ನು ನಡೆಸಿಕೊಟ್ಟ ಬಿ. ಮಾಧವರವರು ಮುಂದುವರಿದು ಪಶ್ಚಿಮ ಬಂಗಾಲ, ತ್ರಿಪುರಾ ಮತ್ತು ಕೇರಳ ರಾಜ್ಯಗಳಲ್ಲಿರುವಂತೆ ಪ್ರಬಲವಾದ ಎಡ ಮತ್ತು ಪ್ರಗತಿಪರ ಶಕ್ತಿಗಳನ್ನು ಕರ್ನಾಟಕದಲ್ಲೂ ಬೆಳೆಸುವುದರ ಮೂಲಕ ಪರ್ಯಾಯವಾದ ಆಡಳಿತ ವ್ಯವಸ್ಥೆಯನ್ನು ರೂಪಿಸಲು ಕರ್ನಾಟಕದ ಸಿಐಟಿಯು ಕಾರ್ಯಕರ್ತರು ಸಜ್ಜಾಗಬೇಕೆಂದು ಕರೆ ನೀಡಿದರು.

ಹುತಾತ್ಮರಿಗೆ ಶ್ರದ್ಧಾಂಜಲಿ ಸಲ್ಲಿಸುವ ಮೂಲಕ ಉದ್ಘಾಟನಾ ಕಾರ್ಯಕ್ರಮ ಅಕ್ಟೋಬರ್ 16 ರ ಬೆಳಿಗ್ಗೆ ಆರಂಭವಾಯಿತು. ಸಭಾಂಗಣ ಕಿಕ್ಕಿರಿದು ತುಂಬಿತ್ತು. ಬಿ. ಮಾಧವರವರು ಅಧ್ಯಕ್ಷತೆ ವಹಿಸಿದ್ದು, ಅಖಿಲ ಭಾರತ ಸಿಐಟಿಯು ಕಾರ್ಯದರ್ಶಿಗಳಾದ ಡಬ್ಲ್ಯೂ.ಆರ್. ವರದರಾಜನ್ ಮತ್ತು ಡಾ। ಕೆ. ಹೇಮಲತಾ ರವರನ್ನು ಘೋಷಣೆಗಳ ನಡುವೆ ವೇದಿಕೆಗೆ ಆಹ್ವಾನಿಸಲಾಯಿತು. ಸ್ವಾಗತ ಸಮಿತಿಯ ಅಧ್ಯಕ್ಷ ಜಗನ್ನಾಥ್ ಹಾಗೂ ಜಿಲ್ಲಾ ಸಿಐಟಿಯು ಅಧ್ಯಕ್ಷ ಜಿ.ಜಯರಾಮ್‌ರವರೊಂದಿಗೆ ರಾಜ್ಯ ಸಿಐಟಿಯು ಪದಾಧಿಕಾರಿಗಳು, ಕರ್ನಾಟಕ ಬ್ಯಾಂಕ್ ನೌಕರರ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಎಸ್. ರೇವಣ್ಣ, ಜೀವ ವಿಮಾ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಎಸ್. ಹೆಚ್. ನಾಗೇಶರವರು ವೇದಿಕೆಯಲ್ಲಿ ಉಪಸ್ಥಿತರಿದ್ದರು..

ಸ್ವಾಗತ ಸಮಿತಿ ಅಧ್ಯಕ್ಷರ ಭಾಷಣದ ನಂತರ ಡಬ್ಲ್ಯೂ.ಆರ್. ವರದರಾಜನ್‌ರವರಿಂದ ಉದ್ಘಾಟನೆ ನಡೆಯಿತು. ತಮ್ಮ ಸ್ಫೂರ್ತಿದಾಯಕ ಮತ್ತು ಸತ್ವಪೂರ್ಣ ಭಾಷಣದಲ್ಲಿ ವರದರಾಜನ್‌ರವರು, ನೆಚ್ಚಿನ ನಾಯಕ ಕಾಂ. ಸೂರಿಯವರನ್ನು ಸ್ಮರಿಸಿಕೊಳ್ಳುತ್ತಾ, ಸೂರಿಯವರ ನೆನಪನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ, ಕರ್ನಾಟಕದ ಸಿಐಟಿಯು ಸಂಘಟನೆಯನ್ನು ಬಲಿಷ್ಠವಾಗಿ ಬೆಳೆಸುವಂತೆ ಕರೆ ಇತ್ತರು.

ಪ್ರಸಕ್ತ ಪರಿಸ್ಥಿತಿ ಕೇವಲ ಕಾರ್ಮಿಕ ಸಂಘಟನೆಗಳಿಗೆ ಮಾತ್ರವಲ್ಲ ಇಡೀ ಪ್ರಜಾಪ್ರಭುತ್ವ ಶಕ್ತಿಗಳಿಗೆ ಮತ್ತು ನಾಗರಿಕ ಸಮಾಜಕ್ಕೆ ಗಂಡಾಂತರಕಾರಿಯಾಗಿದೆ ಎಂದು ಹೇಳಿದ ವರದರಾಜನ್, ಯುದ್ಧದಲ್ಲಿ ಗೆಲುವು ಸಾಧಿಸಿದ ಶಕ್ತಿಗಳು ಯುದ್ಧಕ್ಕೆ ಕಾರಣಗಳನ್ನು ಇನ್ನೂ ಹುಡುಕುವುದರಲ್ಲಿಯೇ ಇವೆ. ಜಗತ್ತಿನ ಇತಿಹಾಸದಲ್ಲೇ ಇಂತಹ ಯುದ್ಧ ನಡೆದಿಲ್ಲ, ಎಂದು ಹೇಳಿದರು. ಇರಾಕಿನ ಜನರ ಪ್ರಾಣಗಳಿಗೆ ಕವಡೆ ಬೆಲೆಯನ್ನು ಕೊಡದ, ಅಮೇರಿಕಾಗೆ ತನ್ನ ಸೈನಿಕರ ಜೀವ ಮಾತ್ರ ಅಮೂಲ್ಯವಾದದ್ದು. ಆದುದರಿಂದಲೇ ಶ್ರೀಮಂತ ದೇಶದ ಸೈನಿಕರ ಬದಲಾಗಿ ಇತರ ದೇಶಗಳ ಅಗ್ಗದ ಸೈನಿಕರನ್ನು ಇರಾಕಿಗೆ ಕಳುಹಿಸಲು ವಿಶ್ವಸಂಸ್ಥೆ ಪ್ರಯತ್ನಿಸಬೇಕೆಂದು ಅದು ಒತ್ತಾಯಿಸುತ್ತಿದೆ ಎಂದರು. ಸಾಮ್ರಾಜ್ಯಶಾಹಿಯ ಕೈಗೂಸಾಗಿರುವ ಇಸ್ರೇಲ್‌ನ ಉದ್ಧಟತನ ಮಿತಿ ಮೀರುತ್ತಿದೆ. ಪ್ಯಾಲೇಸ್ತೀನಿಯರ ಮೇಲೆ ಅವ್ಯಾಹತ ದೌರ್ಜನ್ಯಗಳು, ಹಲ್ಲೆಗಳನ್ನು ನಡೆಸುತ್ತಿರುವ ಇಸ್ರೇಲಿನ ಪ್ರಧಾನಿ, ಪ್ಯಾಲೇಸ್ತೀನಿಯನ್ ನಾಯಕ ಯಾಸೆರ್ ಅರಾಫತ್‌ರನ್ನು ಮುಗಿಸುವ ಬೆದರಿಕೆ ಒಡ್ಡಿದ್ದಾರೆ. ಇಸ್ರೇಲನ್ನು ಖಂಡಿಸುವ ಭದ್ರತಾ ಸಮಿತಿ ನಿರ್ಣಯದ ವಿರುದ್ಧ ಅಮೇರಿಕಾ ಮತ ಚಲಾಯಿಸಿದೆ ಕೂಡಾ. ಸಿರಿಯಾದ ಮೇಲೆ ಇಸ್ರೇಲ್ ನಡೆಸಿದ ಆಕ್ರಮಣವನ್ನು ಖಂಡಿಸುವ ನಿರ್ಣಯವನ್ನೂ ಅಮೇರಿಕಾ ವಿರೋಧಿಸಿತು.

ಜಾಗತೀಕರಣ ನೀತಿಗಳನ್ನು ತರಾತುರಿಯಲ್ಲಿ ಜಾರಿಗೊಳಿಸುತ್ತಿದ್ದಾಗಲೇ, ಇನ್ನೊಂದೆಡೆ ಮಂದಿರ ವಿವಾದವನ್ನು ಮತ್ತಷ್ಟು ಕೆದಕುವ ಮೂಲಕ ಜನರ ಗಮನವನ್ನು ದಾರಿತಪ್ಪಿಸುವ ಹುನ್ನಾರಗಳನ್ನು ತೀವ್ರಗೊಳಿಸುತ್ತಿದೆ. ಚುನಾವಣೆ ಬಂದಾಗ ಬೂರ್ಜ್ವಾ ರಾಜಕೀಯ ಪಕ್ಷಗಳು ಜನರ ನಿಜವಾದ ಸಮಸ್ಯೆಗಳನ್ನು ಮರೆಮಾಚಿ, ತೀರಾ ಕ್ಷುಲ್ಲಕ ಸಂಗತಿಗಳನ್ನೇ ಪ್ರಧಾನವಾಗಿ ಬಿಂಬಿಸುತ್ತವೆ. ಇಬ್ಬಗೆಯ ನೀತಿಗಳು ಮತ್ತು ಇಬ್ಬಂದಿತನವೇ ಅವರಿಗೆ ಪ್ರಮುಖವಾಗುತ್ತದೆ.

**ಹಕ್ಕುಗಳ ದಮನ**

ಜಾಗತೀಕರಣದ ನೆಪದಲ್ಲಿ ಸುಧಾರಣೆಗಳನ್ನು ಜಾರಿಗೊಳಿಸುವಾಗಲೇ ಹಕ್ಕುಗಳ ದಮನವೂ ಪ್ರಾರಂಭವಾಗುತ್ತದೆ. ತಮಿಳುನಾಡಿನ ಸರ್ಕಾರಿ ನೌಕರರ ವಿಷಯದಲ್ಲಿ ಸರ್ವೋಚ್ಚ ನ್ಯಾಯಾಲಯದ ತೀರ್ಪು ಇದಕ್ಕೊಂದು ಉದಾಹರಣೆ. ವ್ಯಕ್ತಿಗತವಾದ ಅಭಿಪ್ರಾಯಗಳನ್ನು ಮತ್ತು ಪೂರ್ವಗ್ರಹ ಪೀಡಿತ ಅನಿಸಿಕೆಗಳನ್ನು ನ್ಯಾಯಾದೇಶದ ಮೂಲಕ



## ಸಿಐಟಿಯು ರಾಜ್ಯಸಮ್ಮೇಳನ

# ವರ್ಗ ಹೋರಾಟ ಮುನ್ನಡೆಸುವ ವಿಶ್ವಾಸದ ಪ್ರಖರತೆ

ರತ್ನಾಕರ ಶೆಣೈ

ವಾಜಪೇಯಿ ನೇತೃತ್ವದ ಭಾರತ ಸರ್ಕಾರ, ತಟಸ್ಥ ವಿದೇಶಾಂಗ ನೀತಿಗೆ ತಿಲಾಂಜಲಿ ನೀಡಿ, ಅಮೇರಿಕೆಯ ಬಾಲಂಗೋಚಿಯಾಗಿದೆ ಎಂದು ವರದರಾಜನ್ ಟೀಕಿಸಿದರು.

ಜಾಗತೀಕರಣದ ನೀತಿಗಳು ಜಾರಿಗೆ ಬಂದ ದಿನಗಳಿಂದಲೂ ಸಿ.ಐ.ಟಿ.ಯು ಈ ನೀತಿಗಳನ್ನು ದೃಢವಾಗಿ ವಿರೋಧಿಸುತ್ತಾ ಬಂದಿದೆ ಮಾತ್ರವಲ್ಲ, ಅವುಗಳ ವಿರುದ್ಧವಾಗಿ ಬೆಳೆದು ಬರುತ್ತಿರುವ ಹೋರಾಟಗಳಿಗೆ ನೇತೃತ್ವ ನೀಡಿದೆ. ಇಂದು, ಸಮಾಜದ ಪ್ರತಿಯೊಂದು ವಿಭಾಗ, ಕೆಲವೊಂದು ಕೈಗಾರಿಕೋದ್ಯಮಿಗಳೂ ಸೇರಿದಂತೆ, ಜಾಗತೀಕರಣದ ವಿರುದ್ಧವಾಗಿ ಸೊಲ್ಲೆತ್ತುತ್ತಿದೆ. ದೋಹಾ ಮಾತುಕತೆಗೆ ತನ್ನ ಒಪ್ಪಿಗೆ ನೀಡಿದ್ದ ವಾಜಪೇಯಿ ಸರ್ಕಾರ, ಇತ್ತೀಚಿನ ಕ್ಯಾನ್‌ಕನ್‌ನ ಸಚಿವ ಮಟ್ಟದ ಸಭೆಯಲ್ಲಿ, ಹೊಸವಿಷಯಗಳ ಚರ್ಚೆಗೆ ವಿರೋಧ ವ್ಯಕ್ತಪಡಿಸುವ ಮಟ್ಟಕ್ಕೆ ಬಂದಿದೆ. ಈ ವರ್ಷದ ಜನವರಿಯಲ್ಲಿ ನಡೆದ ಏಷಿಯಾ ಸಾಮಾಜಿಕ ವೇದಿಕೆಯ ಮೂಲಕ ನಾವು ಕ್ಯಾನ್‌ಕನ್‌ನ ಸಚಿವ ಮಟ್ಟದ ಸಭೆಯನ್ನು ಪಥಭ್ರಷ್ಟಗೊಳಿಸಿ ಎಂದು ಕರೆ ನೀಡಿದ್ದೇವು. ಆದರೆ ಕೇಂದ್ರ ಸಚಿವ ಅರುಣ್ ಜೈಟ್ಲೀ ತಮ್ಮ ಬೆನ್ನನ್ನು ತಾವೇ ತಟ್ಟಿಕೊಳ್ಳುವ ನಾಟಕವಾಡುತ್ತಿದ್ದಾರೆ. ಕ್ಯಾನ್‌ಕನ್ ಸಭೆಯನ್ನು ವಿಫಲಗೊಳಿಸಿದ್ದು ಕಿನ್ಯಾ ನೇತೃತ್ವದ ಆಫ್ರಿಕನ್ ದೇಶಗಳು ಎಂಬುದನ್ನು ಮರೆಯಬಾರದು. ಚೀನಾ ದೇಶ, ವಿಶ್ವ ವಾಣಿಜ್ಯ ಸಂಘಟನೆಯ ಸದಸ್ಯತ್ವ ಪಡೆದಾಗ, ಡಬ್ಲ್ಯೂ.ಟಿ.ಓ. ವನ್ನು ವಿರೋಧಿಸುತ್ತಿದ್ದ ನಮ್ಮನ್ನು ಅವಹೇಳನ ಮಾಡಲಾಗಿತ್ತು. ಆದರೆ ಚೀನಾ, ಕ್ಯಾನ್‌ಕನ್ ಸಭೆಯಲ್ಲಿ ವಿರೋಧಕ್ಕೆ ಚಾಲನೆ ನೀಡುವುದರ ಮೂಲಕ, ಇದಕ್ಕೆ ತಕ್ಕ ಉತ್ತರವನ್ನೇ ನೀಡಿದೆ ಎಂದರು.


5 ರಾಜ್ಯಗಳಲ್ಲಿ ಚುನಾವಣೆಗಳು ಶೀಘ್ರದಲ್ಲಿಯೇ ನಡೆಯಲಿವೆ. ಈ ಚುನಾವಣೆಯಲ್ಲಿ ಗೆಲ್ಲಲು ಭಾರತೀಯ ಜನತಾ ಪಕ್ಷ ಹವಣಿಸುತ್ತಿದೆ. ಒಂದೆಡೆ

ಹೇರಲಾಗುತ್ತಿದೆ. ನಮ್ಮದು ಪ್ರಜಾಪ್ರಭುತ್ವ ವ್ಯವಸ್ಥೆ. ಇಲ್ಲಿ ಪ್ರಜೆಗಳೇ ನಿಜವಾದ ಪ್ರಭುಗಳು. ಈ ತೀರ್ಪಿನ ಹಾನಿಕರ ಪರಿಣಾಮಗಳನ್ನು ನಿವಾರಿಸಲು ಭಾರತ ಸರ್ಕಾರ ಸಂಧಾನಿಕ ಕ್ರಮ ತೆಗೆದುಕೊಳ್ಳಬೇಕೆಂಬುದು ನಮ್ಮ ಒತ್ತಾಯ. ಹಿಂದೆ ಶ್ರೀಮತಿ ಇಂದಿರಾ ಗಾಂಧಿಯವರ ಚುನಾವಣಾ ಆಯ್ಕೆಯನ್ನು ನ್ಯಾಯಾಲಯ ಅಸಿಂಧುಗೊಳಿಸಿದಾಗ ಮತ್ತು ಶಾಹಾಬಾನೊ ಪ್ರಕರಣದಲ್ಲಿ ಮೂಲಭೂತವಾದಿಗಳ ಒತ್ತಾಯಕ್ಕೆ ಮಣಿದ ರಾಜೀವ ಗಾಂಧಿಯವರು ಸಾಂವಿಧಾನಿಕ ಕ್ರಮಗಳನ್ನು ತೆಗೆದುಕೊಂಡಿದ್ದಿದೆ.

ಸಾರ್ವಜನಿಕ ವಲಯದ ತೈಲ ನಿಗಮಗಳನ್ನು ಖಾಸಗೀಕರಿಸುವ ಪ್ರಶ್ನೆಗೆ ಸಂಬಂಧಿಸಿದಂತೆ ನ್ಯಾಯಾಲಯದ ಆದೇಶವನ್ನು ಬಂಡವಾಳ ಹಿಂತೆಗೆತ

ದಿನನಿತ್ಯವೆಂಬಂತೆ ಹೋರಾಟಗಳು ನಡೆಯುತ್ತಿವೆ. ಎಡರಂಗ ಸರ್ಕಾರ ಪರ್ಯಾಯವನ್ನು ತೋರಿಸಿಕೊಟ್ಟಿದೆ. ಜಾತಿ ಗಲಭೆಗಳಿಲ್ಲದ, ಕೋಮುವಾದಕ್ಕೆ ಎಡೆ ಇಲ್ಲದ, ಸಂಕುಚಿತ ಪ್ರಾದೇಶಿಕವಾದಕ್ಕೆ ಅವಕಾಶವಿಲ್ಲದ, ಮೂಲಭೂತವಾದಕ್ಕೆ ನೆಲೆಯೇ ಸಿಗದ ರಾಜಕೀಯ ವ್ಯವಸ್ಥೆಯನ್ನು ಅದು ನೀಡಿದೆ. ಜನತಾಂತ್ರಿಕ ಮೌಲ್ಯಗಳ ವೃದ್ಧಿ ಮತ್ತು ಪ್ರಜಾಪ್ರಭುತ್ವ ಹಕ್ಕುಗಳ ರಕ್ಷಣೆ ಅಲ್ಲಿ ಹಾಸುಹೊಕ್ಕಾಗಿವೆ.

ನಿಮ್ಮ ರಾಜ್ಯ (ಕರ್ನಾಟಕ)ದಲ್ಲಿ ಕಾಂಗ್ರೆಸ್ ಆಡಳಿತೆಯಿದೆ. ಭಾಜಪ ವಿರೋಧಪಕ್ಷ. ಆದರೆ ಕೇಂದ್ರ ಮತ್ತು ರಾಜ್ಯ ಸರ್ಕಾರದ ನೀತಿಗಳಲ್ಲಿ ಯಾವುದೇ ವ್ಯತ್ಯಾಸಗಳಿಲ್ಲ. ಇಲ್ಲೂ ಖಾಸಗೀಕರಣದ



ಅಧಿವೇಶನದಲ್ಲಿ ವೇದಿಕೆಯ ಮೇಲೆ ಪ್ರಮುಖ ಮುಖಂಡರು


ಸಚಿವ ಅರುಣ್ ಶೌರಿಯವರು ಕಟುವಾಗಿ ಟೀಕಿಸಿದ್ದಾರೆ. ನ್ಯಾಯಾಲಯ ಹೇಳಿರುವುದು, ಸಂಸತ್ತಿನ ಅನುಮೋದನೆ ಅಗತ್ಯ ಎಂದಷ್ಟೇ ಮಾತ್ರ. ಇಷ್ಟು ಮಾತ್ರವನ್ನೇ ಸಹಿಸಲಾಗುತ್ತಿಲ್ಲ ಈ ಪ್ರಜಾಪ್ರಭುತ್ವ ವಿರೋಧಿ ಸಚಿವ ಮಹಾಶಯರಿಗೆ. ಅವರು ಸಚಿವರಾಗಿ ಅಲ್ಲ, ಮಾರಾಟ ಪ್ರತಿನಿಧಿಯಾಗಿ ವರ್ತಿಸುತ್ತಿದ್ದಾರೆ ಎಂದು ಖಾರವಾಗಿ ಟೀಕಿಸಿದರು.

**ಪರ್ಯಾಯ ಎಲ್ಲಿದೆ?**

ಪಶ್ಚಿಮ ಬಂಗಾಳದಲ್ಲಿ ಮಾತ್ರವೇ ರಾಜ್ಯ ಸರ್ಕಾರೀ ನೌಕರರು ಮುಷ್ಕರದ ಹಕ್ಕನ್ನು ಕಾನೂನು ಬದ್ಧವಾಗಿ ಹೊಂದಿರುವುದು. ಎಡರಂಗ ಸರ್ಕಾರದ ನೀತಿಗಳಿಂದಾಗಿ ಇದು ಸಾಧ್ಯವಾಗಿದೆ. ಮುಷ್ಕರದ ಹಕ್ಕಿನ ತೀರ್ಪು ಹೊರಬೀಳುತ್ತಿದ್ದಂತೆಯೇ ಅಲ್ಲಿ ಜನ ಬೀದಿಗಿಳಿದು ಪ್ರತಿರೋಧಿಸಿದರು. ಆದರೆ ಅಲ್ಲಿನ ನ್ಯಾಯಾಲಯ ಬೇರೆಯೇ ರೀತಿಯಲ್ಲಿ ವರ್ತಿಸುತ್ತಿದೆ. ಇತ್ತೀಚೆಗೆ ಮೆರವಣಿಗೆಗಳನ್ನು ನಿಷೇಧಿಸುವ ಆದೇಶ ಹೊರಬಿದ್ದಿದೆ. ಜನ ಸುಮ್ಮನೆ ಕೂತಿಲ್ಲ.


ಭರಾಟೆ ತೀವ್ರವಾಗಿದೆ. ವಿದ್ಯುತ್ ರಂಗದಲ್ಲಿ ಇನ್ನೊಂದು ಸುತ್ತಿನ ದರ ಏರಿಕೆ ಎದುರಾಗಿದೆ. ಕೃಷಿಕ ಅತೀವ ಬಿಕ್ಕಟ್ಟು ಎದುರಿಸುತ್ತಿದ್ದಾನೆ. ರಾಜ್ಯ ಸರ್ಕಾರ ನೌಕರ ವಿರೋಧೀ, ಜನ ವಿರೋಧಿ ನೀತಿಗಳನ್ನೇ ಪಾಲಿಸುತ್ತಿದೆ. ಬಿ.ಪಿ.ಎಲ್. ಕಾರ್ಮಿಕರ ಮುಷ್ಕರದ ಸಂಬಂಧದಲ್ಲಿ ನಮ್ಮ ಜಿಲ್ಲಾ ಅಧ್ಯಕ್ಷರಿಗೆ ಜೈಲುವಾಸ ವಿಧಿಸಲಾಗಿದೆ. ಹಿಂದೆ ಬೆಂಗಳೂರು ಸಾರ್ವಜನಿಕ ಉದ್ಯಮದ ಕೇಂದ್ರವಾಗಿತ್ತು. ಇಂದು ಒಂದೊಂದಾಗಿ ಉದ್ಯಮಗಳನ್ನು ಮುಚ್ಚಲಾಗಿದೆ. ಇದು ಜಾಗತೀಕರಣ ಅಲ್ಲ, ಇದು ಕೇವಲ ಬಂಡವಾಳದ ಜಾಗತೀಕರಣ. ಇದರಲ್ಲಿ ಕಾರ್ಮಿಕರು ತಮ್ಮ ಹಕ್ಕುಗಳನ್ನು ಕಳೆದುಕೊಳ್ಳುತ್ತಾರಲ್ಲದೆ, ಬೇರೇನೂ ಗಳಿಸುವುದಿಲ್ಲ. ಜಗತ್ತಿನ ಬಡಜನತೆಯನ್ನು ಬಾಧಿಸುತ್ತಿರುವ ಹಸಿವು, ನಿರುದ್ಯೋಗ ಮುಂತಾದ ಸಮಸ್ಯೆಗಳಿಗೆ ಪರಿಹಾರ ನೀಡುವ ಜಾಗತೀಕರಣ ನಮಗೆ ಬೇಕಾಗಿರುವುದು. ಹಿಂದೆ ಪೂರ್ವ ಯುರೋಪಿನ ರಾಜ್ಯಗಳಲ್ಲಿ ಸಮಾಜವಾದೀ ವ್ಯವಸ್ಥೆ ಇತ್ತು. ತಮ್ಮ ಕಾರ್ಮಿಕರು ಎಲ್ಲಿ ಸಮಾಜವಾದದೆಡೆಗೆ ಒಲಿಯುತ್ತಾರೋ ಎಂದು ಹೆದರಿ, ಪಾಶ್ಚಿಮಾತ್ಯ ರಾಜ್ಯಗಳಲ್ಲಿ ಕಾರ್ಮಿಕರಿಗಾಗಿ ವಿಶೇಷ ಕಲ್ಯಾಣ ಯೋಜನೆಗಳನ್ನು ಜಾರಿ ಮಾಡಿ, ಅನೇಕ ಸೌಲಭ್ಯಗಳನ್ನು ನೀಡಲಾಯಿತು. ಇಂದು ಸಮಾಜವಾದೀ ವ್ಯವಸ್ಥೆ ಪೂರ್ವ ಯುರೋಪಿನಲ್ಲಿಲ್ಲ.

ಪುಟ 1೩ ಕ್ಕೆ



ಬಹಿರಂಗ ಸಭೆಯನ್ನುದ್ದೇಶಿಸಿ ಪ.ಬಂಗಾಳದ ಇಂದನ ಸಚಿವ ಮೃಣಾಲ್ ಬ್ಯಾನರ್ಜಿ, ಡಾ. ಎಂ.ಕೆ.ಪಂಧೆ, ಡಾ. ಹೇಮಲತಾ, ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಜಿ.ಎನ್.ನಾಗರಾಜ್; ಬಿ.ಮಾಧವ, ವಿಜೆಕೆ ಮುಂತಾದವರು ಮಾತನಾಡಿದರು.

# ಭೂಗತ ಜೀವನವೆಂದರೆ....





ಒಂದು ಬಾರಿ ಕಾಂ.ಕೃಷ್ಣಪ್ಪನವರನ್ನು ದೊಡ್ಡ ಗುಡ್ಡೆ, ಕುಂಜಿಬೆಟ್ಟು ಸಭೆಗಳಲ್ಲಿ ಭಾಗವಹಿಸಿದ ನಂತರ ಅವರನ್ನು ಮಂಗಳೂರಿಗೆ ಕಳುಹಿಸುವ ಜವಾಬ್ದಾರಿ ನನ್ನ ಮೇಲೆ ಬಿತ್ತು. ನಾವಿಬ್ಬರೂ 10 ಗಂಟೆಗೆ ಹೊರಟು ಹೆಚ್ಚು ಮಾತನಾಡದೆ ಬಳುದಾರಿಯಲ್ಲಿ ಸಾಗುತ್ತಾ ಐದಾರು ಮೈಲಿಗಳ ದೂರವನ್ನು ಕ್ರಮಿಸಿ ಉದ್ಯಾವರ ಹೊಳೆ ದಾಟಿಸಿದ ನಂತರ ಬೇರೆ ಬದಲಿ ವ್ಯವಸ್ಥೆ ಮಾಡುವವರೆಗೆ ನನ್ನ ಜವಾಬ್ದಾರಿ ಇತ್ತು ಅದನ್ನು ನಿರ್ವಹಿಸಿದೆ. ಮುಂದಿನ ಜವಾಬ್ದಾರಿಯನ್ನು ಬೇರೊಬ್ಬರಿಗೆ ನೀಡಲಾಗಿತ್ತು. ಅವರದನ್ನು ನಿರ್ವಹಿಸಿದರು.

ಈ ಎಲ್ಲಾ ಕಡೆಗಳಲ್ಲಿ ಮುಖಂಡರು ಭೂಗತರಾಗಬೇಕಾಯಿತು. ಆ ಸಂದರ್ಭದಲ್ಲಿ ಉಡುಪಿಯ ಕಾಂ.ದಾಸ ಸೇರಿಗಾರ ಕಾಂ.ಸಂಕು ಪೂಜಾರಿ(ಮತ್ತೊಬ್ಬರನ್ನು ಹೆಸರು ನೆನಪಾಗುವುದಿಲ್ಲ) ಸೇರಿ 3 ಮಂದಿಯನ್ನು ಬಂಧಿಸಲಾದ ನಂತರ ಅವರ ಮೇಲೆ ಕ್ರೂರವಾದ ಪೊಲೀಸು ಧಾಳಿ ನಡೆಯಿತೆಂದು ನೋಡಿದವರು ಬಂದು ನಮಗೆ ಹೇಳುತ್ತಿದ್ದರು. ಹಿತೈಷಿಗಳ ದೊಡ್ಡ ಪಡೆಯೇ ನಮ್ಮ ಬೆಂಬಲಕ್ಕಿತ್ತು. ಯಾವುದೇ ಒಬ್ಬ ಸಂಘಟಿತ ಕಾರ್ಮಿಕ ಯಾವುದೇ ಸುಳಿವು ನೀಡಲು ಗೊತ್ತಿದ್ದರೂ ತಯಾರಿರಲಿಲ್ಲ ಪೆಟ್ಟು ತಿಂದು, ದಬ್ಬಾಳಿಕೆ ಎದುರಿಸಲು ತಯಾರಿದ್ದರು. ತಮ್ಮನ್ನು ಮಾರಿಕೊಳ್ಳಲು ತಯಾರಿರಲಿಲ್ಲ. ಕಾಂ.ದಾಸ ಸೇರಿಗಾರರೂ ಸೇರಿದಂತೆ 3 ಮಂದಿಯನ್ನು ತೀವ್ರವಾಗಿ ಥಳಿಸಲಾಯಿತು. ಬೂಟು ಕಾಲುಗಳಿಂದ ಒದೆಯಲಾಯಿತು. ಅವರು ರಕ್ತ ಕಾರುವವರೆಗೆ ಬೂಟು ಕಾಲುಗಳಿಂದ ಎದೆಗೂ ಒದೆಯಲಾಯಿತೆಂದು ಜೈಲಿನ ನಮ್ಮ ನಗರ ಸಭೆ ಕಸ ಗುಡಿಸುವ ಕಾರ್ಮಿಕರು ಹೇಳಿದರು. ನಾವದನ್ನು ನಮಗೆ ತಿಳಿದ ವರದಿಗಳನ್ನು ಭೂಗತ ನಾಯಕರಿಗೆ ತಿಳಿಸಿದೆವು. ಮಂಗಳೂರಿನಲ್ಲಿ ಕಾಂ.ಲಿಂಗಪ್ಪ ಸುವರ್ಣ, ಕಾಂ.ಚೆನ್ನಯ,

**ಭೂಗತರಾದವರ ಜೀವನ ಹೂವಿನ ಹಾಸುಗೆಯಾಗಿರಲಿಲ್ಲ. ಮುಳ್ಳಿನ ಹಾಸಿಗೆಯಂತೆ ಇತ್ತು. ಅನೇಕ ವಿಧವಾದ ಕಷ್ಟನಷ್ಟಗಳನ್ನೆದುರಿಸಬೇಕಾಯಿತು. ಊಟವಿಲ್ಲದೆ ಸರಿಯಾದ ನಿದ್ರೆಯೂ ಇಲ್ಲದೆ ಬಳಲಿಕೆಯಿಂದಲೂ ಕಂಗಾಲಾಗುವಂತಿತ್ತು.**

ಮೊದಲಾದವರ ಮೇಲೆ ಸಹ ಇದೇ ರೀತಿಯ ನಿರ್ದಯ ಧಾಳಿಗಳು ನಡೆದ ವರದಿಗಳೂ ನಮಗೆ ತಿಳಿದುಬಂದವು. ಬಂಟ್ವಾಳದಲ್ಲಿ ಅಮ್ಮು ಶೆಟ್ಟಿ ಮುಂತಾದವರ ಬಂಧನವಾಯಿತು. ಜಿಲ್ಲೆಯ ಮುಂದಾಳುಗಳಲ್ಲಿ ಕಾಂ.ಎ.ಕೃಷ್ಣ ಶೆಟ್ಟರ ಬಂಧನವೂ ಆಯಿತು. ಉಳಿದವರೆಲ್ಲರೂ ಭಾಗತರಾದರು.

ಇವರಲ್ಲಿ ಪ್ರಮುಖರಾದ ವರೆಂದರೆ ಕಾಂ.ಎಸ್.ಎನ್.ಹೊಳ್ಳ, ಕಾಂ.ಬಿ.ವಿ.ಕಕ್ಕಿಲ್ಲಾಯ, ಕಾಂ.ಎ.ಶಾಂತಾರಾಮ ಪೈ, ಕಾಂ.ಮೋನಪ್ಪ ಶೆಟ್ಟಿ ಕಾಂ.ಸಿಂಪ್ಸನ್ ಸೋನ್ಸು, ಕಾಂ.ಕೇಶವ ಕಾಮತ್, ಕಾಂ.ಸಿಂಪ್ಸನ್ ಸೋನ್ಸ ಮತ್ತು ಕಾಂ.ಎಂ.ಎಚ್.ಕೃಷ್ಣಪ್ಪನವರು ಪ್ರಮುಖರು. ಉಡುಪಿಯಲ್ಲಿ ಕಾಂ.ಕೆ.ರಾಘವನ್, ಕಾಂ.ಶೀನ ನಾಯಕ್, ಮತ್ತು ಕಾಂ.ಅನಂತಕೃಷ್ಣ ಐತಾಳರು ಸೇರಿದ್ದರು. ಕಾಸರಗೋಡಿನಿಂದಲೂ ಕೆಲವರು ಮುಂದಾಳುಗಳು ಭೂಗತರಾದರು. ಭೂಗತರಾದವರ ಜೀವನ ಹೂವಿನ ಹಾಸುಗೆಯಾಗಿರಲಿಲ್ಲ. ಮುಳ್ಳಿನ ಹಾಸಿಗೆಯಂತೆ ಇತ್ತು. ಅನೇಕ ವಿಧವಾದ ಕಷ್ಟನಷ್ಟಗಳನ್ನೆದುರಿಸ ಬೇಕಾಯಿತು. ಊಟವಿಲ್ಲದೆ ಸರಿಯಾದ ನಿದ್ರೆಯೂ ಇಲ್ಲದೆ ಬಳಲಿಕೆಯಿಂದಲೂ ಕಂಗಾಲಾಗುವಂತಿತ್ತು. ಯಾವುದೇ ವಿಧದ ತರಬೇತಿ, ಅನುಭವ ಅವರಲ್ಲಿ ಯಾರಿಗೂ ಇರಲಿಲ್ಲ. ಸರಕಾರದ ಕೃಪೆಯಿಂದಾಗಿ ಅವರಿಗೆ ಯೋಚನೆ ಮಾಡುವ ಅವಕಾಶವೂ ವಂಚಿತವಾಯಿತು. ಅವರವರ ದಾರಿಯಂತೆ ಅವರವರು ತಮ್ಮ ರಕ್ಷಣೆ ಮಾಡಿಕೊಂಡು ಸಭೆಗಳನ್ನು ಸೇರಿಸಲಾದ ನಂತರ ಪರಸ್ಪರ ಚರ್ಚೆಯಿಂದ ಬಂದ ಅನುಭವದ ಮೇರೆಗೆ ಭೂಗತ ಕೇಂದ್ರಗಳನ್ನು ಯಾವ ರೀತಿ ನಡೆಸಬೇಕು ಎಂದು ಅನುಭವದಿಂದ ಕಲಿತರು. ಸಂಪರ್ಕ ನಿರಂತರವಾಗಿ ಉಳಿಸಿ ಕೊಂಡು ಮೇಲಿನ ಸಮಿತಿ ಸಭೆಗಳಿಗೆ ಹಾಜರಾಗುವ ಮೂಲಕ ಅಲ್ಲಿ ನೀಡಲಾದವುಗಳನ್ನು ಪರಸ್ಪರರಿಗೆ ತಿಳಿಸುತ್ತಾ ಪ್ರತಿಯೊಬ್ಬರೂ ಇನ್ನೊಬ್ಬರಿಂದ ಕಲಿಯುತ್ತಾ ತಮ್ಮ ರಕ್ಷಣೆ ಹ್ಯಾಗೆ ಮಾಡಿಕೊಳ್ಳಬೇಕೆಂದು ತಿಳಿಯುತ್ತಾ ಸಾಗಿದಂತೆ. ಕೆಲವರ ಬಂದನವಾಯಿತು. ದಾಳಿ ಹಿಂಸೆಗಳೂ ಕಡಿಮೆಯಿರಲಿಲ್ಲ. ಪೊಲೀಸರು ಅಂದಿನ ದಿನಗಳಲ್ಲಿ ಬಹಳ ಕ್ರೂರವಾಗಿ ಪ್ರಾಣಿ ಗಳಂತೆ ವರ್ತಿಸಿದರೆಂದರೂ ತಪ್ಪಾಗ ಲಾರದು. ಒಂದೇ ಮಾತಿನಲ್ಲಿ ಹೇಳುವುದಾದರೆ ಕಮ್ಯುನಿಸ್ಟರ ನರಭೇಟೆಯೇ ನಡೆಯಿತೆಂದು ಧಾರಳವಾಗಿ ಹೇಳಬಹುದು. ಜಿಲ್ಲೆಯ ಮುಖಂಡರನ್ನು ಬಿಟ್ಟರೆ ಉಳಿದವರನ್ನು ಮೂರು ತಿಂಗಳೊಳಗೆ ಬಂದಿಸಲು ಪೋಲಿಸರಿಗೆ ಸಾಧ್ಯವಾಯಿತು. ಜಿಲ್ಲಾ ಮುಂದಾಳುಗಳು ಮಾತ್ರ ದೀರ್ಘ ಕಾಲದವರೆಗೆ ಕಾಂ.ಬಿ.ವಿ.ಕಕ್ಕಿಲ್ಲಾಯ , ಕಾಂ.ಎ.ಶಾಂತಾರಾಮ ಪೈ, ಕಾಂ.ಎಂ.ಎಚ್ .ಕೃಷ್ಣಪ್ಪ, ಕಾಂ.ಸಿಂಪ್ಸನ್ ಸೋನ್ಸರ ಬಂಧನ ಬೇಗನೆ ಆಗಲಿಲ್ಲ. ಕಾಂ.ಕೃಷ್ಣಪ್ಪನವರು ನಮ್ಮ ಜಿಲ್ಲೆಯಲ್ಲಿಯೇ ಭೂಗತರಾಗಿ ಅಜೇಯವಾಗಿ ಉಳಿದರು. ಪೊಲೀಸರಿಗೆ ಅವರನ್ನು ಬಂಧಿಸಲು ಸಾಧ್ಯವಾಗಲಿಲ್ಲ. ಕಾಂ.ಶಾಂತಾರಾಮ ಪೈ ಒಂದು ವರ್ಷದ ನಂತರ 1949 ರಲ್ಲಿ ಕಾಂ. ಕಕ್ಕಿಲ್ಲಾಯ 1950 ರಲ್ಲಿ ಬಂಧಿತರಾದರು. ಕಾಂ.ಸೋನ್ಸರು ಜಿಲ್ಲೆಯಿಂದ ಹೊರಗೆ ಹೋಗಿ ಪೊಲೀಸರ ಬಂಧನಕ್ಕೆ ಸಿಗಲಿಲ್ಲ. ಕಾಂ.ಕೃಷ್ಣಪ್ಪನವರಿಗೆ ಭೂಗತ ಜೀವನದ ಕರಾಳವಾದ ಅನುಭವದ ಮಧ್ಯೆಯೂ ಕಲಿತು ಬಂದು ತರಬೇತಿಯಂಥಹ ಅನುಭವ ಪಡೆದು ಬಂಟ್ವಾಳ ತಾಲೂಕಿನಲ್ಲಿ ಮಂಗಳೂರು ತಾಲೂಕಿನಲ್ಲಿ ಇರಾ, ಬಾಳೆಪುಣೆ, ಮೊದಲಾದ ಗ್ರಾಮಗಳಲ್ಲಿ ಬಲಿಷ್ಟ ರೈತ ಸಂಘಟನೆ ಬೆಳೆಸಿದ ಪರಂಪರೆ ಅವರಿಗೆ ಇದೆ. ಅಂಥ ಸಾಧನೆ ಅವರದಾಗಿತ್ತು. ಮುಖಂಡರು ಗಳೆಲ್ಲರೂ ಪಕ್ಷಕ್ಕೋಸ್ಕರ ಎಂಥಹ ತ್ಯಾಗ ಬಲಿದಾನ ಮಾಡಿದರೆಂಬುದು ಕಾರ್ಮಿಕ ವರ್ಗಕ್ಕೆ ಅಂದಿನ ದಿನಗಳಲ್ಲಿ ತಿಳಿದಿತ್ತು.



ಡೇವಿಡ್ ಕರ್ಕಡ, ಉಡುಪಿ

ಇಡೀ ದೇಶದಲ್ಲಿ ಈ ರೀತಿಯ ಭೀಕರ ಮರ್ಧನ ನಡೆದಿತ್ತು. ಮಹಾರಾಷ್ಟ್ರದಲ್ಲಿ ಸತಾರದ ಕಾಂ.ನಾನಾ ಪಾಟೀಲ್ ಕಾಂ.ಚಂದ್ರಬಾನ ಅಠಾರೆಯವರ ಬಂದನಕ್ಕೆ ಸರಕಾರ ರೂ.2 ಲಕ್ಷವನ್ನು ಘೋಷಿಸಿತ್ತು ಎಂದರೆ ಭೀಕರತೆಯ ಅರಿವಾಗಬಹುದು. ○

# ಮೈಸೂರು ದಸರಾದ ಒಲವುಗಳು


ಕಳೆದೆರಡು ವರ್ಷಗಳಿಂದ ಮೈಸೂರಿನಲ್ಲಿ ದಸರಾ ಆಚರಣೆ ಸಪ್ಪೆಯಾಗಿತ್ತು. ಈ ಸಾರಿ ದಸರಾ ವಿಜೃಂಭಣೆಯಿಂದ ನಡೆಯಿತು. ದಸರಾಕ್ಕೆ ಎಲ್ಲ ಕಡೆಗಳಿಂದ ಜನಸಾಗರವೇ ಹರಿದುಬಂತು. ಇಲ್ಲಿನ ಹಿರಿಯರು ಗಮನಿಸಿದ ಹಿಂದಿನ ಮತ್ತು ಇಂದಿನ ದಸರಾಗಳ ಒಂದು ಮುಖ್ಯ ವ್ಯತ್ಯಾಸವೇನೆಂದರೆ ಈ ವರ್ಷದ ದಸರಾಕ್ಕೆ ಒಂದು ಸ್ಪಷ್ಟ ಒಲವಿತ್ತು. ಒಡೆದು ಕಾಣುವ ಈ ಒಲವೆಂದರೆ ಶ್ರೀಮಂತರ ಪರವಾದ ಒಲವು.

ಹಿಂದೆಯೂ ದಸರಾ ಬಡವರ ಹಬ್ಬವಾಗಿರಲಿಲ್ಲ. ಆದರೆ ನಾಡ ಹಬ್ಬದ ರೀತಿಯಲ್ಲಿ ಆಚರಿಸಲ್ಪಡುತ್ತಿದ್ದ ದಸರಾದಲ್ಲಿ ಪಾಲ್ಗೊಳ್ಳಲು ಬಡವರಿಗೂ ಸಮಾನ ಅವಕಾಶಗಳಿದ್ದವು. ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಮುಕ್ತ ಪ್ರವೇಶವಿರುತ್ತಿತ್ತು. ಈ ಸಾರಿಯೂ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಮುಕ್ತ ಪ್ರವೇಶವಿತ್ತು. ಆದರೆ ಶ್ರೀಮಂತರಿಗೆ ವಿಶೇಷ ಏರ್ಪಾಡು.

ವಿವಿಧ ಕಾರ್ಯಕ್ರಮಗಳಿಗೆ ವಿವಿಧ ಕಂಪನಿಗಳು ಪ್ರಾಯೋಜಕತ್ವ ನೀಡಿದ್ದವು. ಆದ್ದರಿಂದ ಮೈಸೂರು ದಸರಾದ ತುಂಬೆಲ್ಲ ಕಂಪನಿಗಳು ಉತ್ಪನ್ನಗಳ ಪ್ರಚಾರ ಅವರದೇ ಕಾರುಬಾರು. ಅವರದೇ ವ್ಯವಸ್ಥೆ. ಇಂತಹ ವ್ಯವಸ್ಥೆ ಜನಸಾಮಾನ್ಯರ ಪರವಾಗಿರಲು ಸಾಧ್ಯವೇ ಇಲ್ಲ ತಾನೆ? ಕೆಲವು ಮುಖ್ಯ ಕಾರ್ಯಕ್ರಮಗಳಿಗೆ ಅಪಾರ ಮೊತ್ತದ ಪ್ರವೇಶ ದರ, ದಸರಾ ಕವಿಗೋಷ್ಠಿಗೆ ಪ್ರಾಯೋಜಕತ್ವ ಪಡೆದ ಬಗ್ಗೆ ದೊಡ್ಡ ವಿವಾದವೂ ಆಯಿತು. ವ್ಯವಸ್ಥಾಪಕರು ಹಿಂದೆಯೂ ಇದು ಹೀಗೆ ಇತ್ತು ಎಂದು ಸಮರ್ಥಿಸಿಕೊಂಡರು.

ಮೈಸೂರಿನ ವ್ಯಾಪಾರಿಗಳು ಅಪಾರ ವ್ಯಾಪಾರ ಮಾಡಿದರಂತೆ. ಈ ಸಂತಸದಲ್ಲಿ ಪ್ರತಿವರ್ಷ ದಸರಾ ಆಚರಿಸಲು ತಮ್ಮ ತಿಂಗಳ ಆದಾಯದ ಶೇ.1 ರಷ್ಟನ್ನು ನೀಡಲು ವ್ಯಾಪಾರಿಗಳು ಮುಂದೆ ಬಂದಿದ್ದಾರೆ.

ಇದು ಮೈಸೂರು ದಸರಾದ ಹೊಸ ಒಲವು. ಕಾಲಕ್ಕೆ ತಕ್ಕಂತೆ ಬದಲಾವಣೆ ಅಲ್ಲವೆ?



# ಶೇ 38 ರಷ್ಟು ಸಣ್ಣ ಕೈಗಾರಿಕೆಗಳು ಮುಚ್ಚಿವೆ

ದೇಶದಲ್ಲಿ ಸುಮಾರು 8.68 ಲಕ್ಷ ಸಣ್ಣ, ಕೈಗಾರಿಕೆಗಳು ಮುಚ್ಚಿ ಹೋಗಿವೆಯಂತೆ. ಇದು ಒಟ್ಟು ಸಂಖ್ಯೆ ಶೇ 38 ರಷ್ಟು ಮೂರನೇ ಸಣ್ಣ ಕೈಗಾರಿಕೆಗಳ ಶೀಘ್ರ ಗಣತಿಯಿಂದ ತಿಳಿದುಬಂದಿದೆ.

ಹೀಗೆ ಸಣ್ಣ ಕೈಗಾರಿಕೆಗಳು ಹೆಚ್ಚಿನ ಸಂಖ್ಯೆಯಲ್ಲಿ ಮುಚ್ಚಿರುವ ರಾಜ್ಯಗಳೆಂದರೆ ತಮಿಳುನಾಡು (ಶೇ.16.2 ರಷ್ಟು), ಉತ್ತರ ಪ್ರದೇಶ(ಶೇ 13.4 ರಷ್ಟು), ಕೇರಳ (ಶೇ.8.4 ರಷ್ಟು) ಮಧ್ಯಪ್ರದೇಶ (ಶೇ.7.4ರಷ್ಟು) ಮತ್ತು ಮಹಾರಾಷ್ಟ್ರ (ಶೇ. 7.1 ರಷ್ಟು) ಈ ಎಲ್ಲಾ ರಾಜ್ಯಗಳ ಒಟ್ಟು ಸಂಖ್ಯೆ ಶೇ 52.5 ರಷ್ಟು. ಮೊದಲಬಾರಿಗೆ ನೋಂದಣಿ ಆಗದೇ ಇರುವ ಸಣ್ಣ ಕೈಗಾರಿಕೆಗಳ ಸಂಖ್ಯೆಯನ್ನು ತೆಗೆದು ಕೊಳ್ಳಲಾಗಿದೆಯಂತೆ. ಇವುಗಳ ಸಂಖ್ಯೆ 3,69,606

ಇವು ಬರೀ ಅಂಕಿ ಸಂಖ್ಯೆಗಳಾಯಿತು. ಇಷ್ಟನ್ನು ಹೇಳಿದರೆ. ಅದರಿಂದ ಏನೂ ಹೇಳಿದಂತಾಗುವುದಿಲ್ಲ. ದೇಶದ ಸಣ್ಣ ಕೈಗಾರಿಕೆಗಳು 2 ಕೋಟಿ ಜನರಿಗೆ ನೇರ ಉದ್ಯೋಗ ದೊರಕಿಸುತ್ತವೆ. ದೇಶದ ರಫ್ತಿನ ಶೇ. 36 ರಷ್ಟು ಸಣ್ಣ ಕೈಗಾರಿಕೆಗಳಿಂದ ಬರುತ್ತದೆ. ಹೀಗೆ ಸಣ್ಣ ಕೈಗಾರಿಕೆಗಳು ದೇಶದ ಉತ್ಪಾದನೆಯಲ್ಲಿ ಬಹುಮುಖ್ಯ ಪಾತ್ರ ವಹಿಸುತ್ತವೆ.

ಈಗ ಮೂರನೇ ಒಂದರಷ್ಟು ಘಟಕಗಳು ಮುಚ್ಚಿವೆ ಎಂದರೆ ಅದರ ಅರ್ಥ ಅಷ್ಟು ಉತ್ಪಾದನೆ ಕಡಿಮೆಯಾಗಿದೆ ಎಂದು. ಅಲ್ಲದೆ ಆ ಪ್ರಮಾಣದಲ್ಲಿ ಉದ್ಯೋಗಗಳು ಕಳೆದುಹೋಗಿವೆ ಎಂದೂ ಅರ್ಥ. ಅಷ್ಟು ಜನ ನಿರುದ್ಯೋಗಿಗಳಾಗಿದ್ದಾರೆ. ಇದಲ್ಲದೆ ಇನ್ನೊಂದು ಬದಲಾವಣೆ ಎಂದರೆ ಸಣ್ಣ ಕೈಗಾರಿಕೆಗಳ ರಚನೆಯೇ ಬದಲಾಗಿದೆಯಂತೆ. ಈ ದೊಡ್ಡ ಮಾತಿನ ಅರ್ಥ? ಹಿಂದೆ ಪ್ರತಿ ಘಟಕ 6.29 ಜನರಿಗೆ ನೇರ ಉದ್ಯೋಗ ಕೊಡುತ್ತಿದ್ದರೆ ಈಗ ಪ್ರತಿ ಘಟಕ 4.6 ರಷ್ಟು ನೇರ ಉದ್ಯೋಗ ನೀಡುತ್ತಾರಂತೆ.

ಹಾಗೆಯೇ ಪ್ರತಿ ಘಟಕದಲ್ಲಿನ ಹೂಡಿಕೆ 1.6 ಲಕ್ಷ ರೂ.ಗಳಿದ್ದದ್ದು 7.11 ಲಕ್ಷ ರೂಪಾಯಿಗಳಿಗೆ ಏರಿದೆಯಂತೆ.

ಸಣ್ಣ ಕೈಗಾರಿಕಾ ವಲಯದಲ್ಲಿ ಉದ್ಯೋಗಗಳೇ ಕಡಿಮೆಯಾಗುತ್ತಿರುವುದರ ಜೊತೆಗೆ ಪ್ರತಿ ಘಟಕದಲ್ಲಿ ಹೂಡಿಕೆಯ ಪ್ರಮಾಣವೂ ಹೆಚ್ಚಾಗಿದೆ. ಅತ್ಯಂತ ಕಡಿಮೆ ಹೂಡಿಕೆಯಿಂದ ಅತಿ ಹೆಚ್ಚಿನ ಉದ್ಯೋಗಾವಕಾಶಗಳನ್ನು ಸೃಷ್ಟಿಸಿ ಹೆಚ್ಚು ಉತ್ಪಾದನೆಯನ್ನು ಸಣ್ಣ ಕೈಗಾರಿಕೆಗಳು ನೀಡುತ್ತಿದ್ದವು.


ಪ್ರತಿ ಘಟಕಕ್ಕೆ ಹೆಚ್ಚಿನ ಹೂಡಿಕೆ ಬೇಕಾಗಿರುವುದರಿಂದ ಹೆಚ್ಚು ಜನ ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸಲಾರರು ಹಾಗೆಯೇ ಅವುಗಳಿಂದಾಗುವ ಉದ್ಯೋಗ ಸೃಷ್ಟಿ, ಉತ್ಪಾದನೆಗಳ ಕಡಿಮೆ.

ಹೇಗಿದೆ ಉದಾರೀಕರಣದ ಈ ಪರಿಣಾಮಗಳು ?

## ಐಒಸಿಯ ಖಾಸಗೀಕರಣ

ಹೆಚ್‌ಪಿಸಿಎಲ್ ಮತ್ತು ಬಿಪಿಸಿಎಲ್‌ಗಳ ಮಾರಾಟಕ್ಕೆ ಹಿನ್ನೆಡೆಯುಂಟಾದ ನಂತರ ಕೇಂದ್ರದ ಮಂತ್ರಿ ಅರುಣ್ ಶೌರಿಯವರು ಇಂಡಿಯನ್ ಆಯಿಲ್ ಕಾರ್ಪೊರೇಷನ್ (ಐಒಸಿ)ಯ ಮಾರಾಟದ ಪ್ರಸ್ತಾಪವನ್ನು ಮುಂದಿಟ್ಟಿದ್ದಾರೆ. ಹೆಚ್‌ಪಿಸಿಎಲ್ ಮತ್ತು ಬಿಪಿಸಿಎಲ್ ಖಾಸಗೀಕರಣದ ಪ್ರಯತ್ನಗಳು ವಿಫಲವಾದ ನಂತರ ಹೊಸ ಹೊಸ ತಂತ್ರಗಳನ್ನು ರೂಪಿಸತೊಡಗಿರುವ ಇವರು ಈಗ ಐಒಸಿಯತ್ತ ಕಣ್ಣು ಹಾಕಿರುವುದು ಸ್ಪಷ್ಟ.

ಆದರೆ ಆಗಲೇ ಅವರೊಳಗೇ ಒಡಕು ಮಾಡುತ್ತಿರುವುದು ಕಾಣುತ್ತಿದೆ. ಎನ್‌ಡಿಎ ಸರ್ಕಾರದ ಇನ್ನೊಬ್ಬ ಮಂತ್ರಿ ರಾಮನಾಯಕ ಇನ್ನೂ ಐಒಸಿ ಮಾರಾಟದ ಬಗ್ಗೆ ನಿರ್ಧಾರವನ್ನು ತೆಗೆದುಕೊಳ್ಳಲಾಗಿಲ್ಲ ಎಂದು ಹೇಳಿದ್ದಾರೆ. ಖಾಸಗೀಕರಣ ಮಾಡ ಹೊರಟರೂ ಅದು ಸುಲಭದ ಕೆಲಸವಂತೂ ಆಗಿರುವುದಿಲ್ಲ.




## ಬೊಲಿವಿಯಾದಲ್ಲಿ ಜನ ಅಧ್ಯಕ್ಷನನ್ನು ಕೆಳಗಿಳಿಸಿದರು

# ಲ್ಯಾಟಿನ್ ಅಮೆರಿಕಾದಲ್ಲಿ ಜಾಗತೀಕರಣಕ್ಕೆ ಇನ್ನೊಂದು ಒದೆ!

ಶರತ್‌ಚಂದ್ರ

**ವೆನೆಜುವೆಲಾ, ಬ್ರೆಜಿಲ್, ಇಕ್ವಾಡೋರ್‌ನಲ್ಲಿ ಜಾಗತೀಕರಣ ವಿರೋಧಿ ಶಕ್ತಿಗಳು ಸಾಧಿಸಿದ ಪ್ರಚಂಡ ವಿಜಯಗಳ ನಂತರ ಬೊಲಿವಿಯಾದಲ್ಲಿ ಸಾಮ್ರಾಜ್ಯಶಾಹಿ ಜಾಗತೀಕರಣಕ್ಕೆ ಇನ್ನೊಂದು ಒದೆ ಬಿದ್ದಿದೆ. ತನ್ನ ಜಾಗತೀಕರಣ ಪರ ನೀತಿಗಳಿಂದ ಕುಖ್ಯಾತವಾಗಿದ್ದ ಅಧ್ಯಕ್ಷನನ್ನು, ಕಾರ್ಮಿಕರ- ರೈತರ - ಜನತೆಯ ಅಭೂತಪೂರ್ವ ಐಕ್ಯ ಹೋರಾಟ ಕೆಳಗಿಳಿಸಿದೆ. ಅಮೆರಿಕ ಪುನಃ ಮಿಲಿಟರಿ ಮಧ್ಯಪ್ರವೇಶದ ಹುನ್ನಾರ ನಡೆಸಲು ಪ್ರಯತ್ನಿಸಿದರೂ, ತನ್ನ ಇನ್ನೊಬ್ಬ ಮಿತ್ರ ಹೆಲಿಕಾಪ್ಟರಿನಲ್ಲಿ ಓಡಿ ಹೋಗುವುದನ್ನು ನೋಡಿ ಕೈ ಕೈ ಹಿಸುಕುತ್ತಾ ಕೂರಬೇಕಾಗಿದೆ. ಲ್ಯಾಟಿನ್ ಅಮೆರಿಕಾದ ಈ ಮಹತ್ವದ ರೋಮಾಂಚಕಾರಿ ರಾಜಕೀಯ ಬೆಳವಣಿಗೆ ಬಗ್ಗೆ ಓದಿ.**

ಬೊಲಿವಿಯಾ ಒಂದು ತಿಂಗಳಿಗಿಂತಲೂ ಹೆಚ್ಚಿಗೆ ಜನತೆಯ ಚಳುವಳಿಯಿಂದ ಸ್ತಬ್ಧವಾಗಿತ್ತು. ಸೆಪ್ಟೆಂಬರ್ 29 ರಿಂದ ಬೊಲಿವಿಯನ್ ಕಾರ್ಮಿಕರ ಕೇಂದ್ರೀಯ ಸಂಘಟನೆ ಸಿಓಬಿ ಸಾರ್ವತ್ರಿಕ ಮುಷ್ಕರಕ್ಕೆ ಕರೆ ಕೊಟ್ಟಿದ್ದು, ಸಫಲವಾಗಿ ಮುಂದುವರೆದಿತ್ತು. ಪ್ರತಿದಿನ ಅಧ್ಯಕ್ಷೀಯ ಅರಮನೆ ಮುಂದೆ ಸೌದಿಯ ಜನರ ಪ್ರದರ್ಶನ ನಡೆಯುತ್ತಿತ್ತು, ಕೊನೆಗೂ ಹುನಾನಿ( ದೇಶದ ಗಣಿ ಕೇಂದ್ರ)ಯಿಂದ ಸಾವಿರಾರು ಡೈನಾಮೆಟ್-ಕೋಲಿನ ಶಸ್ತ್ರ ಸಜ್ಜಿತ ಗಣಿಕಾರ್ಮಿಕರು ರಾಜಧಾನಿ ಲಾ-ಪಾಜ್ ನತ್ತ ನಡೆದದ್ದು ನಿರ್ಣಾಯಕವಾಯಿತು. ಸಾವಿರಾರು ಸಶಸ್ತ್ರ ಗಣಿಕಾರ್ಮಿಕರನ್ನು ಅಲಲ್ಲಿ ದಾರಿಯಲ್ಲಿ ತಡೆದರು. ಸೈನ್ಯ ನಡೆಸಿದ ಪ್ರಯತ್ನ ವಿಫಲವಾಯಿತು. ಹಲವು ಕಾರ್ಮಿಕರು ಹುತಾತ್ಮರಾದರು. ಅವರ ದಿಟ್ಟ ನಡೆ ನಿಲ್ಲಲಿಲ್ಲ.

**ಡೈನಾಮೆಟ್-ಕಡ್ಡಿ ಸಜ್ಜಿತ ಗಣಿಕಾರ್ಮಿಕರು ಬಂದರು!**

ಹುನಾನಿ ಗಣಿ ಕಾರ್ಮಿಕರು ಅಧ್ಯಕ್ಷೀಯ ಅರಮನೆಯ ಬಳಿ ಈಗಾಗಲೇ ನೆರೆದಿದ್ದ ಪ್ರದರ್ಶನಕಾರರನ್ನು ಸೇರುತ್ತಿದ್ದಂತೆ, ಅರಮನೆಯೊಳಗೆ ಈಗಾಗಲೇ ಮಂತ್ರಾಲೋಚನೆ ನಡೆಸುತ್ತಿದ್ದ ಅಮೆರಿಕನ್ ರಾಯಭಾರಿ ಅಧ್ಯಕ್ಷನಿಗೆ ರಾಜಿನಾಮೆ ಕೊಡುವಂತೆ ಸೂಚಿಸಿದರಂತೆ. ಅರಮನೆಯೊಳಗೆ ಉಪಾಧ್ಯಕ್ಷನನ್ನು ತಾತ್ಕಾಲಿಕ ಅಧ್ಯಕ್ಷರನ್ನಾಗಿ ನೇಮಿಸುವ ನಿರ್ಣಯ ತೆಗೆದು ಕೊಳ್ಳಲಾಯಿತು. ಈ ಬಗ್ಗೆ ವದಂತಿ(ಇನ್ನೂ ಅಧಿಕೃತ ಸುದ್ದಿ ಅಥವಾ ಹೇಳಿಕೆ ಅಲ್ಲ) ಹಬ್ಬುತ್ತಿದ್ದಂತೆ ಅಧ್ಯಕ್ಷೀಯ ಅರಮನೆಯ ಕಾವಲಿಗಿದ್ದ ಸಶಸ್ತ್ರ ಪೋಲಿಸರು ಮತ್ತು ಪ್ರದರ್ಶನದ ಮುಂಚೂಣಿಯಲ್ಲಿದ್ದ ಗಣಿ ಕಾರ್ಮಿಕರು ಆನಂದದಲ್ಲಿ ಕೈಕುಲಿಕಿದ ದೃಶ್ಯ ಕಂಡು ಬಂತು.

ಅಧ್ಯಕ್ಷೀಯ ಅರಮನೆಯ ಕಾವಲಿನ ಮೊದಲ ಸಾಲುಗಳಲ್ಲಿದ್ದ ಸಶಸ್ತ್ರ ಪೋಲೀಸರು ತಮ್ಮ 'ಕಾವಲು' ಸಡಿಲಿಸುತ್ತಿದ್ದಂತೆ ಅವರ ಹಿಂದಿದ್ದ ಸಶಸ್ತ್ರ ಟ್ಯಾಂಕ್ ತಡೆಗಳು ಮಾತ್ರ ಬಿಗುವಿನಿಂದ ಇದ್ದವು. ಅಷ್ಟರೊಳಗೆ ಅಧ್ಯಕ್ಷರ ರಾಜೀನಾಮೆಯ ಅಧಿಕೃತ ಘೋಷಣೆಯಾಯಿತು. ಇಲ್ಲದಿದ್ದರೆ ಬಹುಶಃ ಅಧ್ಯಕ್ಷೀಯ ಮನೆಯನ್ನು ಸಶಸ್ತ್ರ ಪ್ರದರ್ಶನಕಾರರು ಆಕ್ರಮಿಸಿಕೊಳ್ಳುತ್ತಿದ್ದರು. ಸ್ತಬ್ಧವಾಗಿದ್ದ ಇಡೀ ದೇಶ ವಿಜಯೋತ್ಸವದಲ್ಲಿ ಮುಳುಗಿತ್ತು. ಅಧ್ಯಕ್ಷೀಯ ಅರಮನೆ ಮುಂದೆ ಪಟಾಕಿ ಸಿಡಿಸಲಾಯಿತು. ಗಣಿ ಕಾರ್ಮಿಕರು ಸ್ವಯಂ-ರಕ್ಷಣೆಗೆ ತಂದಿದ್ದ ಡೈನಮೈಟ್ ಕಡ್ಡಿಗಳಿಂದ ಪಟಾಕಿ ಸಿಡಿಸಲಾಯಿತು.

'ಅಧ್ಯಕ್ಷನ ರಾಜೀನಾಮೆ' ಏಕ-ಘೋಷಣೆ ಇದಾಗಿರಲಿಲ್ಲ. ಹಲವು ಹಕ್ಕೊತ್ತಾಯಗಳು, ಘೋಷಣೆಗಳ ಸಂಗಮವಾಗಿ ಈ ಒತ್ತಾಯ ಬಂದಿತ್ತು. ಕಳೆದ ವರ್ಷವಷ್ಟೇ(ಆಗಸ್ಟ್ 2002) ಅಧ್ಯಕ್ಷ ಸಾಂಚೆಝ್ ಡಿ ಲೊಝಾದ ಚುನಾವಣೆ ಸಮಯದಲ್ಲೇ ಜಾಗತೀಕರಣ ಪರ, ವಿರೋಧ ಶಕ್ತಿಗಳ ನಡುವೆ ತೀವ್ರ ಹಣಾಹಣಿಯಾಗಿತ್ತು. ಅತ್ಯಂತ ಕಡಿಮೆ(ಶೇಕಡಾ 22) ಮತಗಳಿಸಿ ಅಧ್ಯಕ್ಷನಾಗಿ ಆಯ್ಕೆಯಾದ ಲೊಝಾದಾ ಜಾಗತೀಕರಣ ಪರ ನೀತಿಗಳನ್ನು ಅತ್ಯಂತ ತೀವ್ರವಾಗಿ ಜಾರಿಮಾಡಲು ಆರಂಭಿಸಿದ್ದ. ಸ್ವತಃ ದೊಡ್ಡ ಗಣಿಯೊಂದರ ಮಾಲಿಕನಾಗಿದ್ದು, ಅಮೆರಿಕದಲ್ಲೇ ಓದಿ ಬೆಳೆದು ದೇಶದ ಜನರ ಕಾಳಜಿಗಳ ಯಾವುದೇ ಗಂಧಗಾಳಿಯಿಲ್ಲದ ಅಧ್ಯಕ್ಷನ ನೀತಿಗಳು ಜನರನ್ನು ರೊಚ್ಚಿಗೆಬ್ಬಿಸಿದ್ದವು.

ದೇಶ ಎರಡು ದಶಕಗಳ ಕಾಲ ಅನುಸರಿಸಿ ದಿವಾಳಿಯಾಗಿದ್ದ ಐಎಂಎಫ್ ನೀತಿಗಳನ್ನು, ಅಧ್ಯಕ್ಷ ಇನ್ನಷ್ಟು ಜೋರಾಗಿ ಅನುಸರಿಸಲಾರಂಭಿಸಿದ್ದ. ಬೊಲಿವಿಯಾ ಈಗಾಗಲೇ ರಾಜಕೀಯ-ಸಾಮಾಜಿಕ ಬಿಕ್ಕಟ್ಟಿನಿಂದ ತತ್ತರಿಸುತ್ತಿತ್ತು. ದೇಶದ ಶೇಕಡಾ 70 ಬಡತನದ ರೇಖೆಯ ಕೆಳಗೆ ಇದ್ದರು. ರೆಡ್-ಇಂಡಿಯನ್ ಆದಿವಾಸಿಗಳು ಬಹುಸಂಖ್ಯಾತರಾಗಿರುವ ಈ ದೇಶದಲ್ಲಿ ಅವರಿಗೆ ರಾಜಕೀಯವಾಗಿ ಯಾವುದೇ ಪಾತ್ರವಿರಲಿಲ್ಲ. ದೇಶದ ಭೂಮಿ ಕೆಲವೇ ಕುಟುಂಬಗಳ ಕಂಪನಿಗಳ ಕೈಯಲ್ಲಿದ್ದು, ಭೂಸುಧಾರಣೆಗಳಿಗೆ ತೀವ್ರ ಕೂಗು ಎದ್ದಿತ್ತು. ಕಾರ್ಮಿಕರ ಹಕ್ಕುಗಳ ಮೇಲೆ ಪ್ರಹಾರವಾಗಿ, ಐಎಂಎಫ್ ನ ನೀತಿಗಳ ಭಾಗವಾಗಿ ಜೋರಾಗಿ ನಡೆದಿತ್ತು. ಇವೆಲ್ಲದರ ವಿರುದ್ಧ ಪ್ರತಿರೋಧಗಳು ಆರಂಭವಾಗಿದ್ದವು. ದೇಶದ ಸಮೃದ್ಧ ಅನಿಲ ಸಂಪನ್ಮೂಲಗಳನ್ನು ವಿದೇಶಿ ಕಂಪನಿಗಳಿಗೆ ಮಾರಾಟ ಮಾಡುವ ಅಧ್ಯಕ್ಷರ ನಿರ್ಧಾರ ಈ ಎಲ್ಲಾ ಪ್ರತಿರೋಧದ ಶಕ್ತಿಗಳನ್ನು ಒಂದುಕಡೆ ತಂದಿತ್ತು. ಆಳುವ ವರ್ಗಗಳನ್ನು(ಕೆಲವು ದೊಡ್ಡ ಭೂಮಾಲಕ ಬೂರ್ಜ್ವಾಗಳನ್ನು) ಬಿಟ್ಟರೆ ಇಡಿ ದೇಶ ಈ ನಿರ್ಧಾರದ ವಿರುದ್ಧ ಸೆಡ್ಡು ಹೊಡೆದು ನಿಂತಿತು. ಚಳುವಳಿ ಮೇಲೆ ಅಧ್ಯಕ್ಷ ಮತ್ತು ಆತನ ಅಮೆರಿಕನ್ ಸಾವುಕಾರರು ಹರಿಬಿಟ್ಟ ಮಿಲಿಟರಿ ದಬ್ಬಾಳಿಕೆ ಹೆಚ್ಚಿದಂತೆ, ಚಳುವಳಿ ವ್ಯಾಪಕವಾಗಿ ತೀವ್ರವಾಗಿ ಬೆಳೆಯಿತು. ಇಡೀ ಚಳುವಳಿ ಅಧ್ಯಕ್ಷನನ್ನು ಕೆಳಗಿಳಿಸುವ 'ಏಕ-ಘೋಷಣೆಯ ಪ್ರಬಲ ಚಳುವಳಿಯಾಯಿತು.

ಕಳೆದ ಒಂದು ತಿಂಗಳಲ್ಲಿ ನೂರಕ್ಕೂ ಹೆಚ್ಚು ಕಾರ್ಮಿಕರು, ರೈತರು, ಆದಿವಾಸಿಗಳು, ವಿದ್ಯಾರ್ಥಿಗಳು ಹುತಾತ್ಮರಾದರು. ಆದರೆ, ಚಳುವಳಿ ನಿಲ್ಲಲಿಲ್ಲ.

ಅಧ್ಯಕ್ಷನ ದಮನ ಚಕ್ರ ನಿಲ್ಲಲಿಲ್ಲ. ಅಕ್ಟೋಬರ್ 2ನೇ ವಾರದಲ್ಲಿ ಅಮೆರಿಕ ಮಿಲಿಟರಿಯಡಿ ಮಧ್ಯಪ್ರವೇಶ ಮಾಡಲು ಯೋಚಿಸುತ್ತಿದೆ ಎಂಬ ವದಂತಿ ಹರಡುತ್ತಿದ್ದಂತೆ ಜನ ಚಳುವಳಿ ಸಶಸ್ತ್ರ-ಪ್ರತಿರೋಧಕ್ಕೆ ತಯಾರಿ ನಡೆಸಿತು. ಜನರ ಪ್ರತಿರೋಧದ ತೀವ್ರತೆ ಕಂಡು ಆಳುವ ವರ್ಗದ ಕೂಟದಲ್ಲಿ ಬಿರುಕು ಕಂಡಿತು. ಆಳುವ ಬಲಪಂಥೀಯ ಕೂಟದಲ್ಲಿ ಒಂದು ಪಕ್ಷ ಹೊರಬಂದು, ಬಹುಮತ ಕಳೆದುಕೊಂಡಿತು. ಅಧ್ಯಕ್ಷೀಯ ಮಂತ್ರಿಮಂಡಳದ ಹಲವು ಮಂತ್ರಿಗಳು ರಾಜಿನಾಮೆ ನೀಡಿದರು. ಉಪಾಧ್ಯಕ್ಷ ಸೇರಿದಂತೆ ಹಲವು ಮಂತ್ರಿಗಳು ಅಧ್ಯಕ್ಷರ ನೀತಿಗಳನ್ನು ತಾವು ಒಪ್ಪುವುದಿಲ್ಲ ಎಂದು ಬಹಿರಂಗವಾಗಿ ಹೇಳಿಕೆ ನೀಡಬೇಕಾಯಿತು.

ರಾಜಧಾನಿ ಲಾ-ಪಾಜ್ ಪಕ್ಕದ ಎಲ್-ಆಲ್ಟೋ ಕ್ರಾಂತಿಕಾರಿ ಕೇಂದ್ರವಾಯಿತು. ರೈತ-ಕಾರ್ಮಿಕ-ಆದಿವಾಸಿ ಇಂಡಿಯನ್ ಸಂಘಟನೆಗಳ ಜಂಟಿ ಸಮಿತಿಗಳು ಸಶಸ್ತ್ರ ಪ್ರತಿರೋಧದ ಯೋಜನೆಗಳನ್ನು ಹಾಕಲಾರಂಭಿಸಿದವು. ಅಧ್ಯಕ್ಷನನ್ನು ಕೆಳಗಿಳಿಸಿದ ಮೇಲೆ, ರೈತ-ಕಾರ್ಮಿಕ-ಆದಿವಾಸಿ ಇಂಡಿಯನ್ನರ ಹಕ್ಕುಗಳನ್ನು ಮನ್ನಿಸುವ ಹೊಸ ಸಂವಿಧಾನ ರಚಿಸಬೇಕು ಎಂದು ಜಂಟಿ ಸಮಿತಿ ನಿರ್ಧರಿಸಿತ್ತು. ಈ ನಿರ್ಧಾರಗಳಿಂದ ಬೊಲಿವಿಯಾ ಜನತಾ ಪ್ರಜಾಪ್ರಭುತ್ವ ಕ್ರಾಂತಿಯತ್ತ ನಡೆದಿತ್ತು. ಸಾರ್ವತ್ರಿಕ ಮುಷ್ಕರ ದೇಶವನ್ನು ಸ್ತಬ್ಧಗೊಳಿಸಿತ್ತು. ಅಧ್ಯಕ್ಷರ ರಾಜಿನಾಮೆ, ಉಪಾಧ್ಯಕ್ಷರ ಪದಗ್ರಹಣದ ಮೂಲಕ ಆಳುವವರ್ಗಗಳು ಈ ಕ್ರಾಂತಿಯನ್ನು ತಾತ್ಕಾಲಿಕವಾಗಿ ತಡೆದಿವೆ. ಜನರ ಪ್ರತಿರೋಧದ ನಾಯಕತ್ವ ವಹಿಸಿದ ಬೊಲಿವಿಯಾದ ಕೇಂದ್ರೀ ಟ್ರೇಡ್ ಯೂನಿಯನ್, ಆದಿವಾಸಿ ಇಂಡಿಯನ್ ಫೆಡರೇಷನ್ - ಈ 'ತಾತ್ಕಾಲಿಕ ರಾಜಿ' ಯಿಂದ ಅತೃಪ್ತರಾಗಿದ್ದಾರೆ. ಚಳುವಳಿ ವಿರೋಧ ಪಕ್ಷಗಳ ಕೂಟದ ಸಹಕಾರ ಪಡೆದ್ದದರಿಂದ, ಅವರ ಅಭಿಪ್ರಾಯಕ್ಕೆ ಮನ್ನಣೆ ಕೊಟ್ಟು ಇದಕ್ಕೆ ಒಪ್ಪಿವೆ. ಕಳೆದ ವರ್ಷದ ಚುನಾವಣೆಯಲ್ಲಿ ಸೋತ ಎಡ-ಮಧ್ಯಪಂಥೀಯ ಕೂಟದ ನಾಯಕ ಮತ್ತು ಇತರ ರಾಜಕೀಯ ನಾಯಕರು ಈಗಿನ ಸಂವಿಧಾನದೊಳಗೆ ಬಿಕ್ಕಟ್ಟು ಪರಿಹಾರ ಸಾಧ್ಯವಿದೆ ಎಂದು ನಂಬಿದ್ದಾರೆ. ಆದರೆ ಜನತಾ ಸಂಘಟನೆಗಳ ನಾಯಕರು ತಮ್ಮ ಬೇಡಿಕೆಗಳು - ದೇಶದ ಅನಿಲ, ತೈಲ ಮತ್ತಿತರ ಸಂಪನ್ಮೂಲಗಳನ್ನು ಮಾರಾಟ ಬಿಟ್ಟುಕೊಟ್ಟು ಅದನ್ನು ರಾಷ್ಟ್ರೀಕರಿಸುವುದು, ಕಾರ್ಮಿಕ-ವಿರೋಧಿ ಕಾನೂನುಗಳನ್ನು ರದ್ದು ಮಾಡುವುದು, ಸಮಗ್ರ ಭೂಸುಧಾರಣೆ, ಆದಿವಾಸಿ - ರೈತ - ಕಾರ್ಮಿಕರಿಗೆ ಸಮಗ್ರ ಹಕ್ಕು ನೀಡುವ ಸಂವೈಧಾನಿಕ ಬದಲಾವಣೆಗಳು, ಕೊಕೊ ಬೆಳೆಯುವ ರೈತರಿಗೆ ಕಿರುಕುಳ ನಿಲ್ಲಿಸುವುದು - ಪೂರ್ಣ ಪಾಲನೆಯಾಗದಿದ್ದರೆ ಚಳುವಳಿ ಪುನಃ ಆರಂಭಿಸುವುದಾಗಿ ಬೆದರಿಕೆ ಹಾಕಿದ್ದಾರೆ.

ಆಳುವ ವರ್ಗಗಳ ಸ್ವಾಭಾವಿಕವಾಗಿಯೇ, ಬೂರ್ಜ್ವಾ ವಿರೋಧ ಪಕ್ಷಗಳ ಬೆಂಬಲದೊಂದಿಗೆ ಈ ಎಲ್ಲಾ ಬೇಡಿಕೆಗಳ ಜಾರಿಯನ್ನು ವಿಳಂಬಗೊಳಿಸಿ, ಕರಗಿಸಲು ಪ್ರಯತ್ನಿಸುತ್ತಿವೆ. ಆದರೆ ಇದನ್ನು ಜನತಾ ಚಳುವಳಿ ಆಗಗೊಡಲಿಲ್ಲ ಎಂಬುದು ಆಶಾದಾಯಕ.

---

# …ಐಟಿಯು ರಾಜ್ಯಸಮ್ಮೇಳನ

ಪುಟ 9 ರಿಂದ

…ದರಿಂದಲೇ, ಒಂದೊಂದಾಗಿ ಕಾರ್ಮಿಕರ …ಗಳನ್ನು, ಸೌಲಭ್ಯಗಳನ್ನು ಕಸಿಯಲಾಗುತ್ತಿದೆ. …ರೆ ಕಾರ್ಮಿಕ ವರ್ಗ ಪ್ರಬಲ ವಿರೋಧವನ್ನೇ …ತ್ತಿದೆ.

…ಸಮ್ಮೇಳನದ ಚರ್ಚೆಗಳು ದಾರಿದೀಪಗಳಾಗಲಿ … ವರದರಾಜನ್ ಸಮ್ಮೇಳನವನ್ನು …ಟಿಸಿದರು.

…ರಾಜ್ಯ ಪ್ರಧಾನ ಕಾರ್ಯದರ್ಶಿ ವಿ.ಜೆ.ಕೆ. …ರ್‌ರವರು ಮಾತನಾಡುತ್ತಾ, ಪರ್ಯಾಯವೇ … ಎಂದು ಹೇಳಲಾಗುತ್ತಿದ್ದ ಸಂದರ್ಭದಲ್ಲೇ …ರ್ ಅನುಭವ ಪರ್ಯಾಯ ಇದೆ ಎಂದು ಸಾಬೀತು ಪಡಿಸಿದೆ ಎಂದರು. ಜಗತ್ತು ಇಂದು ಹೊಸ ದಿಸೆಯಲ್ಲಿದೆ. ಸಮ್ಮೇಳನದ ಬಗ್ಗೆ ಮಾತನಾಡುತ್ತಾ, 2ನೇ ಸಮ್ಮೇಳನ ನಡೆದ ಹರಿಹರದಲ್ಲಾಗಲೀ, 5ನೇ ಸಮ್ಮೇಳನ ನಡೆದ ಹುಬ್ಬಳ್ಳಿಯಲ್ಲಾಗಲಿ ಇಂದು ಕಾರ್ಮಿಕರು ಎಲ್ಲಿದ್ದಾರೆ? ನಮ್ಮ ರಾಜ್ಯದ ಉತ್ಪಾದನೆಯಲ್ಲಿ ಶೇ. 40 ಪಾಲು ನೀಡುತ್ತಿದ್ದ ಜವಳಿ ಕಾರ್ಮಿಕರು ಎಲ್ಲಿದ್ದಾರೆ? ಚಿನ್ನವನ್ನು ಉತ್ಪಾದಿಸುತ್ತಿದ್ದ ಕೆ.ಜಿ.ಎಫ್. ಕಾರ್ಮಿಕರು ಎಲ್ಲಿದ್ದಾರೆ? ಕಾರ್ಖಾನೆಗಳೇ ಮುಚ್ಚಿಹೋಗುವಾಗ ಕಾರ್ಮಿಕರು ಎಲ್ಲಿರುತ್ತಾರೆ? ಉದಾರೀಕರಣದ ನೀತಿಗಳೆಂದರೆ ಇದೇ ಎಂದು ವಿವರಿಸಿದರು.

ಕರ್ನಾಟಕ ಪ್ರಾಂತ ಕೃಷಿ ಕಾರ್ಮಿಕರ ಸಂಘದ ಅಧ್ಯಕ್ಷರಾದ ನಿತ್ಯಾನಂದ ಸ್ವಾಮಿಯವರು ಶುಭಾಶಯ ಕೋರುತ್ತಾ, ಕೃಷಿ ಕೂಲಿಕಾರರು ಮತ್ತು ಕಾರ್ಮಿಕರು ಒಂದೇ ವರ್ಗಕ್ಕೆ ಸೇರಿದವರು, ಕೃಷಿ ಕಾರ್ಮಿಕರ ಶೋಷಣೆ ತೀವ್ರಗೊಂಡಿದೆ, ಬಿಕ್ಕಟ್ಟು ಉಲ್ಬಣವಾಗಿದೆ. ಸಮರಶೀಲ ಐಕ್ಯ ಹೋರಾಟವೊಂದೇ ದಾರಿ ಆ ದಿಟ್ಟಿನಲ್ಲಿ ಶ್ರಮಿಸೋಣ ಎಂದು ಕರೆ ಇತ್ತರು.

ಎ.ಐ.ಟಿ.ಯು.ಸಿ. ಮುಖಂಡರಾದ ಶೇಷಾದ್ರಿ ಹಾಗೂ ಕೇಂದ್ರ ಸರ್ಕಾರಿ ನೌಕರರ ಸಮನ್ವಯ ಸಮಿತಿಯ ಸಂಚಾಲಕರಾದ ರಾಧಾಕೃಷ್ಣರವರು ಸಮ್ಮೇಳನಕ್ಕೆ ಶುಭಾಶಯ ಕೋರಿದರು.

ಬಿ. ಮಾಧವರವರು ಅಧ್ಯಕ್ಷೀಯ ಭಾಷಣ ಮಾಡುತ್ತಾ, ಸಂಘಟನೆಯನ್ನು ಮತ್ತಷ್ಟು ಬಲಪಡಿಸುವ, ವಿಸ್ತೃತಗೊಳಿಸುವ ಪ್ರಯತ್ನಗಳನ್ನು ಅವಿರತವಾಗಿ ಮಾಡುತ್ತಾ ಹೋರಾಟಗಳನ್ನು ಬೆಳೆಸಬೇಕೆಂದು ಕರೆ ಇತ್ತರು.

ಮೈಸೂರು ಜಿಲ್ಲಾ ಸಿಐಟಿಯುನ ಕಾರ್ಯದರ್ಶಿಯವರಾದ ಜಗದೀಶರವರು ವಂದನಾರ್ಪಣೆ ಮಾಡುವುದರೊಂದಿಗೆ ಉದ್ಘಾಟನಾ ಕಾರ್ಯಕ್ರಮ ಮುಕ್ತಾಯಗೊಂಡಿತು.

ಒಟ್ಟಾರೆಯಾಗಿ ಸಮ್ಮೇಳನಕ್ಕೆ ಆಗಮಿಸಿದ್ದ ಸಂಗಾತಿಗಳ ದೃಢ ಸಂಕಲ್ಪ, ಹೋರಾಟದ ಮಾರ್ಗದಲ್ಲಿರುವ ಅವರ ಅಚಲ ನಂಬಿಕೆ, ಸಂಘಟನೆಯನ್ನು ವಿಸ್ತಾರಗೊಳಿಸುವ ಕಾರ್ಯದಲ್ಲಿ ಯಾವುದೇ ಅಡೆತಡೆಗಳನ್ನೂ ಎದುರಿಸಿ, ನಿವಾರಿಸಿ ಮುನ್ನಡೆಯುವ ಅವರ ವಿಶ್ವಾಸಗಳನ್ನು ಅತ್ಯಂತ ಪ್ರಖರವಾಗಿ ಬಿಂಬಿಸುವ ರೀತಿಯಲ್ಲಿ ಉದ್ಘಾಟನಾ ಸಮಾರಂಭದ ಕಲಾಪಗಳು ಮೂಡಿ ಬಂದವು. ○



ಚಿಂತನ

**ಮದರ್ ತೆರೆಸಾರವನ್ನು ಸಂತ ಪದವಿಗೇರಿಸುವ ಪ್ರಕ್ರಿಯೆ ಆರಂಭಗೊಂಡಿದೆ. ಇದರ ಸುತ್ತ ಹಲವು ವಾದ-ವಿವಾದಗಳೂ ಹುಟ್ಟಿಕೊಂಡಿವೆ. ಈ ಒಟ್ಟು ವಿದ್ಯಮಾನಗಳ ಕುರಿತು ಅತ್ಯಂತ ಸೂಕ್ಷ್ಮವಾಗಿ ಸ್ವತಃ ಧಾರ್ಮಿಕ ಗುರುಗಳಾಗಿದ್ದ ಲೇಖಕರು ಇಲ್ಲಿ ವಿಶ್ಲೇಷಿಸಿದ್ದಾರೆ..**

# ಮದರ್ ತೆರೇಸಾ

## ಸಂತ ಪದವಿಗೇರಿಸಿದ ಪವಾಡ!

ಅನಾಥರ, ಧಿಕ್ಕಿಲ್ಲದವರ ಸೇವೆಗೆ ಮತ್ತೊಂದು ಹೆಸರಾಗಿದ್ದ ಮದರ್ ತೆರೇಸಾ 1997ರಲ್ಲಿ ನಿಧನರಾಗಿದ್ದರು. ರೋಮನ್ ಕಥೋಲಿಕ್ ಪಂಥದ ಎರಡನೇ ಪೋಪ್ ಜಾನ್ ಪಾಲ್ ಅವರು ಮದರ್ ತೆರೇಸಾರನ್ನು 'ದೇವರ ಸೇವಕಿ' ಎಂದು ಘೋಷಿಸುವ ಮೂಲಕ ಅವರನ್ನು ಸಂತ ಪದವಿಗೇರಿಸುವ ಪ್ರಕ್ರಿಯೆಯ ಸಾಂಪ್ರದಾಯಿಕ ಮೊದಲ ಘಟ್ಟವನ್ನು ಈಗ ಪೂರ್ಣಗೊಳಿಸಿದ್ದಾರೆ. ವಿಶ್ವ ಸಮುದಾಯಗಳ ಗಮನ ಸೆಳೆದ ಘಟನೆ ಇದಾಗಿರುವಾಗಲೇ ಮದರ್ ತೆರೇಸಾರನ್ನು ಸಂತ ಪದವಿಗೇರಿಸಲು ಕಾರಣವಾದ ಪವಾಡದ ವಿವಾದವೊಂದು ವ್ಯಾಪಕ ಚರ್ಚೆಗೆ ಗ್ರಾಸವಾಗಿದೆ.

ಇಂದಿನ ಮೆಸಿಡೋನಿಯಾದ ರಾಜಧಾನಿ ಸ್ಕೋಪ್ಜೆ ಎಂಬಲ್ಲಿ 1910ರಲ್ಲಿ ಮದರ್ ತೆರೆಸಾ ಅವರ ಜನನವಾಯಿತು. ಆಗ ಅವರನ್ನು ಆಗ್ನೆಸ್ ಬೋಜಾಕ್ಸಿಯು ಎಂದು ಕರೆಯುತ್ತಿದ್ದರು. 16ರ ಹರೆಯದಲ್ಲಿ ಅವರು ಕ್ರೈಸ್ತ ಸನ್ಯಾಸತ್ವವನ್ನು ಸ್ವೀಕರಿಸಿ 'ಸಿಸ್ಟರ್ ತೆರೇಸಾ' ಎಂಬ ಹೆಸರನ್ನು ಇಟ್ಟುಕೊಂಡರು. ಕ್ರೈಸ್ತ ಧರ್ಮ ಪ್ರಚಾರಾರ್ಥವಾಗಿ ಅವರು 1929ರಲ್ಲಿ ಭಾರತಕ್ಕೆ ಆಗಮಿಸಿ ಕೋಲ್ಕತ್ತಾದ ಒಂದು ಕಾನ್ವೆಂಟ್ ಶಾಲೆಯಲ್ಲಿ ಶಿಕ್ಷಕಿಯಾಗಿ ಕೆಲಸ ಆರಂಭಿಸಿದರು. 1950ರಲ್ಲಿ ಅವರು 'ಮಿಷನರಿಸ್ ಆಫ್ ಚಾರಿಟಿ' ಎಂಬ ಕ್ರೈಸ್ತ ಸನ್ಯಾಸಿನಿಯರ ಹೊಸ ಪಂಥವೊಂದನ್ನು ಹುಟ್ಟುಹಾಕಿ ರೋಗಿಗಳ, ಅನಾಥರ, ಕೊಳಗೇರಿ ನಿವಾಸಿಗಳ ಸೇವೆಗೆ ಮುಂದಾದರು. ಬೀದಿಗಳಲ್ಲಿ ಸಾಯುವ ಭಿಕ್ಷುಕರನ್ನು, ಅನಾಥರನ್ನು ಹೊತ್ತು ತಂದು ಆರೈಕೆ ಮಾಡಲು ಅವರು ಕೇಂದ್ರವೊಂದನ್ನು ಆರಂಭಿಸಿದರು. ಕುಷ್ಠರೋಗಿಗಳಿಗಾಗಿ ಸಂಚಾರಿ ಕ್ಲಿನಿಕ್ ಆರಂಭಿಸಿದರು. ದೇಶ ವಿದೇಶಗಳ ಸಾವಿರಾರು ಯುವತಿಯರು ಇವರ ಸೇವಾನಿಷ್ಠೆಯಿಂದ ಆಕರ್ಷಿತರಾಗಿ ಇವರ ಅನುಯಾಯಿಗಳಾಗತೊಡಗಿದರು. ಅವರೆಲ್ಲರ ಪಾಲಿಗೆ ಇವರು 'ಮದರ್ ತೆರೇಸಾ' ಆದರು. ನೀಲಿ ದಡೆ ಇರುವ ಅಚ್ಚಬಿಳಿ ಸೀರೆ ಇವರ ಸಮವಸ್ತ್ರ.

1951ರಲ್ಲಿ ಮದರ್ ತೆರೇಸಾರಿಗೆ ಭಾರತೀಯ ಪೌರತ್ವ ದೊರೆಯಿತು. 1979ರಲ್ಲಿ ಅವರಿಗೆ ನೊಬೆಲ್ ಶಾಂತಿ ಪುರಸ್ಕಾರ ನೀಡಲಾಯಿತು. 90ರ ದಶಕದಲ್ಲಿ ಅವರ ಆರೋಗ್ಯ ಕ್ಷೀಣಿಸಲಾರಂಭಿಸಿತು. 1997 ಸೆಪ್ಟೆಂಬರ್ 5 ರಂದು ಅವರು 87ರ ಪ್ರಾಯದಲ್ಲಿ ನಿಧನರಾದರು.

### ಸಂತ ಪಟ್ಟದ ಸಂಪ್ರದಾಯ

ಬಹುತೇಕ ಧರ್ಮಿಯರು ನಂಬುವಂತೆ ಸತ್ತ ನಂತರ ಮನುಷ್ಯ ಸ್ವರ್ಗಕ್ಕಾಗಲಿ ನರಕಕ್ಕಾಗಲಿ ಹೋಗುತ್ತಾನೆ ಎಂಬುದನ್ನು ಕಥೋಲಿಕ್ ಕ್ರೈಸ್ತರೂ ನಂಬುತ್ತಾರೆ. ಸ್ವರ್ಗಕ್ಕೆ ಹೋದವರು ದೇವರ ಹತ್ತಿರದಲ್ಲಿದ್ದು ಆತನ ಪ್ರೀತಿಗೆ ಪಾತ್ರರಾಗಿರುತ್ತಾರೆ ಎಂದೂ ದೇವರು ಅವರು ಬೇಡಿಕೊಂಡದ್ದನ್ನು ನೀಡದೆ ಇರಲಾರನು ಎಂದೂ ಕಥೋಲಿಕ್ ಕ್ರೈಸ್ತರು ನಂಬುತ್ತಾರೆ. ಆದ್ದರಿಂದಲೇ ಸತ್ತವರ ಸಮಾಧಿಗಳ ಬಳಿ ಪ್ರಾರ್ಥಿಸುವ ಪದ್ಧತಿ ಕಥೋಲಿಕರಲ್ಲಿ ಇದೆ.

ಆದರ್ಶ ಜೀವನ ನಡೆಸಿ ಮರಣಹೊಂದಿದವರನ್ನು ಸಂತ ಪದವಿಗೇರಿಸುವ ಪದ್ಧತಿಯೂ ಇವರಲ್ಲಿದೆ. ಸಂತ ಪದವಿ ನೀಡುವುದೆಂದರೆ ಮರಣಹೊಂದಿದ ವ್ಯಕ್ತಿ ಸ್ವರ್ಗದಲ್ಲಿದ್ದಾನೆ ಎಂದು ಖಚಿತವಾಗಿ ಘೋಷಿಸುವುದಾಗಿದೆ. ಆತ ಸ್ವರ್ಗದಲ್ಲಿದ್ದಾನೆ ಎಂಬುದನ್ನು ಖಚಿತಪಡಿಸಿಕೊಳ್ಳಲು ಆತನಿಂದ ಒಂದಾದರೂ ಪವಾಡ ಸಂಭವಿಸಿದನ್ನು ಪರಿಶೀಲಿಸಲಾಗುತ್ತದೆ. ಇದಕ್ಕಾಗಿ ನೇಮಿಸಲ್ಪಟ್ಟ ಆಯೋಗವೊಂದು ಸಾಕ್ಷಿ ಪುರಾವೆಗಳನ್ನು ಪರಿಶೀಲಿಸಿ ತನ್ನ ಶಿಫಾರಸುಗಳನ್ನು ನೀಡುತ್ತದೆ. ಅಗತ್ಯವೆನಿಸಿದರೆ ಸಮಾಧಿಯನ್ನು ಅಗೆದು ಪರಿಶೀಲಿಸಲಾಗುತ್ತದೆ. ಸಾಬೀತಾದ ಮೊದಲ ಪವಾಡದ ನಂತರ ಆತನನ್ನು 'ದೇವರ ಸೇವಕ' ಎಂದು ಘೋಷಿಸಲಾಗುತ್ತದೆ. ಹೆಚ್ಚು ವ್ಯಾಪಕವಾದ ಇನ್ನೊಂದು ಪವಾಡ ಸಾಬೀತಾದ ನಂತರ ಆತನನ್ನು 'ಸಂತ' ಪದವಿಗೇರಿಸಿ ಆತನು ಪೂಜೆಗೆ ಅರ್ಹನೆಂದು ಘೋಷಿಸಲಾಗುತ್ತದೆ. ಸಂತ ಪದವಿಗೇರಿದವನ ಹೆಸರಿನಲ್ಲಿ ಚರ್ಚುಗಳನ್ನು ಕಟ್ಟಿಸಿ, ಪ್ರತಿಮೆಗಳನ್ನು ನಿರ್ಮಿಸಿ ಪೂಜಿಸಲಾಗುತ್ತದೆ.

ಒಬ್ಬನನ್ನು ಸಂತ ಪದವಿಗೇರಿಸುವುದು ಒಂದು ದೀರ್ಘ ಪ್ರಕ್ರಿಯೆ ಎಂದೂ ವ್ಯಾಪಕವಾದ ಪರಿಶೋಧದ ನಂತರವಷ್ಟೇ ಈ ಪ್ರಕ್ರಿಯೆ ಪೂರ್ಣಗೊಳಿಸಲಾಗುತ್ತದೆ ಎಂದು ಹೇಳಲಾಗುತ್ತದೆ. ಆದರೆ ಸಂತ ಪದವಿಗೆ ಏರಿಸಲ್ಪಟ್ಟ ಸಂತ ಜಾರ್ಜ್ ಮತ್ತು ಸಂತ ಫಿಲೋಮಿನಾ ಎಂಬ ಕಾಲ್ಪನಿಕ ವ್ಯಕ್ತಿಗಳನ್ನು ಸಂತ ಪದವಿಗೇರಿಸಿ ನೂರಾರು ವರ್ಷಗಳ ನಂತರ ಅವರನ್ನು ಸಂತ ಪದವಿಯಿಂದ ಕೆಳಗಿಳಿಸಿದ ಸಂಗತಿಯನ್ನು ನೋಡಿದರೆ ಈ ಇಡೀ ಪ್ರಕ್ರಿಯೆ ಹಲವು ಸಂದೇಹಗಳಿಗೆ ಎಡೆಮಾಡುತ್ತದೆ.

### ಪವಾಡದ ಸಾಕ್ಷಿ

ಮದರ್ ತೆರೇಸಾರಿಗೆ ಸಂತ ಪದವಿ ನೀಡಲು ಭಾರತದ ಮೋನಿಕಾ ಬೆಸ್ರಾ ಎಂಬ ಮಹಿಳೆ ನೀಡಿದ ಸಾಕ್ಷಿಯನ್ನು ಚರ್ಚ್ ಅಂಗೀಕರಿಸಿದೆ. ಬಹುದಿನಗಳ ವೈದ್ಯಕೀಯ ಚಿಕಿತ್ಸೆಯಿಂದ ಗುಣವಾಗದ ಆಕೆಯ ಉದರ ಕ್ಯಾನ್ಸರ್ ಮದರ್ ತೆರೇಸಾರಿಗೆ ಬೇಡಿಕೊಳ್ಳುವುದರೊಂದಿಗೆ 1998ರಲ್ಲಿ ಗುಣವಾಗಿದೆ ಎಂದು ಹೇಳಲಾಗುತ್ತಿದೆ. ಈ ಬಗ್ಗೆ ವೈದ್ಯಕೀಯ ವಲಯ ಆಕ್ಷೇಪ ವ್ಯಕ್ತಪಡಿಸಿದೆ.

ಮದರ್ ತೆರೇಸಾ ಜೀವಂತ ಇರುವಾಗ ರೋಗಿಗಳಿಗೆ ವೈದ್ಯಕೀಯ ಚಿಕಿತ್ಸೆ ನೀಡುತ್ತಿದ್ದರೇ ಹೊರತು ಅವರನ್ನು ಪ್ರಾರ್ಥನೆ ಪವಾಡಗಳಿಂದ

---

**ಒಬ್ಬನನ್ನು ಸಂತ ಪದವಿಗೇರಿಸುವುದು ಒಂದು ದೀರ್ಘ ಪ್ರಕ್ರಿಯೆ ಎಂದೂ ವ್ಯಾಪಕವಾದ ಪರಿಶೋಧದ ನಂತರವಷ್ಟೇ ಈ ಪ್ರಕ್ರಿಯೆ ಪೂರ್ಣಗೊಳಿಸಲಾಗುತ್ತದೆ ಎಂದು ಹೇಳಲಾಗುತ್ತದೆ. ಆದರೆ ಸಂತ ಪದವಿಗೆ ಏರಿಸಲ್ಪಟ್ಟ ಸಂತ ಜಾರ್ಜ್ ಮತ್ತು ಸಂತ ಫಿಲೋಮಿನಾ ಎಂಬ ಕಾಲ್ಪನಿಕ ವ್ಯಕ್ತಿಗಳನ್ನು ಸಂತ ಪದವಿಗೇರಿಸಿ ನೂರಾರು ವರ್ಷಗಳ ನಂತರ ಅವರನ್ನು ಸಂತ ಪದವಿಯಿಂದ ಕೆಳಗಿಳಿಸಿದ ಸಂಗತಿಯನ್ನು ನೋಡಿದರೆ ಈ ಇಡೀ ಪ್ರಕ್ರಿಯೆ ಹಲವು ಸಂದೇಹಗಳಿಗೆ ಎಡೆಮಾಡುತ್ತದೆ.**

---

ಗುಣಪಡಿಸುತ್ತಿರಲಿಲ್ಲ. ಸತ್ತ ಬಳಿಕ ಪವಾಡ ಮಾಡಿ ಭಕ್ತರ ರೋಗಗಳನ್ನು ಗುಣ ಮಾಡಲು ಆರಂಭಿಸಿರುವುದು ನಿಜವೆನ್ನುವುದಾದರೆ 'ಮಿಷನರಿಸ್ ಆಫ್ ಚಾರಿಟಿ" ವಿಶ್ವದ ಹಲವುಕಡೆ ಈಗ ನಡೆಸುತ್ತಿರುವ ಆಸ್ಪತ್ರೆಗಳನ್ನು ಬಂದ್ ಮಾಡಿ ಸಂತ ಮದರ್ ತೆರೇಸಾರವರ ಪವಾಡ ಕೇಂದ್ರಗಳಾಗಿ ಪರಿವರ್ತಿಸುವುದು ಸೂಕ್ತವಾಗುತ್ತದೆ ಎಂಬ ಟೀಕೆಯನ್ನು ತಳ್ಳಿಹಾಕಲಾಗದು.

ಮದರ್ ತೆರೆಸೇರವರ ದೀನರ ಸೇವೆಗೆ ಮುಡಿಪಾಗಿಟ್ಟ ಬದುಕು ಅನುಪಮವಾದುದು. ಅವರ ಸೇವೆ ಒಂದು ಧರ್ಮದ ವ್ಯಾಪ್ತಿಯಲ್ಲಿಯೇ ಇದ್ದೀತಾದರೂ ಅವರಲ್ಲಿದ್ದ ಮಾನವೀಯತೆ ಅಮೋಘವಾದುದು. ಕಾರ್ಗತ್ತಲಲ್ಲಿ ಮಿನುಗುವ ನಕ್ಷತ್ರಗಳಂತೆ ಹಸಿವು, ದಾರಿದ್ರ್ಯ ತುಂಬಿ ತುಳುಕುತ್ತಿರುವ ಬಂಡವಾಳಶಾಹಿ ಸಮಾಜದಲ್ಲಿ ಇಂತಹವರು ಮಿಂಚುತ್ತಾರೆ. ಬಡವರ ಬಗ್ಗೆ ಇವರು ತೋರಿದ ಅನುಕಂಪ ಅನುಕರಣೀಯವಾಗಿದ್ದರೂ ಬಡತನಕ್ಕೆ ಕಾರಣವಾದ ಈ ಬಂಡವಾಳಶಾಹಿ ವ್ಯವಸ್ಥೆಯನ್ನು

ಸರಿಪಡಿಸುವುದು ಅವರ ಗುರಿ ಆಗಿರಲ...
ಹಸಿವು, ಬಡತನ, ಅನ್ಯಾಯ, ಅಸಮಾನತೆ ಇ...
ಒಂದು ಸಮಾಜ ನಿರ್ಮಾಣ ಅವರ ಜೀವ...
ಉದ್ದೇಶವಾಗಿರಲಿಲ್ಲ. ಹೀಗಾಗಿ ಅವ...
ಬದುಕಿದ್ದಾಗಲೂ ವಿವಾದಗಳು ಅವ...
ಸುತ್ತುವರಿಯದೆ ಇರುತ್ತಿರಲಿಲ್ಲ, ಈಗ ಮ...
ಮಣ್ಣಾದ ಬಳಿಕವೂ ಪವಾಡದ ವಿವಾದವೊ...
ಅವರನ್ನು ಸುತ್ತುಹಾಕಿಕೊಂಡಿದೆ. ವಿ...
ಇತ್ಯಾರ್ಥವಾಗುವವರೆಗೂ ಕಾಯದೆ ಚರ್ಚ್...
ಪ್ರಕ್ರಿಯೆಯನ್ನು ಅವಸರದಲ್ಲಿ ಪೂರ್ಣಗೊಳಿ...
ಪ್ರಶ್ನಾರ್ಹವಾಗಿದೆ.

### ಬಚ್ಚಿಡಲಾಗದ ದ್ವೇಷ

ಧಾರ್ಮಿಕ ನಂಬಿಕೆಗಳಿಗೆ ತಾರ್ಕಿಕ ...
ಇರುವುದಿಲ್ಲ. ಪವಾಡಗಳು ಸಾಧ್ಯವಿಲ್ಲ ...
ವಿಜ್ಞಾನ ಸಾಬೀತುಪಡಿಸಿರುವಾಗಲೂ ಅ...
ಶಕ್ತಿಯನ್ನು ನಂಬುವ ವಿಜ್ಞಾನಿಗಳಿ...
ವೈದ್ಯರಿದ್ದಾರೆ! ತಮಗೆ ಅರ್ಥವಾಗದಿರುವ...
ಆ ಅಲೌಕಿಕ ಶಕ್ತಿಗೆ ಅವರು ಆರೋಪಿಸು...
ಇಂತಹ ತರ್ಕ ರಹಿತ ನಂಬಿಕೆಯೇ ...
ಮಸೀದಿ ಧ್ವಂಸಕ್ಕೆ ಮತ್ತು ಅಂದಿ...
ನಡೆಯುತ್ತಿರುವ ಕೋಮು ಗಲಭೆ...
ಕಾರಣವಾಗಿದೆ. ರಾಮನು ಅಲ್ಲಿಯೇ ಹು...
ಎಂಬ ನಂಬಿಕೆಯನ್ನು ಯಾ...
ಪ್ರಶ್ನಿಸುವಂತಿಲ್ಲವಂತೆ!

ಮಂದಿರವನ್ನು ಅಲ್ಲಿಯೇ ಕಟ್ಟಬೇಕು ...
ಪ್ರತಿಪಾದಿಸುತ್ತಿರುವ ಆರ್.ಎಸ್. ...
ಭಾರತದಲ್ಲಿ ಕ್ರೈಸ್ತ ಧರ್ಮ ಪ್ರಚಾರದಲ್ಲಿ ತೊ...
ಮದರ್ ತೆರೇಸಾ ಬಗ್ಗೆ ಆಕ್ಷೇಪ ವ್ಯಕ್ತಪ...
ತಾನು ಮಾತ್ರ ತರ್ಕರಹಿತ ನಂಬಿಕೆ...
ಇಟ್ಟುಕೊಳ್ಳಬಹುದು. ಆದರೆ ಬೇರೆ ಧರ್ಮ...
ಅದೇ ರೀತಿ ತರ್ಕರಹಿತ ನಂಬಿಕೆ...
ಇಟ್ಟುಕೊಳ್ಳಬಾರದು ಎಂಬುದೇ ಅವರ ...
ಮನುಷ್ಯರು ಕ್ರೈಸ್ತ ಧರ್ಮವನ್ನು ಒಪ್ಪಿಕೊಳ...
ಅವರಿಗೆ ಮೋಕ್ಷ ಸಿಗುವುದಿಲ್ಲ ಎಂಬುದು...
ನಂಬಿಕೆ. ಇಂತಹ ತರ್ಕರಹಿತ ನಂಬಿಕೆಗಳ...
ಧರ್ಮಗಳಲ್ಲಿ ಇವೆ. ಆದ್ದರಿಂದಲೇ ...
ಪ್ರಚಾರ ಮಾಡುವುದು ಕ್ರೈಸ್ತರಿಗೆ ಮುಖ್ಯ ಧ...
ಕರ್ತವ್ಯ. ಅದನ್ನು ಮದರ್ ತೆರೇಸಾ ಅವ...
ಮತಾಂಧ ಧಾರಾಸಿಂಗ್ ಹತ್ಯೆಗೈದ ಸ್ಟೈ...
ಅವರಾಗಲಿ ಧರ್ಮ ಪ್ರಚಾರ ಮ...
ಇರುವಂತಿರಲಿಲ್ಲ. ಕೆಲವರು ಪ್ರತ್ಯಕ್ಷ ...
ಕಾರ್ಯದ ಮೂಲಕ ಧರ್ಮಪ್ರ...
ಮಾಡುತ್ತಿದ್ದರೆ ಇನ್ನು ಕೆಲವರು ಜನ ಸೇ...
ಮೂಲಕ, ಮತ್ತೆ ಕೆಲವರು ವಿರಕ್ತ ...
ನಡೆಸುವ ಮೂಲಕ ಧರ್ಮ ಪ್ರ...
ಕಾರ್ಯದಲ್ಲಿ ತೊಡಗಿರುತ್ತಾರೆ. ನಮ್ಮ ...
ಸೆಕ್ಯೂಲರ್ ಸಂವಿಧಾನವು ಎಲ್ಲರಿಗೂ ಧ...
ಸ್ವಾತಂತ್ರ್ಯವನ್ನು ನೀಡಿದೆ. ಧರ್ಮ ಪ್ರಚ...
ಹಕ್ಕಿನ ಭಾಗವಾಗಿದೆ. ಸ್ವ ಇಚ್ಛೆಯಿಂದ ...
ಧರ್ಮವನ್ನು ಬಿಟ್ಟು ಇನ್ನೊಂದು ಧರ್ಮ...
ಸ್ವೀಕರಿಸುವುದೂ ಈ ಹಕ್ಕಿನ ಭಾಗ...
ವಿಶ್ವದಲ್ಲೆಲ್ಲಾ ಹಿಂದು ಧರ್ಮ ಪ್ರಸಾರಕ...
ಹಿಂದು ಪರಿಷತ್ ಅನ್ನು ಸ್ಥಾಪಿಸಿಕೊಂಡಿರ...
ಭಾರತದಲ್ಲಿ ಅನ್ಯ ಧರ್ಮಗಳ ಪ್ರಸಾ...
ವಿರೋಧಿಸುತ್ತಿರುವುದು ತರ್ಕಹೀನ...
ಇಂತಹ ತರ್ಕಹೀನ ಮನಸ್ಸುಗಳು ...
ತೆರೇಸಾ ಬಗ್ಗೆಯಾಗಲಿ, ಧಾರ್ಮಿ...
ಸಂಖ್ಯಾತರ ಬಗ್ಗೆಯಾಗಲಿ ಅ...
ವ್ಯಕ್ತಪಡಿಸುವುದರಲ್ಲಿ ಆಶ್ಚರ್ಯವಿಲ್ಲ.
ಧಾರ್ಮಿಕ ಅಸಹನೆಯನ್ನು ವಿರೋಧಿಸ...
ಎಲ್ಲ ವಿಧದ ಅಂಧ ವಿಶ್ವಾಸದಿಂದ ಮ...
ವಾತಾವರಣದಲ್ಲಿ ಮಾತ್ರ ನಮ್ಮ ನಡುವ...
ಆರೋಗ್ಯಕರವಾದ ಸಮಾಜ ನಿರ್ಮಾ...
ಎಂಬುದನ್ನು ಅರಿಯುವುದು ಅಗತ್ಯವಿ...

• ರೆಜ...

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ.12. 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462.
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.

Printed & Published by Communist Party of India(Marxist), Karnataka State Committee. Editor: S.Y.GURUSHANTH